ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 19 ಭಾನುವಾರ 2023


ಸಂಪುಟ: 43 | ಸಂಚಿಕೆ: 329 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮಹದೇಶ್ವರಬೆಟ್ಟದಲ್ಲಿ 108 ಅಡಿಯ ಮಾದಪ್ಪನ ಪ್ರತಿಮೆ ಲೋಕಾರ್ಪಣೆ



ಈ ಭಾಗದಲ್ಲಿ ಎಲ್ಲೇ ನಿಂತು ನೋಡಿದರೂ ಮಾದಪ್ಪನ ದರ್ಶನವಾಗುತ್ತದೆ: ಮುಖ್ಯಮಂತ್ರಿ ಬೊಮ್ಮಾಯಿ

ಚಾಮರಾಜನಗರ, ಮಾ.18 (ಎಸ್‌ಎಸ್)– ಪ್ರಖ್ಯಾತ ಧಾರ್ಮಿಕ ಶ್ರೀ ಕ್ಷೇತ್ರ ಮಲೆ ಮಹದೇಶ್ವರಬೆಟ್ಟದಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿಯ 108 ಅಡಿ ಎತ್ತರದ ಬೃಹತ್ ಪ್ರತಿಮೆಯನ್ನು ಶನಿವಾರ ಮಧ್ಯಾಹ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆಗೊಳಿಸಿದರು.

ದೀಪದಗಿರಿ ಒಡ್ಡುವಿನಲ್ಲಿ ನಿರ್ಮಾಣವಾಗಿರುವ ಸ್ವಾಮಿಯ ಬೃಹತ್ ಪ್ರತಿಮೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಸಚಿವರಾದ ವಿ.ಸೋಮಣ್ಣ, ಎಸ್.ಟಿ. ಸೋಮಶೇಖರ್, ಶಾಸಕರಾದ ಆರ್. ನರೇಂದ್ರ, ಎನ್. ಮಹೇಶ್ ಅವರೊಂದಿಗೆ ಕ್ರೇನ್ ಏರಿದ ಮುಖ್ಯಮಂತ್ರಿಗಳು ಪುಷ್ಪ ನಮನ ಸಲ್ಲಿಸಿದರು. ನಂತರ ಮಾದಪ್ಪನ ದೇವಸ್ಥಾನಕ್ಕೆ ತೆರಳಿ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಇದೇ ವೇಳೆ ಬೆಳ್ಳಿ ರಥ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗೆ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಮನುಷ್ಯನ ಭಾವನೆಗಳು ಹಲವು ಸಂದರ್ಭದಲ್ಲಿ ಸ್ಥಳದ ಮೇಲೆ ▶ 9ನೇ ಪುಟಕ್ಕೆ

- 108 ಅಡಿ ಎತ್ತರದ ಪ್ರತಿಮೆ
- 20 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ
- 2016 ಸೆಪ್ಟೆಂಬರ್‌ನಲ್ಲಿ ಯೋಜನೆ ಘೋಷಣೆ
- 2019 ಫೆಬ್ರವರಿಯಲ್ಲಿ ಕಾಮಗಾರಿಗೆ ಚಾಲನೆ
- ಗದಗದ ಸಿಎಸ್‌ಪಿ ಆರ್ಕಿಟೆಕ್ಟ್‌ನಿಂದ ನಿರ್ಮಾಣ
- ಮುರ್ಡೇಶ್ವರದ ಶಿವನ ಮೂರ್ತಿ, ಬಸವ ಕಲ್ಯಾಣದ ಬೃಹತ್ ಬಸವಣ್ಣ ಪ್ರತಿಮೆಗಳನ್ನು ನಿರ್ಮಿಸಿದ ಶಿಲ್ಪಿ ಶ್ರೀಧರ್ ಮಾದಪ್ಪನ ಪ್ರತಿಮೆಯ ರೂವಾರಿ
- 2023ರಲ್ಲಿ ತ್ರಿಶೂಲ ದಾರಿ ಮಾದಪ್ಪನ ಪ್ರತಿಮೆ ಪೂರ್ಣ

ಕಾಡಂಚಿನ ಜನರ ಸಮಸ್ಯೆಗೆ ಎರಡು ದಿನದಲ್ಲಿ ಪರಿಹಾರ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಚಾಮರಾಜನಗರ, ಮಾ.18(ಎಸ್‌ಎಸ್)–ಹನೂರು ತಾಲೂಕಿನ ಮಹದೇಶ್ವರಸ್ವಾಮಿ ಬೆಟ್ಟದ ಕಾಡಂಚಿನ ಗ್ರಾಮಗಳ ಜನರ ಸಮಸ್ಯೆಗಳನ್ನು ಇನ್ನು ಎರಡು ದಿನಗಳಲ್ಲಿ ಪರಿಹರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಈ ಭಾಗದ ಕಾಡಂಚಿನ ಗ್ರಾಮಗಳ ಶಾಲೆ, ಆಸ್ಪತ್ರೆ, ಸಂಪರ್ಕ ರಸ್ತೆ ಸೇರಿದಂತೆ ಎಲ್ಲಾ ವಿಚಾರಗಳ ಬಗ್ಗೆ ವರದಿ ನೀಡುವಂತೆ ಈ ಹಿಂದೆ ಬೆಟ್ಟಕ್ಕೆ ಭೇಟಿ ನೀಡಿದಾಗ ಜಿಲ್ಲಾಧಿಕಾರಿಗೆ ಸೂಚಿಸಲಾಗಿತ್ತು. ಅದರಂತೆ ಅವರು ವರದಿ ಕಳುಹಿಸಿಕೊಟ್ಟಿದ್ದು, ಈ ವರದಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಜಾಗೇರಿ ಗ್ರಾಮದ ರೈತರ ಭೂಮಿ ಸಮಸ್ಯೆ ಸಂಬಂಧ ಸರ್ವೆ ಕಾರ್ಯ ಮುಗಿದಿದೆ. ಸ್ವಲ್ಪ ತಾಂತ್ರಿಕ ಅಡಚಣೆಯಿದ್ದು, ಮೂರ್‍ನಾಲ್ಕು ದಿನಗಳಲ್ಲಿ ಆದೇಶಗಳನ್ನು ಹೊರಡಿಸಲಾಗುವುದು. ಈ ಭಾಗದ ರೈತರಿಗೆ ನ್ಯಾಯ ದೊರಕಿಸಿ ಕೊಡುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಅದ್ಭುತವಾದ ಮೂರ್ತಿ

ಮಾದಪ್ಪನ ಈ ಮೂರ್ತಿ ಅದ್ಭುತವಾಗಿದ್ದು, ಜೀವಕಳೆ ಇದೆ. ನಿಜವಾಗಿಯೂ ಮಹದೇಶ್ವರಸ್ವಾಮಿ ಅವರೇ ಬಂದು ಬೆಟ್ಟದ ಮೇಲೆ ಪ್ರತ್ಯಕ್ಷವಾಗಿದ್ದಾರೆ ಅನಿಸುತ್ತದೆ. ಈ ಮಹದೇಶ್ವರಸ್ವಾಮಿ ಪ್ರತಿಮೆ ಕಾಲಾತೀತವಾದದ್ದು, ಶಾಶ್ವತವಾಗಿ ಎಲ್ಲ ಕಾಲದಲ್ಲಿ ನಿಲ್ಲುವಂತಹ ಪ್ರತಿಮೆಯನ್ನು ನಿರ್ಮಾಣ ▶ 9ನೇ ಪುಟಕ್ಕೆ

ಮೈಸೂರು– ಬೆಂಗಳೂರು ರಸ್ತೆ ಸಮಸ್ಯೆಗೆ ಶೀಘ್ರವೇ ಪರಿಹಾರ

ರಾಮನಗರದ ಬಳಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಅಂಡರ್ ಪಾಸ್‌ನಲ್ಲಿ ಮಳೆ ನೀರು ನಿಂತು ಉಂಟಾಗಿರುವ ಸಮಸ್ಯೆ ಸೇರಿದಂತೆ ಅಲ್ಲಲ್ಲಿ ಉಂಟಾಗಿರುವ ಎಲ್ಲ ಗೊಂದಲಗಳನ್ನು ಶೀಘ್ರವೇ ಪರಿಹರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಳೆ ಬಂದಾಗ ಸಣ್ಣಪುಟ್ಟ ಸಮಸ್ಯೆಗಳಾಗುವುದು ಸಹಜ. ಇದನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸರಿಪಡಿಸಲಿದೆ ಎಂದರು. ▶ 9ನೇ ಪುಟಕ್ಕೆ

ಅಪ್ಪಚೆಟ್ಟೋಳಂಡ ಹಾಕಿ ಉತ್ಸವಕ್ಕೆ ಮುಖ್ಯಮಂತ್ರಿ ಚಾಲನೆ




ಕೊಡಗು ಜಿಲ್ಲೆ ನಾಪೋಕ್ಲು ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಶನಿವಾರದಿಂದ ಆರಂಭವಾದ ಕೊಡವ ಕುಟುಂಬಗಳ 23ನೇ ವರ್ಷದ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ–2023ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೊಡವ ಸಾಂಪ್ರದಾಯಿಕ ಉಡುಪು ತೊಟ್ಟು ಚಾಲನೆ ನೀಡಿದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರುಗಳಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚುರಂಜನ್, ಅಪ್ಪಚೆಟ್ಟೋಳಂಡ ಹಾಕಿ ಕಪ್ ಉತ್ಸವದ ಆಯೋಜಕರನ್ನು ಚಿತ್ರದಲ್ಲಿ ಕಾಣಬಹುದು. [ಪೂರ್ಣ ಸಚಿತ್ರ ವರದಿ ಪುಟ: 8]

ಮಾ.26ರಂದು ಮೈಸೂರಲ್ಲಿ ಜೆಡಿಎಸ್ ಮಹಾ ಶಕ್ತಿ ಪ್ರದರ್ಶನ

- ಬಂಡೀಪಾಳ್ಯ ಬಳಿ ಚಾಮುಂಡಿಬೆಟ್ಟ ತಪ್ಪಲ 100 ಎಕರೆ ಪ್ರದೇಶದಲ್ಲಿ ಪಂಚರತ್ನ ಯಾತ್ರೆಯ ಭಾರೀ ಸಮಾರೋಪ ಸಮಾವೇಶ
- 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರ ಸೇರಿಸುವ ನಿರ್ಧಾರ
- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೇ ಸಮಾವೇಶದ ಕೇಂದ್ರಬಿಂದು

ಬೆಂಗಳೂರು, ಮಾ. 18 (ಕೆಎಂಶಿ)– ಬಿಜೆಪಿ–ಕಾಂಗ್ರೆಸ್‌ಗೆ ಸಮಬಲವಾಗಿ ಹೋರಾಟ ನಡೆಸಿ ಅಧಿಕಾರ ಹಿಡಿಯಲು ಪಣ ತೊಟ್ಟಿರುವ ಜೆಡಿಎಸ್, ಮೈಸೂರಿನಲ್ಲಿ ಬೃಹತ್ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ.

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜನರ ಮನ ಗೆಲ್ಲಲು 3 ಪ್ರಮುಖ ಭರವಸೆಗಳನ್ನು ಘೋಷಿಸಲು ಪಕ್ಷ ತೀರ್ಮಾನಿಸಿದೆ. ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ನೂರು ಎಕರೆ ಪ್ರದೇಶದಲ್ಲಿ ಇದೇ 26ರಂದು ಶಕ್ತಿ ಪ್ರದರ್ಶನ ನಡೆಯಲಿದ್ದು, ಈ ಸಮಾವೇಶಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು, ಸ್ಥಳೀಯ ನಾಯಕರನ್ನು ಹೊರತುಪಡಿಸಿ ಉಳಿದ ಪಕ್ಷದ ಎಡಪಂಥೀಯ ಪಕ್ಷಗಳ ನಾಯಕರಿಗೆ ಆಹ್ವಾನ ನೀಡುತ್ತಿಲ್ಲ.




ಆದರೆ, ಬಹು ಉದ್ದೇಶಿತ ಬೆಂಗಳೂರಿನಿಂದ ಮೈಸೂರಿನವರೆಗೆ ನಡೆಸಲು ತೀರ್ಮಾನಿಸಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದ ರೋಡ್ ಶೋ ರದ್ದಾಗಿದೆ.

ಪಕ್ಷದ ಕಚೇರಿಯಲ್ಲಿಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ಬೃಹತ್ ಸಮಾವೇಶ ನಡೆಸುವ ಸಂಬಂಧ ಹಳೇ ಮೈಸೂರು ಭಾಗದ ▶ 9ನೇ ಪುಟಕ್ಕೆ

ದೇವೇಗೌಡರ ಭೇಟಿಯಾದ ಪಂಚಮಸಾಲಿ ಸಮುದಾಯದ ಜಯಮೃತ್ಯುಂಜಯ ಸ್ವಾಮೀಜಿ

ಗೌಡರ ಆರೋಗ್ಯ ವಿಚಾರಿಸುವುದಷ್ಟೇ ಉದ್ದೇಶವೆಂದ ಕುಮಾರಸ್ವಾಮಿ



ಬೆಂಗಳೂರು, ಮಾ.18 (ಕೆಎಂಶಿ)–ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ ಕುರಿತು ಹೋರಾಟ ನಡೆಸುತ್ತಿರುವ ಜಯಮೃತ್ಯುಂಜಯ ಸ್ವಾಮೀಜಿ ಅವರು ಇಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಭೇಟಿ ಮಾಡಿದರು. ಪದ್ಮನಾಭನಗರದಲ್ಲಿರುವ ಗೌಡರ ನಿವಾಸಕ್ಕೆ ಇಂದು ಬೆಳಗ್ಗೆ ಭೇಟಿ ನೀಡಿದ ಶ್ರೀಗಳು, ದೇವೇಗೌಡರ ಆರೋಗ್ಯ ವಿಚಾರಿಸಿದರು. ನಂತರ ಪಂಚಮಸಾಲಿ ಸಮಾಜದ ಮೀಸಲಾತಿ ಕುರಿತಂತೆ ಗೌಡರ ಜೊತೆ ಚರ್ಚೆ ನಡೆಸಿದರೆನ್ನಲಾಗಿದೆ. ಈ ಸಂದರ್ಭದಲ್ಲಿ ಹಾಜರಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮಾಧ್ಯಮಗಳ ಜೊತೆ ಮಾತನಾಡಿ, ದೇವೇಗೌಡರ ಆರೋಗ್ಯ ವಿಚಾರಿಸಲು ಶ್ರೀಗಳು ಬಂದಿದ್ದರು. ಯಾವುದೇ ರಾಜಕೀಯ ಚರ್ಚೆ ಆಗಿಲ್ಲವೆಂದರು. ▶ 9ನೇ ಪುಟಕ್ಕೆ

ಕೋಲಾರ ಬೇಡ ವರುಣಾದಲ್ಲಿ ಸ್ಪರ್ಧಿಸಿ: ಸಿದ್ದರಾಮಯ್ಯರಿಗೆ ರಾಹುಲ್‌ಗಾಂಧಿ ಸಲಹೆ



ಬೆಂಗಳೂರು, ಮಾ. 18 (ಕೆಎಂಶಿ)– ಕೋಲಾರ ವಿಧಾನಸಭಾ ಕ್ಷೇತ್ರದಲ್ಲಿ ನಿಲ್ಲಬೇಡಿ. ನೀವು ನಿಮ್ಮ ತವರು ಮೈಸೂರಿನ ವರುಣಾ ವಿಧಾನಸಭಾ ಕ್ಷೇತ್ರದಿಂದಲೇ ಸ್ಪರ್ಧಿಸಿ ಎಂದು ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ಮಾಡಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಕೇಂದ್ರ ಚುನಾವಣಾ ಸಮಿತಿ ನಡೆಸುತ್ತಿರುವ ಸಭೆಯಲ್ಲಿ ರಾಹುಲ್ ನೇರವಾಗಿ ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದಾರೆ.

ನೀವು ನಾಯಕರು, ಹೊಸ ಕ್ಷೇತ್ರದಲ್ಲಿ ಸ್ಪರ್ಧಿಸಿ ಅಲ್ಲಿಯೇ ಹೆಚ್ಚು ನೀವು ನಿಮ್ಮನ್ನು ತೊಡಗಿಸಿಕೊಂಡರೆ, ರಾಜ್ಯಾದ್ಯಂತ ಪ್ರವಾಸ ಮಾಡಿ ಮತಗಳಿಸುವ ಶಕ್ತಿ ಪಕ್ಷಕ್ಕೆ ಕಡಿಮೆಯಾಗಲಿದೆ. ▶ 9ನೇ ಪುಟಕ್ಕೆ


ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಪ್ರಯತ್ನದಲ್ಲಿ ಮೈಸೂರು ಮುಕ್ತ ವೇದಿಕೆಯ ಮೂಲಕ 'ನಾಗರಿಕ ಜಾಗೃತಿ' ಸಂದೇಶ

ಮೈಸೂರು, ಮಾ.18(ಎಂಕೆ)–ಭ್ರಷ್ಟ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಮೂಲಕ ಪ್ರಜಾಪ್ರಭುತ್ವದ ಉಳಿವಿನೊಂದಿಗೆ ದೇಶದ ಸರ್ವಾಂಗೀಣ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಮತದಾರರು ಮತಗಟ್ಟೆಗೆ ತೆರಳಿ ಅರ್ಹ ಅಭ್ಯರ್ಥಿಗೆ ಮತ ನೀಡಬೇಕು ಎಂಬ ನಾಗರಿಕ ಜಾಗೃತಿ ಸಂದೇಶವನ್ನು ಮೈಸೂರು ಮುಕ್ತ ವೇದಿಕೆ (**Mysore Open Forum**) ಮೂಲಕ ರವಾನಿಸಲಾಯಿತು. ಮೈಸೂರು ವಿವಿ ಮಾನಸಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಭಾಂಗಣದಲ್ಲಿ ಮೈಸೂರು ಮುಕ್ತ ವೇದಿಕೆ ವತಿಯಿಂದ ಆಯೋಜಿಸಿದ್ದ 'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಮಾರ್ಗ' ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಮತದಾನ ಮಾಡುವಾಗ ಚುನಾವಣಾ ಕಣದಲ್ಲಿರುವ ಅಭ್ಯರ್ಥಿ ವಿದ್ಯಾವಂತನಾ... ಬುದ್ಧಿವಂತನಾ... ಯಾವುದಾದರೂ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನಾ... ಅಥವಾ ಇಲ್ಲವಾ... ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುವ ನಂಬಿಕಸ್ಥನಾ... ಎಂಬಿತ್ಯಾದಿ ಮೌಲ್ಯಯುತ ಅಂಶಗಳನ್ನು ಗಮನಿಸಿ, ತಮ್ಮ ಮನಸ್ಸಿಗೆ ಸೂಕ್ತ ಅಥವಾ ಅರ್ಹ ಎಂಬುದನ್ನರಿತು ಎಚ್ಚರಿಕೆಯಿಂದ ಮತದಾನ ಮಾಡುವಂತೆ ಜಾಗೃತಿ ಮೂಡಿಸಲಾಯಿತು.

ಉಚಿತಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಕುಸಿತ

–ಅಶ್ವಿನಿ ರಂಜನ್

ಕಾರ್ಯಕ್ರಮದ ಆರಂಭದಲ್ಲಿ ಪ್ರಥಮ್ ಮೈಸೂರು ಸಂಸ್ಥಾಪಕ ಟ್ರಸ್ಟಿ ಅಶ್ವಿನಿ ರಂಜನ್, ತಮ್ಮ ಆಶಯ ಭಾಷಣದಲ್ಲಿ ಮೈಸೂರು ಮುಕ್ತ ವೇದಿಕೆಯ ಉದ್ದೇಶಗಳ ತಿಳಿಸಿ, ಇತ್ತೀಚೆಗೆ ಲೋಕಾಯುಕ್ತ ದಾಳಿ ವೇಳೆ ಸರ್ಕಾರಿ ಅಧಿಕಾರಿಯೊಬ್ಬರ ಮನೆಯಲ್ಲಿ ಸಿಕ್ಕಿದ ರಾಶಿ ರಾಶಿ ಹಣದ ಬಗ್ಗೆ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿದ್ದ ವರದಿಯನ್ನು ತೋರಿಸುತ್ತಾ ಈ ಚಿತ್ರ ವರದಿಯೇ ಭ್ರಷ್ಟ ವ್ಯವಸ್ಥೆ ಕುರಿತು ಸಾವಿರ ಪದಗಳಲ್ಲಿ ಹೇಳಲಿದೆ. ಚುನಾವಣೆಯಲ್ಲಿ ಗೆದ್ದು ಎಂಎಲ್‌ಎ ಅಥವಾ ಎಂಪಿಯಾದರೆ ಸಾಕು ಭ್ರಷ್ಟಾಚಾರದಲ್ಲಿ ಭಾಗಿಯಾಗುವವರ ಸಂಖ್ಯೆ ಹೆಚ್ಚಾಗಿರುತ್ತದೆ ಎನ್ನುತ್ತಲೇ ಮತದಾನ ಎಂಬುದು ಅತೀ ಮುಖ್ಯವಾದುದು, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಾದರೆ ಸೂಕ್ತ ಅಭ್ಯರ್ಥಿ ಆಯ್ಕೆ ಮಾಡುವುದು ಅಷ್ಟೇ ಮುಖ್ಯವಾಗುತ್ತದೆ ಎಂದು ತಿಳಿಸಿದರು.



ನೋಟಾ ಮತ: ತಮ್ಮ ಕ್ಷೇತ್ರದಲ್ಲಿ ಅರ್ಹ ಅಭ್ಯರ್ಥಿ ಸ್ಪರ್ಧಿಸದಿದ್ದಲ್ಲಿ 'ನೋಟಾ' ಗೆ ಮತ ಹಾಕಬಹುದು. ಈ ಮೂಲಕ ತಮ್ಮ ಕ್ಷೇತ್ರದಲ್ಲಿ ಅರ್ಹ ಅಭ್ಯರ್ಥಿ ಇಲ್ಲ ಎಂಬುದನ್ನು ತಿಳಿಸಿದರೆ, ಮುಂದಿನ ದಿನಗಳಲ್ಲಿ ▶ 6ನೇ ಪುಟಕ್ಕೆ

ಹಣ ಮತ್ತು ತೋಳ್ಬಲದಿಂದ ಪ್ರಜಾಪ್ರಭುತ್ವ ಹಾಳಾಗುತ್ತಿದೆ....

–ರವಿ ಜೋಷಿ

2008ರ ಲೋಕಸಭಾ ಚುನಾವಣೆಗೆ ಹೋಲಿಕೆ ಮಾಡಿದರೆ ಕ್ರಿಮಿನಲ್‌ಗಳ ಸಂಖ್ಯೆ 10 ಪಟ್ಟು ಹೆಚ್ಚಾಗಿದ್ದು, ಹಣ ಮತ್ತು ತೋಳ್ಬಲದಿಂದ ಪ್ರಜಾಪ್ರಭುತ್ವ ಹಾಳಾಗುತ್ತಿದೆ ಎಂದು ಕ್ಯಾಬಿನೆಟ್ ಕಾರ್ಯಾಲಯದ ಮಾಜಿ ಅಧಿಕಾರಿ ರವಿ ಜೋಷಿ ಬೇಸರ ವ್ಯಕ್ತಪಡಿಸಿದರು. 'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಮಾರ್ಗ' ಜಾಗೃತಿ ಕಾರ್ಯಕ್ರಮದಲ್ಲಿ 'ಹಣ ಮತ್ತು ತೋಳ್ಬಲ' ಕುರಿತು ಮಾತನಾಡಿದ ಅವರು, ಚುನಾವಣೆಯಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ಶಾಸಕ ಮತ್ತು ಸಂಸದರ ಸಂಖ್ಯೆ ಹೆಚ್ಚುತ್ತಲೇ ಇದೆ. ಜೈಲುವಾಸ ಅನುಭವಿಸಿ ಬಂದವರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿ, ಜಯ ಗಳಿಸುವ ವ್ಯವಸ್ಥೆ ಇದೆ ಎಂದು ವಿಷಾದಿಸಿದರು. ಪಕ್ಷಗಳಿಗೆ ಆದಾಯವೂ ಹೆಚ್ಚಾಗುತ್ತಿದ್ದು, ಹಣದ ಹೊಳೆಯೇ ಹರಿದು ಬರುತ್ತಿದೆ. ಅದರಲ್ಲಿ ಬಿಜೆಪಿಯ ಪಾರ್ಟಿ ಫಂಡ್ ಹೆಚ್ಚಾಗಿದೆ. ಕ್ರಿಮಿನಲ್‌ಗಳು ಗೆಲ್ಲುವ ಪ್ರಮಾಣ ಶೇ.22 ರಷ್ಟಿದ್ದರೆ, ಯಾವುದೇ ಪ್ರಕರಣದಲ್ಲಿ ಭಾಗಿಯಾಗದವರ ಗೆಲುವಿನ ಪ್ರಮಾಣ ಶೇ.9ರಷ್ಟಿದೆ. ಕ್ರಿಮಿನಲ್ ಹಿನ್ನೆಲೆಯುಳ್ಳ ಮಹಿಳಾ ಶಾಸಕರು, ಸಂಸದರ ಪ್ರಮಾಣ ಕಡಿಮೆ ಇರುವುದರಿಂದ ಮಹಿಳಾ ಅಭ್ಯರ್ಥಿಗಳನ್ನು ಬೆಂಬಲಿಸುವುದು ಸೂಕ್ತವಾಗಿದೆ.



ರಾಜಕೀಯ ಪಕ್ಷ ನಿಯಂತ್ರಣಕ್ಕೆ ಪ್ರತ್ಯೇಕ ಸೂಕ್ತ ಕಾನೂನು ಅಗತ್ಯ

–ಪ್ರೊ.ಎಂ.ಉಮಾಪತಿ

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಯಾಗದೆ ಭ್ರಷ್ಟಾಚಾರ ರಹಿತ ಉತ್ತಮ ಸರ್ಕಾರ ನಿರೀಕ್ಷಿಸಲಾಗದು ಎಂದು ಮೈಸೂರು ಮುಕ್ತ ವೇದಿಕೆ ಸಂಚಾಲಕ ಪ್ರೊ.ಎಂ.ಉಮಾಪತಿ ಅಭಿಪ್ರಾಯಿಸಿದರು. 'ಚುನಾವಣಾ ಸುಧಾರಣೆಗಳ ಅಗತ್ಯತೆ' ಕುರಿತು ಮಾತನಾಡಿದ ಅವರು, ಮಾನವ ಇತಿಹಾಸದಲ್ಲಿ ರಾಜಕೀಯ ಅತೀ ದೊಡ್ಡ ಕಸರತ್ತಾಗಿದೆ. ಚುನಾವಣೆಗಳಲ್ಲಿ ಹಣ ಮತ್ತು ಅಪರಾಧಿಗಳ ಪಾತ್ರ ಪ್ರಧಾನವಾಗಿದೆ. ಹಾಗಾಗಿ ಭ್ರಷ್ಟಾಚಾರವೂ ವಿಪರೀತವಾಗಿದೆ. ಎಲ್ಲಿ ಜನ ಬರುತ್ತಾರೋ ಅಲ್ಲಿ ಜಾತಿ, ಆಹಾರ, ಉಡುಗೊರೆ ಎಲ್ಲವೂ ಹೆಚ್ಚಾಗಿರುತ್ತದೆ. 'ಹಸಿದವನಿಗೆ ದೇವರು ಆಹಾರ ರೂಪದಲ್ಲೇ ಕರುಣಿಸಲಿ' ಎಂದು ಸ್ವಾಮಿ ವಿವೇಕಾನಂದರೇ ಹೇಳಿದ್ದಾರೆ. ಹಾಗಾಗಿ ಹಸಿವಿನಿಂದ ಬಳಲುತ್ತಿರುವವರು ಊಟ ಬೇಡ ಎನ್ನಲು ಸಾಧ್ಯವಿಲ್ಲ. ಆದರೆ ಹಣ ಬಲ ಪ್ರಯೋಗ ಹೆಚ್ಚಾಗಿರುವುದು ಆತಂಕಕಾರಿ ಎಂದರು. ಚುನಾವಣೆ ಸಂದರ್ಭದಲ್ಲಿ ಹಣ, ಸೀರೆ ಹಂಚಿದ್ದು, ದೇವರ ಮೇಲೆ ಆಣೆ ಮಾಡಿಸಿದ್ದು, ತೆಂಗಿನಕಾಯಿ ಹಿಡಿಸಿ ವಾಗ್ದಾನ ಮಾಡಿಸಿದ್ದು, ಇಂತಹ ಸುದ್ದಿಗಳನ್ನು ದಿನಂಪ್ರತಿ ನೋಡುತ್ತೇವೆ. ಎಲ್ಲಾ ಭ್ರಷ್ಟಾಚಾರಕ್ಕೆ ಚುನಾವಣೆಯೇ ತಾಯಿ. ಈ ಪರಿಸ್ಥಿತಿಯಲ್ಲಿ ▶ 6ನೇ ಪುಟಕ್ಕೆ



ಮತದಾನ ಪ್ರಮಾಣ ಹೆಚ್ಚಿಸಲು ಮೈಸೂರು ಮುಕ್ತ ವೇದಿಕೆಯ ಮೊದಲ ಹೆಜ್ಜೆ....

–ಕೆ.ಬಿ.ಗಣಪತಿ

ಮೈಸೂರು ಮುಕ್ತ ವೇದಿಕೆಯ ಮುಖ್ಯ ಉದ್ದೇಶ ಮತದಾನ ಪ್ರಮಾಣವನ್ನು ಹೆಚ್ಚಿಸುವುದಾಗಿದೆ. ಈ ನಿಟ್ಟಿನಲ್ಲಿ ಇದು ವೇದಿಕೆಯ ಮೊದಲ ಹೆಜ್ಜೆ ಎಂದು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅಭಿಪ್ರಾಯಪಟ್ಟರು.



'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಮಾರ್ಗ' ಕುರಿತು ಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ನೆರೆದಿದ್ದವರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಕಾರ್ಯಕ್ರಮದ ಮುಖ್ಯ ಉದ್ದೇಶ ಮತದಾನದ ಪ್ರಮಾಣವನ್ನು ಹೆಚ್ಚಿಸುವುದು ಹಾಗೂ ಮತದಾರರಲ್ಲಿ ಜಾಗೃತಿ ಮೂಡಿಸುವುದಾಗಿದೆ. ಅದರಲ್ಲೂ ಮುಖ್ಯವಾಗಿ ನಾವು ಮತದಾನ ಮಾಡುವುದರಿಂದ ಏನೂ ಪ್ರಯೋಜನವಿಲ್ಲ ಎಂಬ ಮನಸ್ಥಿತಿ ಉಳ್ಳವರನ್ನು ಮತಗಟ್ಟೆಗೆ ಬರುವಂತೆ ಮಾಡುವುದಾಗಿದೆ. ಸದಾ ಆಕಾಶದಲ್ಲಿ ಹಾರಾಡುವ ವ್ಯೋಮ ಪಕ್ಷಿಯಂತೆ ನಾವು ವರ್ತಿಸಬಾರದು. ಅದಕ್ಕೆ ಮಳೆ ಹನಿಯೇ ಆಹಾರ. ನಾವುಗಳು ಅದರಂತಾಗದೆ ಬದಲಾವಣೆಗಾಗಿ ಮತದಾನ ಪ್ರಮಾಣವನ್ನು ಹೆಚ್ಚಿಸಿ, ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು ಎಂದರು. ರೋಂ ನಗರವನ್ನು ಒಮ್ಮೆಗೆ ಕಟ್ಟಲಿಲ್ಲ. ▶ 6ನೇ ಪುಟಕ್ಕೆ

ಇಂದು ಟಿಪ್ಪು ನಿಜಕನಸುಗಳು ಸುವರ್ಣ ಪ್ರದರ್ಶನ ಸಂಭ್ರಮ



ಮೈಸೂರು,ಮಾ.18–2022–23ನೇ ಸಾಲಿನಲ್ಲಿ ಸಿದ್ಧಪಡಿಸಿದ 'ಟಿಪ್ಪು ನಿಜಕನಸುಗಳು' ಎಂಬ ನಾಟಕದ 50ನೇ ಪ್ರದರ್ಶನ ಮಾ.19ರಂದು ಭೂಮಿಗೀತ ರಂಗಮಂದಿರದಲ್ಲಿ ನಡೆಯಲಿದ್ದು, ಪ್ರದರ್ಶನದ ಅಂಗವಾಗಿ ಮಾ.19ರ ಬೆಳಗ್ಗೆ 11 ಗಂಟೆಗೆ 'ಸತ್ಯದ ಅನಾವರಣದ ಸುವರ್ಣ ಪ್ರದರ್ಶನ ಸಂಭ್ರಮ' ಕಾರ್ಯಕ್ರಮವನ್ನು ರಂಗಾಯಣದಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ಗಣಪತಿ ಸಚ್ಚಿದಾನಂದ ಅವಧೂತ ದತ್ತಪೀಠ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ಮುಖ್ಯ ಅತಿಥಿಗಳಾಗಿ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ಭಾಗವಹಿಸುವರು. 'ಟಿಪ್ಪು ನಿಜಕನಸುಗಳು' ನಾಟಕದ ಬಗ್ಗೆ ಹಿರಿಯ ಪತ್ರಕರ್ತ ರವೀಂದ್ರ ಜೋಶಿ ಮತ್ತು ಶಿಕ್ಷಣ ತಜ್ಞ ಎಂ.ಅಶೋಕ್‌ಕುಮಾರ್ ತಮ್ಮ ಅನಿಸಿಕೆ ವ್ಯಕ್ತಪಡಿಸಲಿದ್ದಾರೆ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಮೈಸೂರು, ಮಾ.18–ಜಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ, ಸಮಾಜ ಸೇವಕರಾದ ಎಸ್.ಶ್ರೀಕಾಂತ್ 45 ಸಾವಿರ ವೆಚ್ಚದ ಶುದ್ಧ ಕುಡಿಯುವ ನೀರು ಮಿನಿ ಘಟಕವನ್ನು ಕೊಡುಗೆಯಾಗಿ ನೀಡಿದರು. ಈ ಸೌಕರ್ಯವನ್ನು ಶಾಸಕ ಜಿ.ಟಿ.ದೇವೇಗೌಡರ ಟೇಪ್ ಕಟ್ ಮಾಡುವ ಮೂಲಕ ಚಾಲನೆ ನೀಡಿದರು. ಇದೇ ವೇಳೆ ಜಿಟಿಡಿ ಅವರನ್ನು ಮುಖಂಡರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಸಮುದಾಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಗಾಯತ್ರಿ ಉಪಸ್ಥಿತರಿದ್ದರು.

ಮಾವಿನಹಳ್ಳಿಯಲ್ಲಿ ಪುನೀತ್ ಹುಟ್ಟುಹಬ್ಬ



ಮೈಸೂರು, ಮಾ.18– ಜಯಪುರ ಹೋಬಳಿಯ ಮಾವಿನಹಳ್ಳಿ ಗ್ರಾಮದ ಜೈ ಭೀಮ್ ಯುವಕರ ತಂಡದವರು ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದರ ಮೂಲಕ ಹುಟ್ಟುಹಬ್ಬವನ್ನು ಆಚರಿಸಿದರು.

ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ 'ಅಪ್ಪು ಅಡ್ಡ' ನಾಮಫಲಕ ಅನಾವರಣಗೊಳಿಸಿ ಮಾತನಾಡಿ, ಮಾನವೀಯ ಮೌಲ್ಯಕ್ಕೆ ಮತ್ತೊಂದು ಹೆಸರೇ ಪುನೀತ್. ಅವರು ತೆರೆಮರೆಯಲ್ಲೇ ಸಮಾಜಮುಖಿಯಾಗಿ ಮಾಡಿದಂತಹ ದಾನ–ಧರ್ಮ, ಸಹಾಯ ಬಹುದೊಡ್ಡದು. ನಟನೆಯ ಮೂಲಕವೇ ಪ್ರಸಿದ್ಧರಾಗಿ ಇಹಲೋಕ ತ್ಯಜಿಸಿದ ಅಪ್ಪು ಹೆಸರು ದೇಶಾದ್ಯಂತ ಅಜರಾಮರವಾಗಿದೆ. ಬಾಲ್ಯದಲ್ಲೇ ರಾಷ್ಟ್ರ ಪ್ರಶಸ್ತಿ ವಿಜೇತರಾಗಿ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಇಂತಹ ಮೇರು ವ್ಯಕ್ತಿತ್ವ ನಮ್ಮೆಲ್ಲರಿಗೂ ಮಾದರಿಯಾಗಿದೆ ಎಂದರು. ಪುನೀತ್ ಹುಟ್ಟುಹಬ್ಬದ ಪ್ರಯುಕ್ತ ಜೈ ಭೀಮ್ ಯುವಕರ ತಂಡದ ಸದಸ್ಯರು ಸಿಹಿ ಹಂಚಿದರು. ಸಮಾಜ ಸೇವಕ ಶ್ರೀಕಾಂತ್ ಅವರನ್ನು ಪುನೀತ್ ಅವರ ಅಪರೂಪದ ಫೋಟೋ ನೀಡಿ ಅಭಿನಂದಿಸಿದರು.

ನಿಯಂತ್ರಣ ಕೊಠಡಿಗಳ ಸ್ಥಾಪನೆ


ಮೈಸೂರು,ಮಾ.18–2023ರ ಸಾರ್ವತ್ರಿಕ ಚುನಾವಣೆಯನ್ನು ಮುಕ್ತ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವ ಸಂಬಂಧ ಅಕ್ರಮ ಮದ್ಯ ತಯಾರಿಕೆ, ಶೇಖರಣೆ, ಸಾಗಾಣಿಕೆ, ವಿತರಣೆ ಇತರೆ ಅಬಕಾರಿ ಅಕ್ರಮ ಚಟುವಟಿಕೆಗಳ ಬಗ್ಗೆ ಜನರಿಂದ ಸ್ವೀಕೃತವಾಗುವ ದೂರು, ಮಾಹಿತಿಗಳನ್ನು ಸ್ವೀಕರಿಸಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಅಬಕಾರಿ ಜಂಟಿ ಆಯುಕ್ತರ (ಜಾರಿ ಮತ್ತು ತನಿಖೆ), ಮೈಸೂರು ವಿಭಾಗ, ಮೈಸೂರು ಅವರ ಕಚೇರಿಯಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೂ ಅಬಕಾರಿ ಇಲಾಖೆ ದೂ.ಸಂ.0821 2340269 ಮತ್ತು ಮೊ: 9845382905, ಇಲಾಖೆಗೆ ಸಂಬಂಧಪಟ್ಟ ಯಾವುದೇ ದೂರು ಅಥವಾ ಮಾಹಿತಿಗಳಿದ್ದರೂ ಮೇಲ್ಕಂಡ ನಿಯಂತ್ರಣ ಕೊಠಡಿ ದೂರವಾಣಿ, ಮೊಬೈಲ್ ಸಂಖ್ಯೆಗೆ ಕರೆ ಮಾಡಬಹುದಾಗಿರುತ್ತದೆ ಎಂಬ ವಿಚಾರವನ್ನು ಸಾರ್ವಜನಿಕರ ಗಮನಕ್ಕೆ ತರುವುದು ಅತ್ಯವಶ್ಯಕವಾಗಿರುತ್ತದೆ ಎಂದು ಅಬಕಾರಿ ಜಂಟಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಯುಗಾದಿ ಮಿಲನ್, ಪಂಚಾಂಗ ವಿತರಣೆ

ಮೈಸೂರು,ಮಾ.18–ಯುಗಾದಿ ಹಬ್ಬದ ಅಂಗವಾಗಿ ಯುಗಾದಿ ಮಿಲನ್ ಹಾಗೂ ಪಂಚಾಂಗ ವಿತರಣಾ ಕಾರ್ಯಕ್ರಮವನ್ನು ದಿವಾನ್ಸ್ ರಸ್ತೆಯಲ್ಲಿರುವ ಗ್ರೀನ್ ಹೆರಿಟೇಜ್ ಹೋಟೆಲ್ ಆವರಣದಲ್ಲಿ ಮೈಸೂರು ಯುವ ಬಳಗದಿಂದ ಮಾ.19ರ ಸಂಜೆ 5ಕ್ಕೆ ಏರ್ಪಡಿಸಲಾಗಿದೆ ಎಂದು ಬಳಗದ ಕಾರ್ಯಾಧ್ಯಕ್ಷ ನವೀನ್ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಮುಡಾ ಸದಸ್ಯ ನವೀನ್‌ಕುಮಾರ್, ಅರ್ಚಕರ ಸಂಘದ ಅಧ್ಯಕ್ಷರಾದ ಕೃಷ್ಣಮೂರ್ತಿ, ಇಳೈಆಳ್ವಾರ್ ಸ್ವಾಮೀಜಿ, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು


ನಿಧನ

ಜಿ.ವಿ. ಸೀತಾರಾಮ್



ಮೈಸೂರು, ಮಾ. 18– ನಿವೃತ್ತ ಉಪ ತಹಸೀಲ್ದಾರ್ ಹಾಗೂ ಮೈಸೂರಿನ ರಾಮಾನುಜ ರಸ್ತೆ, 14ನೇ ಕ್ರಾಸ್ ನಿವಾಸಿ ಜಿ.ವಿ. ಸೀತಾರಾಮ್ (71) ಶುಕ್ರವಾರ ನಿಧನರಾದರು. ಮೃತರು ಪತ್ನಿ ದಾಕ್ಷಾಯಿಣಿ, ಪುತ್ರಿಯರಾದ ಶ್ರೀಕಲಾ ಮತ್ತು ಶ್ರೀವಿದ್ಯಾ, ಅಳಿಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಪ್ರಸಾದ್ ಹೆಗ್ಡೆ



ಬೆಂಗಳೂರಿನ ರಾಜ್ ನ್ಯೂಸ್ ಚಾನಲ್‌ನಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಸಾದ್ ಹೆಗ್ಡೆ (43) ಬೆಂಗಳೂರಿನ ಅಪೋಲೋ ಆಸ್ಪತ್ರೆಯಲ್ಲಿ ಶನಿವಾರ ಬೆಳಗ್ಗೆ ನಿಧನರಾದರು.

ಅವಿವಾಹಿತರಾದ ಪ್ರಸಾದ್ ಹೆಗ್ಡೆ ಕೆಲವು ವರ್ಷಗಳು ಮೈಸೂರಿನಲ್ಲೂ ಕಾರ್ಯನಿರ್ವಹಿಸಿದ್ದರು. ಅಂತ್ಯಕ್ರಿಯೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಚಾವಟ್ಟಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಆರ್.ದೇವರಾಜು



ಮೈಸೂರು ಆರ್‌ಬಿಐ ಉದ್ಯೋಗಿ ಹಾಗೂ ಹೆಬ್ಬಾಳು 1ನೇ ಹಂತದ ನಿವಾಸಿ ಡಿ.ಆರ್.ದೇವರಾಜು(49) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ವನಜಾಕ್ಷಿ ಹಾಗೂ ಅಪಾರ ಬಂಧುಗಳು, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 10.30ಕ್ಕೆ ಪಿರಿಯಾಪಟ್ಟಣ ತಾಲೂಕು ದೊಡ್ಡ ಹಾರ್ವೇ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉರಿಗೌಡ, ದೊಡ್ಡ ನಂಜೇಗೌಡರ ಸೃಷ್ಟಿಸಿ ಒಕ್ಕಲಿಗರ ತೇಜೋವಧೆ

ಬಿಜೆಪಿ ವಿರುದ್ಧ ಕೇಸ್ ಹಾಕಲು ಕಾಂಗ್ರೆಸ್ ವಕ್ತಾರ ಆಗ್ರಹ



ಮೈಸೂರು, ಮಾ.18 (ಜಿಎ)–ಟಿಪ್ಪು ಸುಲ್ತಾನ್‌ನನ್ನು ಉರಿಗೌಡ, ದೊಡ್ಡ ನಂಜೇಗೌಡ ಹೊಡೆದು ಹಾಕಿದ್ದಾರೆ ಎಂದು ಹೇಳುವ ಮೂಲಕ ಒಕ್ಕಲಿಗ ಮತ್ತು ಮುಸ್ಲಿಂ ಸಮುದಾಯದ ನಡುವೆ ಭಿನ್ನಾಭಿಪ್ರಾಯ ಮೂಡಿಸಿ, ಒಕ್ಕಲಿಗರ ತೇಜೋವಧೆ ಮಾಡುತ್ತಿರುವ ಬಿಜೆಪಿಗರ ವಿರುದ್ಧ ರಾಜ್ಯ ಒಕ್ಕಲಿಗರ ಸಂಘ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಗ್ರಹಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉರಿಗೌಡ, ದೊಡ್ಡ ನಂಜೇಗೌಡ ಪಾತ್ರಗಳು ಬಿಜೆಪಿಯವರ ಕುತಂತ್ರ. ಒಕ್ಕಲಿಗರು ಮತ್ತು ಮುಸ್ಲಿಮರ ನಡುವೆ ದ್ವೇಷ ಮನೋಭಾವನೆ ಬಿತ್ತುವ ಕೆಲಸವನ್ನು ಇವರು ಮಾಡುತ್ತಿದ್ದಾರೆ. ನಮ್ಮ ಪ್ರಕಾರ ರಾಜ್ಯದ ಉರಿಗೌಡ ಸಿ.ಟಿ.ರವಿ, ದೊಡ್ಡ ನಂಜೇಗೌಡ ನಳಿನ್‌ಕುಮಾರ್ ಕಟೀಲ್. ಇವರೇ ರಾಜ್ಯವನ್ನು ಹಾಳು ಮಾಡುತ್ತಿದ್ದಾರೆ ಎಂದರು.

ಇವರೊಟ್ಟಿಗೆ ಸಚಿವ ಅಶ್ವಥ್ ನಾರಾಯಣ್ ಸೇರಿಕೊಂಡಿದ್ದಾರೆ. ಮತ್ತೊಂದೆಡೆ ಶೋಭಾ ಕರಂದ್ಲಾಜೆ ಅವರಿಗೆ ಬಿಜೆಪಿ ರಾಜ್ಯ ಚುನಾವಣೆ ನಿರ್ವಹಣೆ ಉಸ್ತುವಾರಿ ನೀಡಿರುವ ಬೆನ್ನಲ್ಲಿಯೇ ಅವರು ಉರಿಗೌಡ, ದೊಡ್ಡ ನಂಜೇಗೌಡ ವಿಷಯವನ್ನು ಬಳಸಿಕೊಳ್ಳುತ್ತಿದ್ದಾರೆ. ರಾಜ್ಯ ಒಕ್ಕಲಿಗರ ಸಂಘ ಮತ್ತು ಸ್ವಾಮೀಜಿಯವರು ಏನು ಮಾಡುತ್ತಿದ್ದಾರೋ ತಿಳಿಯುತ್ತಿಲ್ಲ. ಒಕ್ಕಲಿಗರ ಸಂಘದ ಅಧ್ಯಕ್ಷರು ಎಲ್ಲಿದ್ದೀರಾ, ಸಿ.ಟಿ. ರವಿ, ಶೋಭಾ ಕರಂದ್ಲಾಜೆ ಮತ್ತು ಅಶ್ವಥ್ ನಾರಾಯಣ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಂದು ಆಗ್ರಹಿಸಿದರು.

ಸಿಟಿ ರವಿ ವೀರಶೈವ ಲಿಂಗಾಯತರ ವಿರುದ್ಧವೂ ಮಾತನಾಡಿರುವ ಆಡಿಯೋ ವೈರಲ್ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಬಿಜೆಪಿಯನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಲಾಗಿದೆ. ಅವರಿಗೆ ಇಂಜೆಕ್ಷನ್ ಕೊಟ್ಟು ಎರಡೇ ಎರಡು ಮಾತನಾಡುವಂತೆ ಮಾಡಿದ್ದು, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಏನಾದರೂ ಅಧಿಕಾರಕ್ಕೆ ಬಂದರೆ ಬಿ.ಎಲ್ ಸಂತೋಷ್ ಅಥವಾ ಪ್ರಹ್ಲಾದ್ ಜೋಶಿ ಸಿಎಂ ಆಗುತ್ತಾರೆಯೇ ಹೊರತು ಲಿಂಗಾಯತರಿಗೆ ಬಿಟ್ಟು ಕೊಡಲ್ಲ. ಇದರ ಬಗ್ಗೆ ಮೈಸೂರಿನಲ್ಲಿ ಬಿ.ಎಲ್.ಸಂತೋಷ್ ಮಾತನಾಡಿದ್ದಾರೆ. ಲಿಂಗಾಯತ ಸಮುದಾಯ ಇದನ್ನು ಅರ್ಥ ಮಾಡಿಕೊಳ್ಳಬೇಕು. ಲಿಂಗಾಯತ ಸಮುದಾಯವನ್ನು ಮೂಲೆಗುಂಪು ಮಾಡಲು ಬಿಜೆಪಿ ಮುಖಂಡರು ಹುನ್ನಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಮತ್ತು ಎಚ್.ಸಿ.ಮಹದೇವಪ್ಪ ಅವರ ಒತ್ತಡದಿಂದ ಧ್ರುವನಾರಾಯಣ್ ನಿಧನರಾದರು ಎಂಬ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ವಾಗ್ದಾಳಿ ನಡೆಸಿದ ಅವರು, ಕಾಂಗ್ರೆಸ್ ಪಕ್ಷದಿಂದ ಎಲ್ಲವನ್ನೂ ಪಡೆದುಕೊಂಡು ಬಿಜೆಪಿಗೆ ಹೋಗಿ ಈಗ ಅವರಿಗೆ ದ್ರೋಹ ಮಾಡುವ ಕೆಲಸ ಮಾಡುತ್ತಿದ್ದೀರಾ. ದಲಿತರಿಗೆ ಯಾರು ಕೊಡದಷ್ಟು ಯೋಜನೆಗಳನ್ನು ಸಿದ್ದರಾಮಯ್ಯ ಕೊಟ್ಟಿದ್ದಾರೆ ಎಂದರು. ಗೋಷ್ಠಿಯಲ್ಲಿ ನಗರಾಧ್ಯಕ್ಷ ಆರ್. ಮೂರ್ತಿ, ಮಾಜಿ ಮೇಯರ್ ಹಾಗೂ ಪಾಲಿಕೆ ಸದಸ್ಯರಾದ ಅಯೂಬ್ ಖಾನ್ ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಗುಬ್ಬಚ್ಚಿ ದಿನ ಇಂದು ಜಾಗೃತಿ ಕಾರ್ಯಕ್ರಮ

ಮೈಸೂರು, ಮಾ. 18– ಅಂತರರಾಷ್ಟ್ರೀಯ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಸಣ್ಣಪುಟ್ಟ ಪ್ರಾಣಿ ಪಕ್ಷಿಗಳ ಸಂರಕ್ಷಣೆ ಜಾಗೃತಿ ಕಾರ್ಯಕ್ರಮವನ್ನು (ಅಪೂರ್ವ ಹೋಟೆಲ್ ಮುಂಭಾಗದಿಂದ) ಜೆಎಲ್‌ಬಿ ರಸ್ತೆಯಲ್ಲಿರುವ ಪ್ರತಿಯೊಂದು ಮರಗಿಡಗಳಲ್ಲಿ ಆಹಾರ ನೀರಿನ ಬಟ್ಟಲು ಅಳವಡಿಸುವ ಮೂಲಕ ಅಂತರರಾಷ್ಟ್ರೀಯ ಗುಬ್ಬಚ್ಚಿ ದಿನಾಚರಣೆಯನ್ನು ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಮಾ.19ರ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ಹೇಳಿದ್ದಾರೆ. ಮೇಯರ್ ಶಿವಕುಮಾರ್, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಪಾಲಿಕೆ ಸದಸ್ಯ ಮಾ.ವಿ.ರಾಂಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ಇಂದು ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಮಾ. 18– ಅಖಿಲ ಕರ್ನಾಟಕ ಒಕ್ಕಲಿಗರ ಸಂಘ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ, ನೇಮಕಾತಿ ಪತ್ರ ವಿತರಣೆ, ಸಾಧಕರಿಗೆ ಡಾ.ಬಾಲಗಂಗಾಧರನಾಥ ಸ್ವಾಮಿ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ (ಮಾ.19) ಬೆಳಗ್ಗೆ 10 ಗಂಟೆಗೆ ಜಯನಗರದ ನೇಗಿಲಯೋಗಿ ಸಭಾ ಭವನದಲ್ಲಿ ಏರ್ಪಡಿಸಲಾಗಿದೆ. ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಂಸದ ಪ್ರತಾಪ್ ಸಿಂಹ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಜಿ.ಟಿ.ದೇವೇಗೌಡ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಉಪ ಪೊಲೀಸ್ ಆಯುಕ್ತ ಎಂ.ಮುತ್ತುರಾಜ್ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ನೇಮಕಾತಿ ಪತ್ರ ವಿತರಿಸುವರು. ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸಮಾಜ ಸೇವಕ ಹರೀಶ್‌ಗೌಡ, ನಾಗಣ್ಣ ಬಾಣಸವಾಡಿ, ಸಿ.ಜಿ.ಗಂಗಾಧರ್, ಚಾ.ರಂ.ಶ್ರೀನಿವಾಸಗೌಡ, ಸುಮಿತ್ರ ರಮೇಶ್ ಉಪಸ್ಥಿತರಿದ್ದು, ಸಂಘದ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಪ್ರಾಸ್ತಾವಿಕ ಭಾಷಣ ಮಾಡುವರು.

ಪ್ರಧಾನಿ, ಸಂಸದರ ವಿರುದ್ಧ ಹೇಳಿಕೆ ನಿಲ್ಲಿಸದಿದ್ದಲ್ಲಿ ವಿಶ್ವನಾಥ್‌ಗೆ ತಕ್ಕಪಾಠ

ಬಿಜೆಪಿ ಮುಖಂಡ ಎಚ್ಚರಿಕೆ



ಮೈಸೂರು,ಮಾ.18– ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್ ಅವರು ಅವಹೇಳನಕಾರಿ ಹೇಳಿಕೆ ನೀಡುವುದನ್ನು ನಿಲ್ಲಿಸದಿದ್ದಲ್ಲಿ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಬಿಜೆಪಿ ಯುವ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ. ಸಂತೋಷ್‌ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಗ್ಗೆ ಮಾತನಾಡುವಾಗ ವಿಶ್ವನಾಥ್ ಅವರು, ಪ್ರಧಾನಿ ಮೋದಿ ಹಾಗೂ ಸಂಸದ ಪ್ರತಾಪ್ ಸಿಂಹ ಅವರನ್ನು ಅವಹೇಳನ ಮಾಡಿದ್ದಾರೆ. ಅವರಪ್ಪನ ಮನೆ ದುಡ್ಡಿನಲ್ಲಿ ಮಾಡಿದ್ದಾರಾ ಎಂದು ನಾಲಿಗೆ ಹರಿಬಿಟ್ಟಿದ್ದಾರೆ. ಪ್ರಧಾನಿ ಬಗ್ಗೆ ಈ ರೀತಿ ಲಘುವಾಗಿ ಮಾತನಾಡುವುದು ಸರಿಯಲ್ಲ. ವಿಶ್ವನಾಥ್ ಅವರ ಆಸ್ತಿ–ಸಂಪತ್ತಿನ ಬಗ್ಗೆ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಅವರು ಪ್ರಶ್ನಿಸಿದ್ದನ್ನು ಮರೆತುಬಿಟ್ಟಿದ್ದಾರೆ. ಬಾಲಿಶವಾಗಿ ಮಾತನಾಡುವುದರಿಂದಲೇ ವಿಶ್ವನಾಥ್ ಅವರು ಯಾವ ಪಕ್ಷಕ್ಕೂ ಸಲ್ಲುವುದಿಲ್ಲ. ಅವರು ಲಘುವಾಗಿ ಮಾತನಾಡುವುದನ್ನು ನಿಲ್ಲಿಸದಿದ್ದರೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರೋಟರಿ ಮೈಸೂರು ಉತ್ತರಕ್ಕೆ ಅಧಿಕೃತವಾಗಿ ಭೇಟಿ ನೀಡಿದ 3181 ಜಿಲ್ಲೆ ಗವರ್ನರ್ ಪ್ರಕಾಶ್ ಕಾರಂತ್ ಮತ್ತು ವಾಣಿ ಕಾರಂತ್ ಅವರನ್ನು ಆತ್ಮೀಯವಾಗಿ ಗೌರವಿಸಲಾಯಿತು. ರಮ್ಯಾ ಜಗದೀಶ್, ವಲಯ ಸೇನಾನಿ ರಾಜಶೇಖರ ಕದಂಬ, ಸಹಾಯಕ ಗವರ್ನರ್ ಮಂಜುನಾಥ್, ಅಧ್ಯಕ್ಷ ಜಗದೀಶ್, ಕಾರ್ಯದರ್ಶಿ ಲೋಕನಾಥ್, ನಿಯೋಜಿತ ಅಧ್ಯಕ್ಷ ಎಂ.ಕೆ.ಶ್ರೀಧರ್ ಉಪಸ್ಥಿತರಿದ್ದಾರೆ. ಇದೇ ಸಂದರ್ಭದಲ್ಲಿ ರೈತರಿಗೆ ರೋಟರಿ ಉತ್ತರ ವತಿಯಿಂದ ಕೃಷಿ ಸಲಕರಣೆಗಳು ಹಾಗೂ ಹಸುಗಳನ್ನು ನೀಡಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.3.2023 ಭಾನುವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಪಸ್ಥಿತರು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೇಯರ್ ಶಿವಕುಮಾರ್, ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಸ್ಥಳ: ತಪೋನಂದನ ಉದ್ಯಾನವನ, ಕುವೆಂಪುನಗರ, ಬೆಳಗ್ಗೆ 7ರಿಂದ.

■ **ಜೀವನ್ ಜೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ :** ಸಣ್ಣ ಕಥೆಗಳ ಸಂಕಲನ ಕೃತಿಗಳ ಲೋಕಾರ್ಪಣೆ, ಪ್ರಶಸ್ತಿ ಪ್ರದಾನ, ಕವಿಗೋಷ್ಠಿ ಸಮಾರಂಭ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಮುಡಾ ಎದುರು, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಜೀವ್ ದಯಾ ಜೈನ್ ಚಾರಿಟಿ ಅಂಡ್ ಪೀಪಲ್ಸ್ ಫಾರ್ ಅನಿಮಲ್ಸ್** ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಅರಿವು ಕಾರ್ಯಕ್ರಮ, ಮುಖ್ಯ ಅತಿಥಿಗಳು: ಉಪಮೇಯರ್ ಡಾ. ಜಿ.ರೂಪಾ ಯೋಗೀಶ್, ಅತಿಥಿಗಳು : ಇಂಟರ್‌ನ್ಯಾಷನಲ್ ಭಾರತೀಯ ಜೈನ್ ಮಿಲನ್ ಉಪಾಧ್ಯಕ್ಷ ಪ್ರಸನ್ನಕುಮಾರ್ ಜೈನ್, ಮುಖ್ಯ ಕಾರ್ಯದರ್ಶಿ ಗೌತಮ್‌ಜೀ ಸಲೇಚಾ, ಉಪಾಧ್ಯಕ್ಷ ಪ್ರಕಾಶ್‌ಜೀ ಗುಲೇಚಾ, ಸ್ಥಳ: ಸಿಐಟಿಬಿ ಚೌಲ್ಟ್ರಿ, ಎಂಆರ್‌ಸಿ ಕಣ್ಣಿನ ಆಸ್ಪತ್ರೆ ಎದುರು, ಬೆಳಗ್ಗೆ 10ಕ್ಕೆ.

■ **ಶ್ರೀ ದೇವಿ ಮಹಿಳಾ ಸಂಘ :** ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಆಟೋಟ ಸ್ಪರ್ಧೆಗಳು, ಸ್ಥಳ: ಗಣಪತಿ ದೇವಸ್ಥಾನ, ಕೆ. ಬ್ಲಾಕ್, ಬೆಳಗ್ಗೆ 10ರಿಂದ.

■ **ಅಖಿಲ ಕರ್ನಾಟಕ ಒಕ್ಕಲಿಗರ ಸಂಘ:** ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ, ನೇಮಕಾತಿ ಪತ್ರ ವಿತರಣೆ, ಸಾಧಕರಿಗೆ ಡಾ.ಬಾಲಗಂಗಾಧರನಾಥ ಸ್ವಾಮಿ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಮಹಾ ಸ್ವಾಮೀಜಿ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಡಾ.ಬಾಲಗಂಗಾಧರನಾಥ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಜಿ.ಟಿ.ದೇವೇಗೌಡ, ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ: ಉಪ ಪೊಲೀಸ್ ಆಯುಕ್ತ ಎಂ.ಮುತ್ತುರಾಜ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ನೇಮಕಾತಿ ಪತ್ರ ವಿತರಣೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಉಪಸ್ಥಿತರು: ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಸಮಾಜ ಸೇವಕ ಹರೀಶ್‌ಗೌಡ, ನಾಗಣ್ಣ ಬಾಣಸವಾಡಿ, ಸಿ.ಜಿ.ಗಂಗಾಧರ್, ಚಾ.ರಂ.ಶ್ರೀನಿವಾಸಗೌಡ, ಸುಮಿತ್ರ ರಮೇಶ್, ಪ್ರಾಸ್ತಾವಿಕ ಭಾಷಣ: ಸಂಘದ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಸ್ಥಳ: ನೇಗಿಲಯೋಗಿ ಸೇವಾ ಸಭಾ ಭವನ, ಜಯನಗರ, ಬೆಳಗ್ಗೆ 10ಕ್ಕೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್ :** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಡಾ. ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿ :** ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಸಪ್ತಪದಿ, ಸಾಮೂಹಿಕ ವಿವಾಹ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಾರಾಯಣ ಗುರು ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ರೇಣುಕಾನಂದ ಸ್ವಾಮೀಜಿ, ಅಧ್ಯಕ್ಷತೆ : ಮೇಯರ್ ಶಿವಕುಮಾರ್, ಉದ್ಘಾಟನೆ : ಚಲನಚಿತ್ರ ನಾಯಕ ನಟ ಆರ್.ಕೆ.ಧೀರನ್, ಮುಖ್ಯ ಅತಿಥಿಗಳು : ಶಾಸಕ ಎಸ್.ಎ.ರಾಮದಾಸ್, ಆಶಯ ನುಡಿ : ಬೆಂಗಳೂರು ವಿವಿ ಪ್ರಾಧ್ಯಾಪಕ ಡಾ. ರಾಜಪ್ಪ ದಳವಾಯಿ, ಸ್ಥಳ: ದಸರಾ ವಸ್ತುಪ್ರದರ್ಶನ ಆವರಣ, ಬೆಳಗ್ಗೆ 10.30 ರಿಂದ.

■ **ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ: ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಣಿ ಶ್ರೀಮತಿ ತ್ರಿಷಿಕಾಕುಮಾರಿ ಒಡೆಯರ್, ಅಧ್ಯಕ್ಷತೆ : ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ಅಧ್ಯಕ್ಷೆ ಡಾ. ಪಿ.ಬಿ. ಇಂದುಕಲಾ ಅರಸ್, ಅಧ್ಯಕ್ಷತೆ : ಶ್ರೀ ಜಯ ಚಾಮರಾಜೇಂದ್ರ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷೆ ಶ್ರೀಮತಿ ಭಾರತಿ ಶ್ರೀಧರ್ ರಾಜೇ ಅರಸ್, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ಭಾಷಣ: ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಪ್ರಾಂಶುಪಾಲರಾದ ಶ್ರೀಮತಿ ಡಾ.ರೋಹಿಣಿ ನಾಗಪದ್ಮ, ಸಾಧಕರಿಗೆ ಸನ್ಮಾನ : ಮಾತೃ ಮಂಡಳಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಬಹುಮಾನ ವಿತರಣೆ : ಮೂಡಿಗೆರೆ ಪ.ಪಂ. ಉಪಾಧ್ಯಕ್ಷೆ ಕೆ.ವಿ.ಕಮಲಾಕ್ಷಿ ದಿವಾಕರ ರಾಜೇ ಅರಸ್, ಅಭಿಪ್ರಾಯ ಮಂಡನೆ : ಪಾಲಿಕೆ ಸದಸ್ಯೆ ವಿದ್ಯಾ ಅರಸ್, ಸ್ಥಳ: ರೋಟರಿ ವೆಸ್ಟ್ ಶಾಲೆ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ರೋಟರಿ ಮೈಸೂರು ಉತ್ತರ, ಕದಂಬ ರಂಗ ವೇದಿಕೆ:** ರೋಟರಿ ಕದಂಬ ರಂಗ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು: ನಟ ಪ್ರೊ.ಸಿ.ವಿ.ಶ್ರೀಧರಮೂರ್ತಿ, ನಟ ಡಿ.ತಿಪ್ಪಣ್ಣ, ಹಿರಿಯ ನಟಿ ಕು. ನಾಗರತ್ನ, ಪ್ರಶಸ್ತಿ ಪ್ರದಾನ: ಪ್ರಗತಿಪರ ಚಿಂತಕ ಡಾ. ಕಾಳೇಗೌಡ ನಾಗವಾರ, ಮುಖ್ಯ ಅತಿಥಿಗಳು: ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಹೆಚ್.ಎಸ್.ಸುರೇಶ್‌ಬಾಬು, ಅಧ್ಯಕ್ಷತೆ: ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೋ. ಎಸ್.ಎಚ್.ಜಗದೀಶ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಗಮಕ ಕಲಾ ಪರಿಷತ್ತು:** ಪು.ತಿ.ನ. ಅವರ ಜನ್ಮದಿನ ಸ್ಮರಣೆ ಮತ್ತು ಕಾವ್ಯ ವ್ಯಾಸಂಗ ಗೋಷ್ಠಿ–35, ಬೆಳಗ್ಗೆ 10.30ರಿಂದ ಕರ್ನಾಟಕ ಕಲಾಶ್ರೀ ಇಂದ್ರಾಣಿ ಅನಂತರಾಮ್ ಅವರಿಂದ ಗೀತಾ ಗಾಯನ, ಇಂದು ಶೇಖರ್–ತಬಲ, ಶರತ್–ಕೀಬೋರ್ಡ್, ಬೆಳಗ್ಗೆ 11ರಿಂದ ಸಭಾ ಕಾರ್ಯಕ್ರಮ, ಪ್ರಾಸ್ತಾವಿಕ ನುಡಿ: ಕೃ.ರಾಮಚಂದ್ರ, ಪು.ತಿ.ನ. ಅವರ ಬದುಕು, ಬರಹ: ಅಜಯ್ ಸ್ವರೂಪ್, ಸಮಾರೋಪ ಭಾಷಣ: ಪ್ರವಚನಕಾರ ಡಾ.ಕೆ. ಅನಂತರಾಮು, ಮುಖ್ಯ ಅತಿಥಿಗಳು: ಲೇಖಕ ಪ್ರೊ.ಎಸ್. ಶಿವಾಜಿ ಜೋಯಿಸ್, ಅಧ್ಯಕ್ಷತೆ: ಕನ್ನಡ ಪ್ರಾಧ್ಯಾಪಕ ಪ್ರೊ. ಎಸ್.ರಾಘವೇಂದ್ರ ಭಟ್ಟರು, ಮಧ್ಯಾಹ್ನ 12.30ರಿಂದ ಕಾವ್ಯ ವ್ಯಾಸಂಗ ಗೋಷ್ಠಿ–35, ಕಾವ್ಯ: ಪು.ತಿ.ನ. ಅವರ 'ಶ್ರೀಹರಿಚರಿತೆ' ಉಲ್ಲಾಸ–33–'ನಿವೇದನಂ', ವಾಚನ: ಡಾ. ಜ್ಯೋತಿ ಶಂಕರ್, ವ್ಯಾಖ್ಯಾನ: ಡಾ. ಎನ್.ಕೆ.ರಾಮಶೇಷನ್, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ.

■ **ರಂಗಾಯಣ :** ಟಿಪ್ಪು ನಿಜ ಕನಸುಗಳು – ಸತ್ಯದ ಅನಾವರಣದ ಸುವರ್ಣ ಪ್ರದರ್ಶನ ಸಂಭ್ರಮ, ಆಶೀರ್ವಚನ : ಶ್ರೀ ಗಣಪತಿ ಸಚ್ಚಿದಾನಂದ ಅವಧೂತ ದತ್ತಪೀಠ ಆಶ್ರಮದ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಹಿರಿಯ ಪತ್ರಕರ್ತ ರವೀಂದ್ರ ಜೋಶಿ, ಶಿಕ್ಷಣ ತಜ್ಞ ಅಶೋಕ್ ಕುಮಾರ್, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ರಂಗಾಯಣ ಆವರಣ, ಬೆಳಗ್ಗೆ 11ಕ್ಕೆ

■ **ಟಿ. ನಾರಾಯಣಶಾಸ್ತ್ರಿ ಪ್ರತಿಷ್ಠಾನ:** ಅಂತ್ಯಾಕ್ಷರಿ (ಸಂಸ್ಕೃತ ಶ್ಲೋಕಗಳ ಸರಸ ಕಾರ್ಯಕ್ರಮ), ಅಧ್ಯಕ್ಷತೆ: ಉನ್ನತ ಶಿಕ್ಷಣ ಇಲಾಖೆ ವಿಶ್ರಾಂತ ಅಪರ ನಿರ್ದೇಶಕ ಪ್ರೊ.ಪ್ರಭಾಕರ, ಉದ್ಘಾಟನೆ: ಕೋಲಾರ ಸಂಸ್ಕೃತ ಸಂಘದ ಸ್ಥಾಪಕ ಅಧ್ಯಕ್ಷ ಡಾ.ಕೃಷ್ಣಮೂರ್ತಿ, ಸ್ಥಳ: ವಿಶ್ವಂ ಸಭಾಂಗಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ವಿಸ್ಮಯ ಬುಕ್‌ಹೌಸ್, ಸಾಹಿತ್ಯ ಲೋಕ :** ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರ ಸಾಹಿತ್ಯ ಸಂಪದ ಹಾಗೂ ಸಾಹಿತ್ಯ ಸಂಗಮ ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ : ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಅಧ್ಯಕ್ಷತೆ : ಹಿರಿಯ ಸಾಹಿತಿ ಪ್ರೊ. ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ಅಂಕಣಕಾರ ಡಾ. ಗುಬ್ಬಿಗೂಡು ರಮೇಶ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಪಣೀಂದ್ರಾಚಾರ್ಯ ಅವರಿಂದ ಭಗವದ್ಗೀತೆಯ 6ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಜನಚೈತನ್ಯ ಫೌಂಡೇಷನ್ :** ಹಾಡೊಂದು ನಾ ಹಾಡುವೆನು ಗೀತ ಗಾಯನ ಕಾರ್ಯಕ್ರಮ, ಉದ್ಘಾಟನೆ: ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಲೇಖಕ ಅಮ್ಮಸಂದ್ರ ಸುರೇಶ್, ಸ್ಥಳ: ಪುರಭವನದ ಸಭಾಂಗಣ, ಸಂಜೆ 5ಕ್ಕೆ.

■ **ನೃತ್ಯ ವಿದ್ಯಾಪೀಠ :** ಕು. ಎಸ್. ರಕ್ಷಿತಾ ಅವರಿಂದ ಭರತನಾಟ್ಯ ರಂಗ ಪ್ರವೇಶ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶೇಷ ಆಹ್ವಾನಿತರು : ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು : ಶ್ರೀ ಕ್ಷೇತ್ರ ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರಾದ ಎಸ್.ಪಿ. ಶೇಷಗಿರಿ ಭಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಜೆಎಸ್‌ಎಸ್‌ಎಸ್‌ನ ಆಡಳಿತಾಧಿಕಾರಿ ಶ್ರೀಮತಿ ಅನುಪಮ ಬಿ. ಪಂಡಿತ್, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ನಿರ್ದೇಶಕ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 5.30ಕ್ಕೆ.

■ **ರಾಗವೈಭವ :** ವಿದ್ವಾನ್ ಮಲ್ಲಾಡಿ ಸಹೋದರರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ಡಾ. ನಿಶಾಂತ್ ಚಂದ್ರನ್–ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ಪ್ರೊ. ಜಿ.ಎಸ್. ರಾಮನುಜನ್–ಘಟ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ – ಸಿ.ಎಫ್.ಟಿ.ಆರ್.ಐ. ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ಉಪಾಸನಾ ಮೋಹನ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಬಸವನಗಿರಿ ಹಾಡಿಯ ಭಾಗ್ಯಮ್ಮ ಅವರೊಂದಿಗೆ ಸಂವಾದ. ನಡೆಸಿ ಕೊಡುವವರು– ದಿವಾಕರ ಹೆಗಡೆ, 10.00 ಸ್ಮಿತಾ ಶ್ರೀ ಕಿರಣ್–ವೇಣುವಾದನ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ರಾಮಶೆಟ್ಟಿ ಮತ್ತು ತಂಡ, 1.20 ಭಾವಗೀತೆ– ಎನ್.ಹೇಮಾ, 3.30 ಮಕ್ಕಳ ಮಂಟಪ–ಕೆ.ಆರ್. ಪೇಟೆ ತಾಲೂಕು ಕಿಕ್ಕೇರಿಯಲ್ಲಿರುವ ಕೇಂಬ್ರಿಡ್ಜ್ ಪಬ್ಲಿಕ್ ಶಾಲಾ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ– ಚಿತ್ರ ಸಾಹಿತಿ, ಹಾಸ್ಯ ನಟ ಕುಣಿಗಲ್ ನಾಗಭೂಷಣ್ ಅವರೊಂದಿಗೆ ಎಂ. ಶಂಕರಪ್ಪ ಮತ್ತು ಎಂ.ಎಸ್. ಅನುಪಮಾ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ–ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ–ಚಿತ್ರ ಚಿತ್ತಾರ, ಯುಗಾದಿ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ ಶ್ರೀರಂಗಪಟ್ಟಣದ ಶ್ರಾವಣ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಎಂ. ಲಕ್ಷ್ಮಣ್–ನಾಗಸ್ವರ

ಒಂದು ಸಣ್ಣ ಮಳೆಗೆ ಕೆರೆಯಾದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ



- ನೀರಿನಲ್ಲಿ ಸಿಲುಕಿಕೊಂಡು ಕೆಟ್ಟು ನಿಂತ ವಾಹನಗಳು
- ವೇಗವಾಗಿ ಬಂದ ವಾಹನಗಳು ಡಿಕ್ಕಿಯಾಗಿ ಹಾನಿ
- ಕೆಟ್ಟು ನಿಂತ ವಾಹನ ಸಾಗಿಸಲು ಸಾವಿರಾರು ಖರ್ಚು
- ಚಾಲಕರ ಹಿಡಿಶಾಪ; ಪ್ರಾಧಿಕಾರದವರ ವಿರುದ್ಧ ಆಕ್ರೋಶ

ನಾನು ಸ್ವಿಫ್ಟ್ ಕಾರಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದೆ. ಎಂಜಿನ್‌ಗೆ ನೀರು ನುಗ್ಗಿದ್ದರಿಂದ ಹಠಾತ್ತನೆ ರಸ್ತೆ ಮಧ್ಯೆ ಕಾರು ನಿಂತಿದ್ದು, ಹಿಂಬದಿಯಿಂದ ಲಾರಿ ನನ್ನ ಕಾರಿಗೆ ಡಿಕ್ಕಿ ಹೊಡೆದಿದೆ. ಸರಾಗವಾಗಿ ನೀರು ಹರಿದು ಹೋಗಲು ವ್ಯವಸ್ಥೆ ಮಾಡದ ಕಾರಣ ರಸ್ತೆಯಲ್ಲಿ ಸಂಚರಿಸುವ ಕಾರುಗಳ ಎಂಜಿನ್‌ಗೆ ನೀರು ನುಗ್ಗಿ ಅಪಾಯ ಉಂಟಾಗುತ್ತಿದೆ. ಎಕ್ಸ್‌ಪ್ರೆಸ್ ವೇ ನಿರ್ಮಾಣವಾಗಿದೆ ಎಂದು ಸಂತಸಪಟ್ಟ ನಾವು ಈ ಅವಾಂತರದಿಂದ ಸಂಕಟಪಡುವಂತಾಗಿದೆ..
– ವಿಕಾಸ್, ಬೆಂಗಳೂರು.

ರಾಮನಗರ, ಮಾ.18–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ದಿನಂ ಪ್ರತಿ ಅಪಘಾತಗಳು ಸಂಭವಿಸುತ್ತಿರುವ ಬೆನ್ನಲ್ಲೇ ರಸ್ತೆ ಉದ್ಘಾಟನೆಗೊಂಡ ಆರೇ ದಿನದಲ್ಲಿ ಸುರಿದ ಸಾಧಾರಣ ಮಳೆಗೆ ರಸ್ತೆ ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಗಿದೆ.

ರಸ್ತೆ ಜಲಾವೃತಗೊಂಡಿದ್ದರಿಂದ ಕೆಟ್ಟು ನಿಂತ ಕಾರಿಗೆ ಲಾರಿ ಡಿಕ್ಕಿ ಹೊಡೆದ ದುರಂತವೂ ನಡೆದಿದ್ದು, ಹಲವಾರು ಕಾರುಗಳು ಇಂಜಿನ್ ಆಫ್ ಆಗಿ ಜಲಾವೃತಗೊಂಡಿರುವ ರಸ್ತೆಯಲ್ಲೇ ನಿಂತಿರುವ ದೃಶ್ಯ ಕಂಡು ಬಂದಿದೆ. ಎಕ್ಸ್‌ಪ್ರೆಸ್ ಹೈವೆಯಲ್ಲಿ ಸಂಚರಿಸುವ ವಾಹನಗಳು ದುರಸ್ತಿಯಾದರೆ ಸಹಾಯಕ್ಕೆ ಧಾವಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಹಾಯವಾಣಿ ಸಂಖ್ಯೆಯನ್ನು ನೀಡಿದೆಯಾದರೂ ಸಹಾಯಕ್ಕಾಗಿ ವಾಹನ ಸವಾರರು ಕರೆ ಮಾಡಿದರೆ ಸರಿಯಾಗಿ ಪ್ರತಿಕ್ರಿಯಿಸುತ್ತಿಲ್ಲ ಎಂಬ ದೂರುಗಳು ಕೇಳಿ ಬಂದಿವೆ.

ನಿನ್ನೆ ರಾತ್ರಿ ರಾಮನಗರ ಸುತ್ತಮುತ್ತ ಸಾಧಾರಣ ಮಳೆಯಾಗಿತ್ತು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರಾಮನಗರ ಸಮೀಪದ ಸಂಗ ಬಸವನದೊಡ್ಡಿ ಬಳಿ ರಸ್ತೆಯ ಒಂದು ಭಾಗ ಸಂಪೂರ್ಣವಾಗಿ ಜಲಾವೃತಗೊಂಡಿದೆ. ಇದರಿಂದ ಬೆಂಗಳೂರಿನಿಂದ ಮೈಸೂರು ಕಡೆಗೆ ತೆರಳುವ ವಾಹನ ಸವಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನೀರಿನಲ್ಲೇ ಸಂಚರಿಸುತ್ತಿದ್ದ ಸ್ವಿಫ್ಟ್ ಕಾರೊಂದು ಎಂಜಿನ್‌ಗೆ ನೀರು ನುಗ್ಗಿದ ಪರಿಣಾಮ ಹಠಾತ್ತನೇ ನಿಂತು ಹೋದಾಗ ಅದರ ಹಿಂದೆ ಬಂದ ಲಾರಿ ಕಾರಿಗೆ ಡಿಕ್ಕಿ ಹೊಡೆದಿದೆ. ಇದರಿಂದಾಗಿ ಕಾರು ಜಖಂಗೊಂಡಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದವರು ಪಾರಾಗಿದ್ದಾರೆ.

ರಸ್ತೆ ಜಲಾವೃತಗೊಂಡಿರುವುದರಿಂದ ಲಾರಿ, ಬಸ್‌ನಂತಹ ವಾಹನಗಳು ಸುಗಮವಾಗಿ ಸಂಚರಿಸಬಹುದಾದರೂ, ಕಾರು, ಆಟೋ ಹಾಗೂ ದ್ವಿಚಕ್ರ ವಾಹನಗಳು ಸಂಚರಿಸಲು ಸಾಧ್ಯವಾಗುತ್ತಿಲ್ಲ. ಎಂಜಿನ್‌ಗೆ ನೀರು ನುಗ್ಗಿದ ಪರಿಣಾಮ ಹತ್ತಕ್ಕೂ ಹೆಚ್ಚು ಕಾರುಗಳು ರಸ್ತೆಯಲ್ಲೇ ಕೆಟ್ಟು ನಿಂತಿವೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯವೂ ದೊರೆಯದೇ ಕೆಲವರು ರಾಮನಗರದ ತಮ್ಮ ಸ್ನೇಹಿತರು ಹಾಗೂ ಪರಿಚಯಸ್ಥರ ಮೂಲಕ ಟೋಯಿಂಗ್ ವಾಹನಗಳನ್ನು ಕರೆಸಿಕೊಂಡು, ತಮ್ಮ ಕಾರುಗಳನ್ನು ಟೋ ಮಾಡಿಕೊಂಡು ಹೋಗುತ್ತಿರುವ ದೃಶ್ಯ ಕಂಡುಬಂತು.

ಈ ರಸ್ತೆಯಲ್ಲಿ ಬೀದಿದೀಪದ ವ್ಯವಸ್ಥೆಯೂ ಇಲ್ಲದ ಕಾರಣ ನೀರಿನಲ್ಲಿ ಕಾರ್ ಕೆಟ್ಟುನಿಂತಾಗ ಅದು ನಿಂತಿರುವುದೇ ಕಾಣದೇ ಬೇರೆ ವಾಹನಗಳು ಅದಕ್ಕೆ ಡಿಕ್ಕಿ ಹೊಡೆಯುವ ಅಪಾಯ ಎದುರಾಗಿದೆ. ಇಂದು ಹಲವಾರು ಸಣ್ಣಪುಟ್ಟ ಅಪಘಾತಗಳು ಕೂಡ ಸಂಭವಿಸಿದ್ದು, ರಸ್ತೆಯಲ್ಲಿ ಕಾರು ಕೆಟ್ಟುನಿಂತ ಪರಿಣಾಮ ಎಕ್ಸ್‌ಪ್ರೆಸ್ ವೇನಲ್ಲಿ ಕಿ.ಮೀ.ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದ ದೃಶ್ಯ ಕಂಡು ಬಂತು. ಎಕ್ಸ್‌ಪ್ರೆಸ್ ವೇನಲ್ಲಿ ಬೇಗನೆ ತಲುಪಬಹುದೆಂದು ಟೋಲ್ ಶುಲ್ಕ ಕಟ್ಟಿ ರಸ್ತೆಗಿಳಿದ ವಾಹನ ಸವಾರರು ಜಲಾವೃತ ಹಾಗೂ ಟ್ರಾಫಿಕ್ ಜಾಂನಿಂದ ಕಂಗೆಟ್ಟರು.


ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಾಮನಗರದ ಬಳಿ ರಾಮದೇವರ ಬೆಟ್ಟವನ್ನು ಕೊರೆದು ರಸ್ತೆ ನಿರ್ಮಿಸಿದೆ. ಬೆಟ್ಟದ ನಡುವೆ ಅಂಡರ್ ಪಾಸ್ ಮೂಲಕ ರಸ್ತೆ ನಿರ್ಮಾಣವಾಗಿದ್ದು, ಮಳೆ ಬಂದಾಗ ಬೆಟ್ಟದಿಂದ ರಸ್ತೆಗೆ ಇಳಿಯುವ ನೀರು ಹೊರ ಹೋಗಲೂ ಸಮರ್ಪಕವಾದ ವ್ಯವಸ್ಥೆ ಮಾಡದಿರುವುದೇ ಈ ಅವಾಂತರಕ್ಕೆ ಕಾರಣ ಎನ್ನಲಾಗಿದೆ. ಸಣ್ಣ ಪೈಪ್‌ಗಳನ್ನು ಅಳವಡಿಸಿದ್ದು, ಅದರಲ್ಲಿ ಮಣ್ಣು ಹಾಗೂ ಕಸ ತುಂಬಿಕೊಂಡಿದ್ದ ಪರಿಣಾಮ ಕಿಂಚಿತ್ತೂ ನೀರು ಹೊರ ಹೋಗದೇ ರಸ್ತೆ ಜಲಾವೃತಗೊಂಡಿದೆ. ಇಂದು ಮಧ್ಯಾಹ್ನ ಪ್ರಾಧಿಕಾರದ ಅಧಿಕಾರಿಗಳು ಸಿಬ್ಬಂದಿಯನ್ನು ಕರೆತಂದು ಪೈಪ್‌ಗಳಲ್ಲಿ ತುಂಬಿದ್ದ ಕಸವನ್ನು ತೆರವುಗೊಳಿಸಿದ ನಂತರ ನಿಧಾನವಾಗಿ ನೀರು ರಸ್ತೆಯಿಂದ ಹೊರಗೆ ಹರಿದು ಹೋಗಿದೆ. ಶನಿವಾರ ಇಷ್ಟೆಲ್ಲಾ ಅವಾಂತರವಾದರೂ, ಅಧಿಕಾರಿಗಳು ವಾಹನ ಸವಾರರ ಸಹಾಯಕ್ಕೆ ಕೂಡಲೇ ಧಾವಿಸದೇ ಇರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ರಾಮನಗರ ಜಿಲ್ಲೆಯ ಕನ್ನಡಪರ, ರೈತಪರ, ಜನಪರ ಹಾಗೂ ದಲಿತ ಸಂಘಟನೆಗಳ ಸಹಯೋಗದೊಂದಿಗೆ ಅವೈಜ್ಞಾನಿಕ ಕಾಮಗಾರಿ ಹಾಗೂ ಟೋಲ್ ಸಂಗ್ರಹದ ವಿರುದ್ಧ ಭಾನುವಾರ ಧರಣಿ ಹಮ್ಮಿಕೊಳ್ಳಲಾಗಿದೆ.





ಮಳೆ ಬಂದಾಗ ಸಣ್ಣಪುಟ್ಟ ಸಮಸ್ಯೆಗಳಾಗುವುದು ಸಹಜ



ಚಾಮರಾಜನಗರ: ಶುಕ್ರವಾರ ರಾತ್ರಿ ಸುರಿದ ಮಳೆಯಿಂದ ರಾಮನಗರ ಬಳಿ ರಸ್ತೆ ಜಲಾವೃತಗೊಂಡಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸರಿಪಡಿಸಲಿದ್ದಾರೆ. ಮಳೆ ಬಂದಾಗ ಸಣ್ಣಪುಟ್ಟ ಸಮಸ್ಯೆಗಳಾಗುವುದು ಸಹಜ. ಎಂಟು ಸಾವಿರ ಕೋಟಿ ಖರ್ಚು ಮಾಡಿ ಇಡೀ ದೇಶವನ್ನೇ ಮೈಸೂರಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿದೆ. ಈ ಬಗ್ಗೆ ಎಲ್ಲರೂ ಹೆಮ್ಮೆಪಡಬೇಕು.

ನಾನು ಮಡಿಕೇರಿಗೆ ಹೋಗಲು ಬೆಂಗಳೂರಿನಿಂದ ಬೆಳಗ್ಗೆಯೇ ಟೋಲ್ ಶುಲ್ಕ ಪಾವತಿಸಿ ಈ ರಸ್ತೆಯಲ್ಲಿ ಬಂದೆ. ಉತ್ತಮವಾದ ರಸ್ತೆಯಿದೆ. ವೇಗವಾಗಿ ಹೋಗಬಹುದು ಎಂದುಕೊಂಡು ಬರುತ್ತಿದ್ದಾಗ ರಸ್ತೆಯಲ್ಲಿ ನೀರು ನಿಂತಿರುವುದು ಕಂಡುಬಂತು. ಬೀದಿದೀಪಗಳಿಲ್ಲದ ಕಾರಣ ಬಹಳ ಹತ್ತಿರ ಬಂದಾಗಲೇ ನೀರು ನಿಂತಿರುವುದು ಗೊತ್ತಾಯಿತು. ತಕ್ಷಣವೇ ಬ್ರೇಕ್ ಹಾಕಿದರೆ ಕಾರು ಪಲ್ಟಿ ಹೊಡೆಯುತ್ತದೆ. ಹೀಗಾಗಿ ಅನ್ಯಮಾರ್ಗವಿಲ್ಲದೇ ನೀರಿನಲ್ಲೇ ಕಾರನ್ನು ಓಡಿಸಿಕೊಂಡು ಬಂದಾಗ ಎಂಜಿನ್‌ಗೆ ನೀರು ನುಗ್ಗಿ ಕಾರು ನಿಂತು ಹೋಯಿತು. ರಾಮನಗರದಿಂದ ಟೋಯಿಂಗ್ ವಾಹನ ಕರೆಸಿ 400 ರೂ. ಕೊಟ್ಟು ಅಲ್ಲಿನ ವರ್ಕ್‌ಶಾಪ್‌ಗೆ ಕಾರನ್ನು ಕೊಂಡೊಯ್ದಾಗ, ಎಂಜಿನ್‌ನಲ್ಲಿ ನೀರು ನುಗ್ಗಿದೆ. ಇಲ್ಲಿ ಏನೂ ಮಾಡಲಾಗುವುದಿಲ್ಲ. ಇನ್ನು ಮೈಸೂರಿಗೆ ಕಾರನ್ನು ಟೋ ಮಾಡಿಕೊಂಡು ಹೋಗಲು 8 ಸಾವಿರ ಕೇಳುತ್ತಿದ್ದಾರೆ. ಕಾರಿನ ರಿಪೇರಿ ಖರ್ಚು ಬೇರೆ. ನಮ್ಮ ಈ ನಷ್ಟವನ್ನು ತುಂಬಿ ಕೊಡುವವರು ಯಾರು? –ಓರ್ವ ಕಾರು ಮಾಲೀಕ



ಬಹುಶಃ ಬೈದು, ಟೀಕಿಸಿ, ಕುಹಕವಾಡಿ ಮುಗಿಯಿತು ಅಂದುಕೊಳ್ಳುತ್ತೀನಿ! ಮಳೆ ನೀರು ಹೋಗುವ ಚರಂಡಿಯನ್ನು ಯಾರೋ ರಸ್ತೆ ಮಾಡಿಕೊಳ್ಳಲು ಅನಧಿಕೃತವಾಗಿ ಮುಚ್ಚಿದ್ದರಿಂದ ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿ ಕೆಲಕಾಲ ಈಜುಕೊಳವಾಗಿತ್ತು. ಎರಡು ಕೊಳವೆಗಳನ್ನು ಹಾಕಿ ಸರಿಪಡಿಸಿದ್ದೇವೆ. ಧನ್ಯವಾದಗಳು. –ಪ್ರತಾಪ್ ಸಿಂಹ, ಮೈಸೂರು–ಕೊಡಗು ಸಂಸದ

ಡಬಲ್ ಇಂಜಿನ್ ಸರ್ಕಾರದ ಹೆಮ್ಮೆಯ ಎಕ್ಸ್‌ಪ್ರೆಸ್ ವೇ ಅಸಲಿ ಮುಖ ಬಯಲು

ರಾಮನಗರ ಶಾಸಕಿ ಅನಿತಾ ಕುಮಾರಸ್ವಾಮಿ ವಾಗ್ದಾಳಿ



ಬೆಂಗಳೂರು, ಮಾ. 18 (ಕೆಎಂಶಿ)– ಡಬಲ್ ಎಂಜಿನ್ ಸರಕಾರಗಳ, ನಮ್ಮ ಹೆಮ್ಮೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಅಸಲಿ ಮುಖ ಮತ್ತೊಮ್ಮೆ ಬಯಲಾಗಿದೆ ಎಂದು ಜೆಡಿಎಸ್ ಶಾಸಕಿ ಅನಿತಾಕುಮಾರಸ್ವಾಮಿ ಕುಟುಕಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಬೆಳಗಿನ ಜಾವ ಸುರಿದ ಒಂದು ಸಣ್ಣ ಮಳೆಗೇ ರಸ್ತೆಯ ಕೆಲವು ಭಾಗ ಕೆರೆಯಾಗಿ, ಚರಂಡಿಯಾಗಿ ಮಾರ್ಪಟ್ಟಿದೆ.

ಕಳೆದ ವರ್ಷ ಅಬ್ಬರಿಸಿದ ಮಹಾಮಳೆಗೆ ಈ ಎಕ್ಸ್‌ಪ್ರೆಸ್ ವೇ ತತ್ತರಿಸಿತ್ತು. ಕಾಮಗಾರಿಗಳು ಮುಗಿದಿರಲಿಲ್ಲ ಎಂದು ಹೇಳಿ ಗುತ್ತಿಗೆದಾರರು ಆಗ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದರು. ಈಗ ವರ್ಷ ಮುಗಿಯುವ ಮೊದಲೇ ಮತ್ತೆ ಬಂದ ಸಣ್ಣ ಮಳೆಗೆ ಸಾವಿರಾರು ಕೋಟಿ ವೆಚ್ಚದ ಈ ಹೆದ್ದಾರಿ ವಾಹನ ಸವಾರರ ಪಾಲಿಗೆ ಸಾವಿನ ಮಾರಿಯಾಗಿ ಮಾರ್ಪಟ್ಟಿದೆ.

ಅವೈಜ್ಞಾನಿಕವಾದ ಈ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸದೆಯೇ, ತರಾತುರಿಯಲ್ಲಿ ಪ್ರಧಾನಿ ಮೋದಿ ಅವರಿಂದ ಉದ್ಘಾಟನೆ ಮಾಡಿಸಿದ ಈ 'ಚುನಾವಣಾ ಗಿಮಿಕ್' ಬಗ್ಗೆ ಜನರು ಹಾದಿಬೀದಿಯಲ್ಲಿ ಆಡಿಕೊಳ್ಳುತ್ತಿದ್ದಾರೆ. ವಾಹನ ಸವಾರರು ಶಪಿಸುತ್ತಿದ್ದಾರೆ. ಇದಕ್ಕೆ ಉತ್ತರದಾಯಿಗಳು ಯಾರು. ಬೆಳಗಿನ ಜಾವ ಸುರಿದ ಮಳೆಯಿಂದ ಹೆದ್ದಾರಿಯಲ್ಲಿ ನೀರು ಆಳೆತ್ತರ ನಿಂತಿದೆ. ವಾಹನಗಳು ಅಪಘಾತಕ್ಕೀಡಾಗಿ ಪ್ರಯಾಣಿಕರು ತೊಂದರೆಗೆ ಸಿಲುಕಿದ್ದಾರೆ. 270 ರೂ. ಟೋಲ್ ಕಟ್ಟಿ ಹೆದ್ದಾರಿಗೆ ಬಂದ ವಾಹನ ಸವಾರರು ಮಳೆ ಚಳಿಯಲ್ಲಿ ಜೀವವನ್ನು ಅಂಗೈಯಲ್ಲಿ ಇಟ್ಟುಕೊಂಡು ನರಳಿದ್ದಾರೆ. ಇದು ನಿಜಕ್ಕೂ ನೋವಿನ ಸಂಗತಿ. ಕೆಲ ದಿನಗಳ ಹಿಂದೆ ಹೆದ್ದಾರಿಯಲ್ಲಿ ಕೆಟ್ಟು ನಿಂತಿದ್ದ ವಾಹನದಲ್ಲಿದ್ದ ದಂಪತಿಯ ಹಣ, ಚಿನ್ನಾಭರಣವನ್ನು ದೋಚಿದ್ದ ಪ್ರಕರಣ ವರದಿಯಾಗಿತ್ತು. ಜತೆಗೆ, ನಿರಂತರ ಅಪಘಾತಗಳಿಂದ 80ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಹಾಗಾದರೆ, ಈ ಹೆದ್ದಾರಿಯ ಭದ್ರತೆ, ಸುರಕ್ಷತೆ ಪಾಡೇನು? ಟೋಲ್ ಸಂಗ್ರಹ ಮಾಡಿದರೆ ಸಾಕೇ. ಸರ್ವಿಸ್ ರಸ್ತೆಯೂ ಸೇರಿದಂತೆ ಈ ಹೆದ್ದಾರಿಯ ಎಲ್ಲಾ ಬಾಕಿ ಬಿದ್ದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಅದುವರೆಗೂ ಟೋಲ್ ಸಂಗ್ರಹ ನಿಲ್ಲಿಸಬೇಕು. ಈ ರಸ್ತೆಗಾಗಿ ಭೂಮಿ ಕಳೆದುಕೊಂಡಿರುವ ರಾಮನಗರ, ಮಂಡ್ಯ ಸೇರಿ ಆ ಭಾಗದ ಎಲ್ಲ ಜನರು ಮುಕ್ತವಾಗಿ ಸಂಚರಿಸಲು ಅವಕಾಶ ಮಾಡಿಕೊಡಬೇಕು ಎಂದು ಅನಿತಾಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಜಡ್ಜ್ : (80 ವರ್ಷದ ಮುದುಕನಿಗೆ) ಅಲ್ಲ, ಮಾರಾಯ ನಿಂಗೆ ನಾಚಿಕೆ ಆಗಲ್ವಾ? ಈ ವಯಸ್ಸಿನಲ್ಲಿ 18ರ ಹುಡುಗಿಯನ್ನು ಚುಡಾಯಿಸೋಕೆ ಹೋಗಿದ್ದಿಯಲ್ಲ, 20ರ ಹುಡುಗನ ಹಾಗೆ? ಮುದುಕ ಅಂತ ಕ್ಷಮೆ ನೀಡಿದ್ದೇನೆ, ಮನೆಗೆ ಹೋಗು...

ಮುದುಕ : (ಸಿಟ್ಟಿನಿಂದ) ಸ್ವಾಮಿ ನಾನು ಹುಡುಗಿಯನ್ನು ಚುಡಾಯಿಸಿದ್ದು 20 ವರ್ಷ ವಯಸ್ಸಿನಲ್ಲಿ, ನೀವೆಲ್ಲಾ ಕೇಸ್ ಮುಂದಕ್ಕೆ ಹಾಕಿ ಹಾಕಿ ಈಗ ನಂಗೆ 80 ವರ್ಷ ಆಗಿದೆಯಷ್ಟೆ...

ಮೈಸೂರು ಮಿತ್ರ

ಭಾನುವಾರ, 19 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನೆಲಕ್ಕೆ ಅಪ್ಪಳಿಸಿದಾಗ, ಎಷ್ಟು ಎತ್ತರಕ್ಕೆ ಪುಟಿದು ನಿಲ್ಲಲು ನಿಮಗೆ ಸಾಧ್ಯ ಎನ್ನುವುದರ ಮೇಲೆ ಯಶಸ್ಸು ಅವಲಂಬಿತವಾಗಿರುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಸೆ ಆಕಾಶದಷ್ಟು, ಸಾಧನೆ ಸಾಸಿವೆಯಷ್ಟು

ನಿಮ್ಮ ಪತ್ರಗಳು

ಪೊಲೀಸ್ ಕಮಿಷನರ್ ಗಮನಕ್ಕೆ

ಮಾನ್ಯರೆ,

ಪಡುವಾರಹಳ್ಳಿ ಒಂದನೇ ಕ್ರಾಸಿನಲ್ಲಿ ಇತ್ತೀಚೆಗೆ ಪುಂಡರ ಹಾವಳಿ ಹೆಚ್ಚಾಗಿದೆ. ಕಳೆದ 6–7 ತಿಂಗಳಿನಿಂದ ಇವರ ಹಾವಳಿ ವಿಪರೀತವಾಗಿದ್ದು, ಇಲ್ಲಿನ ನಿವಾಸಿಗಳು ನೆಮ್ಮದಿಯಿಂದ ಜೀವಿಸಲು ಆಗುತ್ತಿಲ್ಲ. ಪುಂಡರು ಮಧ್ಯರಾತ್ರಿಯಲ್ಲಿ ಮದ್ಯ ಸೇವಿಸಿ ಅವಾಚ್ಯವಾಗಿ ಬೈದಾಡುತ್ತಾ ಓಡಾಡುತ್ತಿರುತ್ತಾರೆ.ರಾತ್ರಿಯಲ್ಲಿ ಬೈಕ್‌ಗಳಿಂದ ಪೆಟ್ರೋಲ್ ಕದಿಯುವುದು, ರಸ್ತೆಯಲ್ಲಿ ಕುಳಿತು ಜೋರಾಗಿ ಗಲಾಟೆ ಮಾಡಿಕೊಂಡು ಮದ್ಯ ಸೇವಿಸುತ್ತಾ ನಾಗರಿಕರಲ್ಲಿ ಭೀತಿ ಮೂಡಿಸುತ್ತಿದ್ದಾರೆ.

ಕತ್ತಲಾಗುತ್ತಿದ್ದಂತೆಯೇ ಕರ್ಕಶವಾಗಿ ಶಬ್ದ ಮಾಡುತ್ತಾ ಅತಿ ವೇಗವಾಗಿ ಬೈಕ್ ಸವಾರಿ ಮಾಡುತ್ತಾ ಶಾಂತಿ ಭಂಗ ಉಂಟುಮಾಡುತ್ತಿದ್ದಾರೆ. ಇವರ ವೇಗಕ್ಕೆ ಯಾರೇ ಅಡ್ಡ ಸಿಕ್ಕಿದರೂ ಬದುಕುಳಿಯಲಾರರು.

ರಾತ್ರಿ ವೇಳೆ ಹಲವಾರು ಬಾರಿ ಇಲ್ಲಿನ ನಿವಾಸಿಗಳು ಪೊಲೀಸ್ ಕಂಟ್ರೋಲ್ ರೂಮ್ 112ಕ್ಕೆ ಕರೆ ಮಾಡಿ ತಿಳಿಸಿದ್ದಾರೆ. ಪೊಲೀಸರು ಬರುತ್ತಿದ್ದಂತೆಯೇ ಪುಂಡರು ಗಲ್ಲಿ ಗಲ್ಲಿಗಳಲ್ಲಿ ಓಡಿ ಹೋಗುತ್ತಾರೆ. ರಸ್ತೆಯ ಮತ್ತೊಂದು ತುದಿಯಲ್ಲಿ ನಿಂತು ಈ ಪುಂಡರು ಪೊಲೀಸರನ್ನೇ ಅಣಕಿಸುತ್ತಾರೆ. ಹಲವಾರು ವರ್ಷಗಳಿಂದ ನೆಮ್ಮದಿಯಿಂದ ಬದುಕುತ್ತಿದ್ದ ಇಲ್ಲಿನ ನಿವಾಸಿಗಳಿಗೆ ಮಾನಸಿಕ ನೆಮ್ಮದಿ ಇಲ್ಲದಂತಾಗಿದೆ. ಈ ರಸ್ತೆಯಲ್ಲಿ ಯಾವುದೇ ಮನೆಯಲ್ಲಿ ಸಿಸಿ ಕ್ಯಾಮರಾಗಳು ಇಲ್ಲದಿರುವುದು ಈ ಪುಂಡರಿಗೆ ವರದಾನವಾಗಿದೆ.

ಈ ಪುಂಡರನ್ನು ಹದ್ದುಬಸ್ತಿನಲ್ಲಿಡಲು ಪೊಲೀಸರಿಗೆ ಕಳೆದ 6 ತಿಂಗಳಿನಿಂದ ಸಾಧ್ಯವಾಗಿಲ್ಲ. ಇನ್ನು ಮುಂದಾದರೂ ಈ ಪುಂಡರ ಹೆಡೆಮುರಿ ಕಟ್ಟಿ ಅವರ ಹಾವಳಿಗೆ ಬ್ರೇಕ್ ಹಾಕಲು ಪೊಲೀಸ್ ಆಯುಕ್ತರು ಕ್ರಮ ಕೈಗೊಳ್ಳಬೇಕಿದೆ. ಆ ಮೂಲಕ ಇಲ್ಲಿನ ನಿವಾಸಿಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಬೇಕಾಗಿದೆ.

–ಪಡುವಾರಹಳ್ಳಿ ನಿವಾಸಿಗಳು, ಪಡುವಾರಹಳ್ಳಿ, ಮೈಸೂರು

ಪಠ್ಯ ಪುಸ್ತಕಗಳ ಬೆಲೆ ಏರಿಕೆ ಖಂಡನೀಯ

ಮಾನ್ಯರೆ,

ವಿದ್ಯೆ ಎಂಬುದು ಮನುಷ್ಯನ ಜೀವನ ರೂಪಿಸುವ ಸಾಧನವಾಗಿದೆ. ವಿದ್ಯೆ ಮನುಷ್ಯನ ಜೀವನದ ಅವಿಭಾಜ್ಯ ಅಂಗವಾಗಿದ್ದು, ಪ್ರತಿಯೊಬ್ಬರ ಕೈಗೆಟುಕುವಂತಾಗಬೇಕು. ಆದರೆ ಪ್ರಸ್ತುತ ವಿದ್ಯಾಭ್ಯಾಸ ವ್ಯಾಪಾರವಾಗಿದ್ದು, ಅತ್ಯಂತ ಲಾಭದಾಯಕ ಉದ್ಯಮವಾಗಿ ಬೆಳೆದಿದೆ.

ವಿಶೇಷವಾಗಿ ಖಾಸಗಿ ಶಾಲೆಗಳು ಡೊನೇಷನ್, ಸಮವಸ್ತ್ರ, ಬ್ಯಾಡ್ಜ್, ಬೆಲ್ಟ್ ಮತ್ತು ಶಾಲೆಯಿಂದಲೇ ಪುಸ್ತಕಗಳನ್ನು ಹೆಚ್ಚು ಬೆಲೆಗೆ ಮಾರುವ ಮೂಲಕ ಪೋಷಕರುಗಳಿಗೆ ಮಕ್ಕಳ ವಿದ್ಯಾಭ್ಯಾಸ ಹೊರೆಯಾಗಿ ಪರಿಣಮಿಸಿದೆ.ಖಾಸಗಿ ಶಾಲೆಗಳಲ್ಲಿ ವಿತರಿಸುವ ಪಠ್ಯ ಪುಸ್ತಕಗಳ ದರ ಶೇಕಡ 25ರಷ್ಟು ದುಬಾರಿಯಾಗಿದ್ದು, 19000 ಶಾಲಾ ಮತ್ತು ಕಾಲೇಜುಗಳ 52 ಲಕ್ಷ ವಿದ್ಯಾರ್ಥಿಗಳ ಪೋಷಕರಿಗೆ ಇದರಿಂದಾಗಿ ಹೊರೆಯಾಗಿ ಪರಿಣಮಿಸಿದೆ.

ಪ್ರಸ್ತುತ 2023–24 ನೇ ಶೈಕ್ಷಣಿಕ ಸಾಲಿನ ಪಠ್ಯ ಪುಸ್ತಕಗಳಾದ ಗಣಿತ ಭಾಗ–2 ರ ಪುಸ್ತಕದ ಬೆಲೆ ಕಳೆದ ವರ್ಷ 46 ರೂಗಳಿದ್ದು, ಈ ವರ್ಷ ಅದೇ ಪುಸಕ್ತದ ಬೆಲೆ 60 ರೂಗೆ ಹೆಚ್ಚಳ ಮಾಡಿರುವುದು ನ್ಯಾಯಸಮ್ಮತವಲ್ಲದ ಕ್ರಮವಾಗಿದೆ. ಪಠ್ಯ ಪುಸ್ತಕಗಳ ಬೆಲೆ ಏರಿಕೆಗೆ ಹಲವಾರು ಕಾರಣಗಳಿದ್ದು, ಉದಾಹರಣೆಗೆ ಜಿ.ಎಸ್.ಟಿ, ಕಾಗದದ ಬೆಲೆ ಏರಿಕೆ, ಮುದ್ರಣ ವೆಚ್ಚ ಮುಂತಾದ ಕಾರಣಗಳಿದ್ದರೂ ಖಾಸಗಿ ಶಾಲೆಗಳು ಪಠ್ಯ ಪುಸ್ತಕಗಳ ಬೆಲೆ ಏರಿಕೆ ಮಾಡಿರುವುದು ಸರಿಯಾದ ಕ್ರಮವಲ್ಲ.

ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶ ಮಾಡಿ ಖಾಸಗಿ ಶಾಲೆಗಳ ಈ ಕ್ರಮಕ್ಕೆ ಕಡಿವಾಣ ಹಾಕಬೇಕು ಮತ್ತು ವಿದ್ಯಾರ್ಥಿಗಳು ಹಾಗೂ ಪೋಷಕರುಗಳಿಗೆ ಹೊರೆಯಾಗದಂತೆ ನೋಡಿಕೊಳ್ಳಬೇಕು. –ರಾಸುಮ ಭಟ್, ಚಿಕ್ಕಮಗಳೂರು.

ದರ್ಶನ್ ಬಯಸಿದರೆ ರಾಜಕಾರಣಕ್ಕೆ ಬರಲಿ

ಮಾನ್ಯರೆ,

ರಾಜ್ಯದ ಹಿರಿಯ ಕಾಂಗ್ರೆಸ್ ನಾಯಕ, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪನವರು, ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ತಮ್ಮ ಇರಾದೆಯನ್ನು ಬದಿಗೊತ್ತಿ, ದಿವಂಗತ ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಅವರು ಸದರಿ ಕ್ಷೇತ್ರದಿಂದ ಸ್ಪರ್ಧಿಸಲಿ ಎಂದು ಹೇಳುವ ಮೂಲಕ ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ಟಿನ ಪ್ರಬಲ ಆಕಾಂಕ್ಷಿಯಾಗಿದ್ದ ಮಹದೇವಪ್ಪನವರು ಬದಲಾದ ರಾಜಕೀಯ ಸನ್ನಿವೇಶದಲ್ಲಿ ಇತ್ತೀಚೆಗೆ ಧ್ರುವನಾರಾಯಣ್ ಅವರ ಮನೆಗೆ ತೆರಳಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿ ನಂಜನಗೂಡು ಕ್ಷೇತ್ರದಿಂದ ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಸ್ಪರ್ಧಿಸುವಂತೆ ಕೋರಿದ್ದಾರೆ. ಇಂದಿನ ದಿನಗಳಲ್ಲಿ ರಾಜಕೀಯ ಸಾಕಷ್ಟು ಗಬ್ಬೆದ್ದು ಹೋಗಿದ್ದು, ಬಹುತೇಕ ಜನ, ಪಕ್ಷ ಭೇದವಿಲ್ಲದೇ ರಾಜಕಾರಣಿಗಳ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದಾರೆ. ರಾಜಕಾರಣಿಗಳೆಂದರೆ, ಭ್ರಷ್ಟಾಚಾರಿಗಳು, ಹಣ ಮಾಡುವವರು ಮುಂತಾದ ನಕಾರಾತ್ಮಕ ಭಾವನೆಗಳನ್ನು ಹೊಂದಿದ್ದಾರೆ. ಇಂತಹ ಕಲುಷಿತ ರಾಜಕೀಯಕ್ಕೆ ದರ್ಶನ್‌ರಂತಹ ಯುವಕರು ಬರಬೇಕು ಎಂಬುದು ಅತ್ಯಂತ ಸೂಕ್ಷ್ಮವಾದ ವಿಚಾರ. ಆದರೂ ರಾಜಕೀಯದಲ್ಲಿ ಒಳ್ಳೆಯವರು, ಕೆಟ್ಟವರು, ಪ್ರಾಮಾಣಿಕರು, ಭ್ರಷ್ಟರು ಮುಂತಾದವರು ಇದ್ದೇ ಇರುತ್ತಾರೆ. ದರ್ಶನ್ ಅವರನ್ನು ಯಾರೇ ಆಗಲಿ ಬಲವಂತವಾಗಿ ರಾಜಕೀಯವೆಂಬ ಕೂಪಕ್ಕೆ ತಳ್ಳಬಾರದು. ಅವರೇ ವೈಯಕ್ತಿಕವಾಗಿ ಆಸಕ್ತಿ ಹೊಂದಿದ್ದರೆ ರಾಜಕೀಯ ಪ್ರವೇಶಿಸಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕಾಮಗಾರಿ ಗುಣಮಟ್ಟದಿಂದ ಕೂಡಿರಲಿ

ಮಾನ್ಯರೆ,

ಪ್ರಧಾನಿ ಮೋದಿಯವರು ಹಲವಾರು ಕಾರಣಗಳಿಂದ (ಚುನಾವಣೆ ಪ್ರಚಾರ) ದೇಶದೆಲ್ಲೆಡೆ ಸಂಚಾರ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಆಗಮಿಸುತ್ತಿದ್ದಾರೆ ಎಂದರೆ ರಸ್ತೆಗಳೆಲ್ಲಾ (ಅವರು ಸಂಚರಿಸುವ ರಸ್ತೆಗಳು ಮಾತ್ರ) ಡಾಂಬರೀಕರಣ ಮಾಡಿ ರಸ್ತೆಯಲ್ಲಿ ಇರುವ ಲೋಪದೋಷಗಳೆಲ್ಲಾ ಕ್ಷಣಮಾತ್ರದಲ್ಲಿ ಸರಿ ಮಾಡಲಾಗುತ್ತಿದೆ. ಇದು ತಾತ್ಕಾಲಿಕ ಕಾಮಗಾರಿಯಾಗಿರುತ್ತದೆ. ಇದರಿಂದ ಅನಗತ್ಯ ಖರ್ಚು ಆಗುತ್ತದೆ. ಒಮ್ಮೊಮ್ಮೆ ಗಾಳಿ, ನೆರಳು ಕೊಡುವ ಸಾಲು ಮರಗಳನ್ನು ಕಡಿದಿರುತ್ತಾರೆ. ಇದು ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಡಾಂಬರೀಕರಣವಾದ ರಸ್ತೆಗಳು ಸ್ವಲ್ಪ ದಿನಗಳ ನಂತರ ಗುಂಡಿಗಳಾಗಿ ಮಾರ್ಪಾಡಾಗುತ್ತಿದೆ. ಮಳೆ ಬಂದರಂತೂ ರಸ್ತೆಗಳೆಲ್ಲಾ ಮತ್ತಷ್ಟು ಅಧ್ವಾನವಾಗುತ್ತಿದೆ. ಸಾರ್ವಜನಿಕರಿಗೂ ಓಡಾಡುವುದಕ್ಕೂ ಕಷ್ಟವಾಗುತ್ತದೆ. ಅಪಘಾತಕ್ಕೂ ಕಾರಣವಾಗುತ್ತಿದೆ. ಆದ್ದರಿಂದ ಯಾವುದೇ ರಸ್ತೆ ಕಾಮಗಾರಿ ನಡೆದರೂ ಗುಣಮಟ್ಟದ ಕೆಲಸವಾಗಲಿ. ಇದರಿಂದ ಸರ್ಕಾರಕ್ಕೆ ಅನಗತ್ಯ ಖರ್ಚು ತಪ್ಪುತ್ತದೆ ಸಾರ್ವಜನಿಕರಿಗೂ ಅನುಕೂಲವಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಪೂರ್ವೋತ್ತರ ರಾಜ್ಯಗಳಲ್ಲೂ ಬಿಜೆಪಿ ಪ್ರಾಬಲ್ಯ



ಚುನಾವಣೆಗಳು ಯಾವುದೇ ಇರಲಿ ಬಿಜೆಪಿ ಸದಾ ಗೆಲುವಿಗಾಗಿ ಪೂರ್ಣ ಸಿದ್ಧತೆಯೊಂದಿಗೆ ಚುನಾವಣಾ ಕಣಕ್ಕೆ ಧುಮುಕುತ್ತದೆ. ಇದು ಬಿಜೆಪಿಯಲ್ಲಿರುವ ಅತ್ಯಂತ ಧನಾತ್ಮಕ ಅಂಶವಾಗಿದೆ. ಹಿಂದೆ ಅಟಲ್‌ಜೀ, ಅಡ್ವಾಣಿಜೀ ಕಾಲದಲ್ಲಿ ರಾಜ್ಯಗಳ ನಾಯಕರು ಕಾರ್ಯಕ್ರಮಗಳನ್ನು ರೂಪಿಸಿ ಕೇಂದ್ರ ನಾಯಕರನ್ನು ಆಮಂತ್ರಿಸುತ್ತಿದ್ದರು. ಪ್ರಧಾನಿ ಮೋದಿ, ಅಮಿತ್ ಶಾ ಅವರು ನಾಯಕತ್ವ ವಹಿಸಿದ ನಂತರ ರಾಷ್ಟ್ರೀಯ ನಾಯಕತ್ವವೇ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ರಾಜ್ಯ ನಾಯಕರಿಗೆ ವಿಶ್ವಾಸ, ಉತ್ಸಾಹ ತುಂಬಿಸಿ ಪಕ್ಷದ ಕೆಲಸ ಮಾಡಲು ಪ್ರೇರೇಪಿಸುತ್ತದೆ. ಕೇಂದ್ರ ನಾಯಕರು ಸ್ಥಾನೀಯ ನಾಯಕರ, ಕಾರ್ಯಕರ್ತರ ನಿಷ್ಠೆ, ಕ್ರಿಯಾಶೀಲತೆ, ಕಾರ್ಯ ಸಾಮರ್ಥ್ಯಗಳನ್ನು ಪರಿಶೀಲಿಸಿ ಹೊಣೆಗಾರಿಕೆ ವಹಿಸುತ್ತಾರೆ. ಈ ಪ್ರಕ್ರಿಯೆ ಬಿಜೆಪಿಯ ಅತ್ಯಂತ ಪರಿಣಾಮಕಾರಿ ಕಾರ್ಯಶೈಲಿಯಾಗಿದೆ. ಈ ರೀತಿಯ ಕಾರ್ಯ ವಿಧಾನದಿಂದ ಪಕ್ಷವು ಉತ್ತಮ ಫಲಿತಾಂಶ ಪಡೆಯುತ್ತಿದೆ.

ಸಾರ್ವತ್ರಿಕ ಚುನಾವಣೆಗೆ ಕೇವಲ ಒಂದು ವರ್ಷ ಉಳಿದಿರುವಾಗಲೇ ಬಿಜೆಪಿ ಪೂರ್ವೋತ್ತರ ಭಾರತದ ಮೂರೂ ರಾಜ್ಯಗಳಲ್ಲಿ ವಿಜಯ ಸಾಧಿಸಿದೆ. ತ್ರಿಪುರಾದಲ್ಲಿ 2ನೇ ಬಾರಿ ಅಧಿಕಾರಕ್ಕೇರುವ ಮೂಲಕ 2018ರ ಗೆಲುವು ಆಕಸ್ಮಿಕವಲ್ಲ ಎಂದು ಸಾಬೀತುಪಡಿಸಿದೆ. ನಾಗಾಲ್ಯಾಂಡ್‌ನಲ್ಲಿ ಚುನಾವಣಾ ಪೂರ್ವ ಮೈತ್ರಿಯೊಂದಿಗೆ, ಮೇಘಾಲಯದಲ್ಲೂ ಚುನಾವಣೋತ್ತರ ಮೈತ್ರಿಯೊಂದಿಗೆ ಬಿಜೆಪಿ ಮೂರು ರಾಜ್ಯಗಳಲ್ಲಿ ಸರಕಾರ ರಚಿಸಿದೆ. ಬಂಡುಕೋರರಿಂದ, ಪ್ರತ್ಯೇಕತಾವಾದಿಗಳಿಂದ ಸಮಸ್ಯಾಗ್ರಸ್ತವಾಗಿದ್ದ ಈ ಮೂರು ರಾಜ್ಯಗಳಲ್ಲಿ ರಾಷ್ಟ್ರೀಯವಾದಿ ಬಿಜೆಪಿಯ ಗೆಲುವು ಅತ್ಯಂತ ಮಹತ್ವಪೂರ್ಣವಾಗಿದೆ. ಕಾಂಗ್ರೆಸ್ ದೇಶದಲ್ಲಿ ಅಧಿಕಾರದಲ್ಲಿದ್ದಷ್ಟು ಕಾಲ ಕಾಣುತ್ತಿದ್ದ Gobak Indian dogs ಎಂಬ ಭಿತ್ತಿಪತ್ರಗಳಿಂದು ಮಾಯವಾಗಿ ನಾಗಾಲ್ಯಾಂಡ್ ಜನರು ತಾವು ಭಾರತೀಯರೆಂದು ಹೆಮ್ಮೆಯಿಂದ ಹೇಳುತ್ತಿರುವುದು ಅಸಾಮಾನ್ಯ ಪರಿವರ್ತನೆಯಾಗಿದೆ. ಪ್ರಧಾನಿ ಮೋದಿಯವರು ಪೂರ್ವೋತ್ತರ ರಾಜ್ಯಗಳೊಂದಿಗೆ ಸಾಧಿಸಿರುವ ಸಂವಹನ, ಬಾಂಧವ್ಯವು ಬಿಜೆಪಿಗೆ ಅದ್ಭುತ ಫಲ ನೀಡಿದೆ. ಗಾತ್ರದಲ್ಲಿ ಈ ಮೂರು ರಾಜ್ಯಗಳು ಚಿಕ್ಕದಾಗಿದ್ದರೂ, ದೊಡ್ಡ ರಾಜ್ಯಗಳಿಗೆ ಕೊಡುವಷ್ಟೇ ಮಹತ್ವವನ್ನು ಬಿಜೆಪಿಯ ಕೇಂದ್ರ ನಾಯಕರು ನೀಡಿದ್ದರು. ಇದಕ್ಕೆ ಪ್ರತಿಯಾಗಿ ಕೈಗೆಟುಕದ ದ್ರಾಕ್ಷಿ ಹುಳಿ ಎಂದು ಕಾಲ್ಕಿತ್ತ ನರಿಯ ಕಥೆಯಂತೆ ಕಾಂಗ್ರೆಸ್‌ನ ಅಖಿಲ ಭಾರತ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆಯವರು ಈ ಮೂರು ಅತ್ಯಂತ ಚಿಕ್ಕ ರಾಜ್ಯಗಳಾಗಿದ್ದು, ರಾಷ್ಟ್ರ ರಾಜಕಾರಣದಲ್ಲಿ ಇವುಗಳಿಗೆ ಅಷ್ಟೇನೂ ಮಹತ್ವವಿಲ್ಲ. ಇವು ಸಹಜವಾಗಿ ಕೇಂದ್ರದಲ್ಲಿರುವ ಸರಕಾರದೊಂದಿಗೆ ಕೈಜೋಡಿಸುತ್ತಾರೆ ಎನ್ನುವ ಮೂಲಕ ಪಕ್ಷದ ಮಾನಸಿಕತೆಯನ್ನು ತೋರಿದರು.

ಚುನಾವಣೆಗಳು ಯಾವುದೇ ಇರಲಿ ಬಿಜೆಪಿ ಸದಾ ಗೆಲುವಿಗಾಗಿ ಪೂರ್ಣ ಸಿದ್ಧತೆಯೊಂದಿಗೆ ಚುನಾವಣಾ ಕಣಕ್ಕೆ ಧುಮುಕುತ್ತದೆ. ಇದು ಬಿಜೆಪಿಯಲ್ಲಿರುವ ಅತ್ಯಂತ ಧನಾತ್ಮಕ ಅಂಶವಾಗಿದೆ. ಹಿಂದೆ ಅಟಲ್‌ಜೀ, ಅಡ್ವಾಣಿಜೀ ಕಾಲದಲ್ಲಿ ರಾಜ್ಯಗಳ ನಾಯಕರು ಕಾರ್ಯಕ್ರಮಗಳನ್ನು ರೂಪಿಸಿ ಕೇಂದ್ರ ನಾಯಕರನ್ನು ಆಮಂತ್ರಿಸುತ್ತಿದ್ದರು. ಪ್ರಧಾನಿ ಮೋದಿ, ಅಮಿತ್ ಶಾ ಅವರು ನಾಯಕತ್ವ ವಹಿಸಿದ ನಂತರ ರಾಷ್ಟ್ರೀಯ ನಾಯಕತ್ವವೇ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ರಾಜ್ಯ ನಾಯಕರಿಗೆ ವಿಶ್ವಾಸ, ಉತ್ಸಾಹ ತುಂಬಿಸಿ ಪಕ್ಷದ ಕೆಲಸ ಮಾಡಲು ಪ್ರೇರೇಪಿಸುತ್ತದೆ. ಕೇಂದ್ರ ನಾಯಕರು ಸ್ಥಾನೀಯ ನಾಯಕರ, ಕಾರ್ಯಕರ್ತರ ನಿಷ್ಠೆ ಕ್ರಿಯಾಶೀಲತೆ, ಕಾರ್ಯ ಸಾಮರ್ಥ್ಯಗಳನ್ನು ಪರಿಶೀಲಿಸಿ ಹೊಣೆಗಾರಿಕೆ ವಹಿಸುತ್ತಾರೆ. ಈ ಪ್ರಕ್ರಿಯೆ ಬಿಜೆಪಿಯ ಅತ್ಯಂತ ಪರಿಣಾಮಕಾರಿ ಕಾರ್ಯಶೈಲಿಯಾಗಿದೆ. ಈ ರೀತಿಯ ಕಾರ್ಯ ವಿಧಾನದಿಂದ ಪಕ್ಷವು ಉತ್ತಮ ಫಲಿತಾಂಶ ಪಡೆಯುತ್ತಿದೆ. ಗುಜರಾತ್, ರಾಜಸ್ಥಾನದ ಮರುಭೂಮಿ ಪ್ರದೇಶಗಳಿರಲಿ, ಲಡಾಕ್, ಕಾಶ್ಮೀರದಂತಹ ಶೀತ ಪ್ರದೇಶವಿರಲಿ, ದಕ್ಷಿಣದ ಕೇರಳದ ಹಸಿರು ಪ್ರದೇಶವಿರಲಿ, ತಮಿಳುನಾಡಿನ ತೀವ್ರ ಬಿಸಿಲ ಶಾಖವಿರುವ ಪ್ರದೇಶವಿರಲಿ ದೇಶದ ಎಲ್ಲಾ ಪ್ರದೇಶದ ಪಕ್ಷದ ತಳಮಟ್ಟದ ಕಾರ್ಯಕರ್ತರೊಂದಿಗೆ ಸಂಪರ್ಕ, ಸಂವಹನವಿರುತ್ತದೆ. ಈ ಮೂಲಕ ತಳಮಟ್ಟದ ಕಾರ್ಯಕರ್ತರಿಂದ, ಉನ್ನತ ನಾಯಕರವರೆಗಿನ ಶ್ರೇಣಿಗೆ ಅನ್ವಯವಾಗುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ, ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕಾರ್ಯಕರ್ತರನ್ನು ಕ್ರಿಯಾಶೀಲಗೊಳಿಸಿ ಸಮಾಜದ ಕೊನೆಯ ವ್ಯಕ್ತಿಯವರೆಗೆ ಪಕ್ಷದ ಸಂದೇಶವನ್ನು ತಲುಪಿಸುವಲ್ಲಿ ಅವಿಶ್ರಾಂತವಾಗಿ ದುಡಿಯುತ್ತಾರೆ. ಈ ಮೂರು ರಾಜ್ಯಗಳಲ್ಲಿ ಇದೇ ಕಾರ್ಯತಂತ್ರ ಭಾಜಪಕ್ಕೆ ಯಶಸ್ಸು ನೀಡಿದೆ.

ಕ್ವಾರ್ಟರ್ ಫೈನಲ್‌ನಂತಿದ್ದ ಈ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಮುಂದಿನ ಕೆಲವೇ ತಿಂಗಳಲ್ಲಿ ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಘಡ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗಳು ಸೆಮಿಫೈನಲ್‌ನಂತಿದೆ. ರಾಜಸ್ಥಾನ ಹಾಗೂ ಛತ್ತೀಸ್‌ಗಢಗಳಲ್ಲಿರುವ ವಿಪಕ್ಷ ಸರಕಾರಗಳನ್ನು ಸೋಲಿಸಲು ಬಿಜೆಪಿ ಪ್ರಬಲ ಹೋರಾಟಕ್ಕೆ ಸಿದ್ಧವಾಗುತ್ತಿದೆ. ಮಧ್ಯ ಪ್ರದೇಶ ಹಾಗೂ ವಿಶೇಷವಾಗಿ ಕರ್ನಾಟಕದಲ್ಲಿ ಬಲವಾಗಿರುವ ಆಡಳಿತ ವಿರೋಧಿ ಅಲೆಯನ್ನು ಬಿಜೆಪಿ ಎದುರಿಸಬೇಕಾಗಿದೆ.

ಕ್ರೈಸ್ತ ಬಾಹುಳ್ಯವಿರುವ ನಾಗಾಲ್ಯಾಂಡ್‌ನಲ್ಲಿ ಬಿಜೆಪಿ ಮೈತ್ರಿಕೂಟ ಸಾಧಿಸಿರುವ ಗೆಲುವು ಕಾಂಗ್ರೆಸ್‌ಗೆ ಭಾರಿ ಆಘಾತ ನೀಡಿದೆ. ಈ ವಿಜಯವು ದೇಶದ ಕೆಲವು ರಾಜ್ಯಗಳಲ್ಲಿ ಗಮನಾರ್ಹ ಸಂಖ್ಯೆಯಲ್ಲಿರುವ ಈ ಸಮುದಾಯದ ನಡುವೆ ಬಿಜೆಪಿ ಬಗ್ಗೆ ಧನಾತ್ಮಕ ಸಂಕೇತಗಳನ್ನು ರವಾನಿಸಿದೆ. ಬಿಜೆಪಿ ಗಳಿಸಿದ ವಿಜಯ ವಿಪಕ್ಷಗಳ ಸಮಸ್ಯೆ ಇನ್ನಷ್ಟು ಹೆಚ್ಚಿಸಿದೆ. ತ್ರಿಪುರಾದಲ್ಲಿ ಬಿಜೆಪಿ ಎದುರು ಕಾಂಗ್ರೆಸ್ –ಸಿಪಿಎಂ ಮೈತ್ರಿಕೂಟ ರಚಿಸಿಯೂ ದಯನೀಯ ಸೋಲು ಕಂಡವು. ಒಂದು ಕಾಲಕ್ಕೆ ಬಿಜೆಪಿಗೆ ಪ್ರವೇಶಿಸಲು ಸಾಧ್ಯವೇ ಇಲ್ಲ ಎಂಬಂತಿದ್ದ ಈಶಾನ್ಯ ರಾಜ್ಯಗಳ ಜನತೆಯಿಂದು, ರಾಜ್ಯದೊಳಗೆ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ಗುರುತಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಮೇಲೆ ವಿಶ್ವಾಸ ತಾಳಿದ್ದಾರೆ. ಈಶಾನ್ಯ ರಾಜ್ಯಗಳ ಜನತೆಗೆ ಬೇಕಾಗಿರುವುದನ್ನು ನೀಡಿ ಬಿಜೆಪಿ ತನ್ನ ವಿಶ್ವಾಸಾರ್ಹತೆಯನ್ನು ಬೆಳೆಸಿಕೊಂಡಿದೆ. ಕಾಂಗ್ರೆಸ್‌ಗಂತೂ ಈ ಸೋಲು ಭಾರೀ ಆಘಾತ ನೀಡಿದೆ. ಭಾರಿ ಪ್ರಚಾರ ನೀಡಿದ ರಾಹುಲ್ ಗಾಂಧಿಯವರ ಭಾರತ ಜೋಡೋ ಯಾತ್ರೆಯೂ ನಿರೀಕ್ಷಿತ ಫಲ ನೀಡಲಿಲ್ಲ. ಅದಾನಿ ಪ್ರಕರಣವು ಮೋದಿ ವರ್ಚಸ್ಸಿನ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರಲಿಲ್ಲ. ಮೋದಿಯವರ ಚಾರಿತ್ರ್ಯ ಹನನ ಮಾಡುವ ಯತ್ನದಲ್ಲಿ ಪ್ರತಿಪಕ್ಷಗಳ ನಾಯಕರೇ ಕುಬ್ಜರಾದರು. ವಿಘ್ನ ಸಂತೋಷಿ ಕಾಂಗ್ರೆಸ್ ನಾಯಕರಿಗೆ ಸಮಾಧಾನ ತರುವ ಒಂದೇ ಅಂಶವೆಂದರೆ ತ್ರಿಪುರಾದಲ್ಲಿ ಕಳೆದ ಬಾರಿ ಬಿಜೆಪಿ ಪಡೆದ ಮತಗಳ ಪ್ರಮಾಣ 43.59ರಿಂದ ಶೇ. 38.97ಕ್ಕೆ ಇಳಿದಿರುವುದು.

ಬಿಜೆಪಿ–ಕಾಂಗ್ರೆಸ್ ನಡುವಿನ ವ್ಯತ್ಯಾಸ

ಅತ್ಯಂತ ಪ್ರಮುಖವಾದ ವಿಚಾರವೆಂದರೆ ಭಾರತಕ್ಕೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಸೈದ್ಧಾಂತಿಕ ಹೋರಾಟ ನಡೆಯುತ್ತಿದೆ. ಬಿಜೆಪಿಯು ಸೈದ್ಧಾಂತಿಕವಾಗಿ ಈ ದೇಶದ ಅಂತರಾತ್ಮವಾಗಿರುವ ಹಿಂದುತ್ವ, ಆಧ್ಯಾತ್ಮಿಕತೆಯ ಆಧಾರದಲ್ಲಿ ದೇಶವನ್ನು ಅಭಿವೃದ್ಧಿಪಡಿಸುತ್ತಿದ್ದರೆ, ಕಾಂಗ್ರೆಸ್ ಜಾತ್ಯಾತೀತತೆಯ ಹೆಸರಿನಲ್ಲಿ ಭೌತಿಕವಾದದ (materialistci) ಆಧಾರದಲ್ಲಿ ತಾತ್ಕಾಲಿಕ ಫಲ ನೀಡುವ, ಜನಮರುಳು ಯೋಜನೆಗಳ ಮೂಲಕ, ಬಿಟ್ಟಿ ಭಾಗ್ಯಗಳ ಮೂಲಕ ಭಾರತದ ಅಭಿವೃದ್ಧಿ ಬಯಸುತ್ತಿದೆ. ಭಾರತದ ಅಂತರಾತ್ಮದಲ್ಲಿರುವುದು ಆಧ್ಯಾತ್ಮಿಕತೆ ಎಂದು ಕಾಂಗ್ರೆಸ್ಸಿಗರು ಅರಿತಿದ್ದರೂ ಅಲ್ಪಸಂಖ್ಯಾತರ ಮತಗಳ ಮೇಲಿನ ದುರಾಸೆ ಕಾಂಗ್ರೆಸ್ ಸ್ಥಿತಿ ಹೀನಾಯಗೊಳಿಸುತ್ತಿದೆ. ದೇಶವನ್ನು ಛಿದ್ರಗೊಳಿಸುವ ವಿಚಾರಗಳಿಗೆ ಒತ್ತು ನೀಡುತ್ತಿದೆ. ನಾಗಾಲ್ಯಾಂಡ್‌ನಲ್ಲಿ ಧಾರ್ಮಿಕ ಭಾವನೆ ಬಡಿದೆಬ್ಬಿಸಲು ಅಪಪ್ರಚಾರ ಮಾಡಿತು. ಬಿಜೆಪಿ ಅಧಿಕಾರಕ್ಕೆ ಬಂದರೆ ನಿಮ್ಮ ಧರ್ಮವನ್ನೇ ನಾಶಪಡಿಸಲಿದೆ ಎಂಬುದಾಗಿ ರಾಹುಲ್ ಗಾಂಧಿ ಚುನಾವಣಾ ಪ್ರಚಾರದ ಸಂದರ್ಭ ಕ್ರೈಸ್ತ ಬಾಹುಳ್ಯದ ಪೂರ್ವೋತ್ತರ ರಾಜ್ಯಗಳ ಜನಮಾನಸದಲ್ಲಿ ಭೀತಿ ಹುಟ್ಟಿಸಿದರೂ ಜನತೆ ರಾಹುಲ್ ಗಾಂಧಿಯವರನ್ನು ತಿರಸ್ಕರಿಸಿದರು. ಕಾಂಗ್ರೆಸ್‌ನ ಎಪ್ಪತ್ತು ವರ್ಷಗಳ ಆಡಳಿತ ಮತ್ತು 9 ವರ್ಷಗಳ ಬಿಜೆಪಿ ಆಡಳಿತದಲ್ಲಾದ ಅಭಿವೃದ್ಧಿಯನ್ನು ತುಲನೆ ಮಾಡಿ ಪೂರ್ವೋತ್ತರ ಜನತೆ ತಮ್ಮ ಅಭಿವೃದ್ಧಿ ಬಿಜೆಪಿಯಿಂದ ಎಂಬುದನ್ನು ಅರಿತು ಮತ ನೀಡಿದ್ದಾರೆ.

ರಾಹುಲ್ ಗಾಂಧಿಯವರು ಸಂವಿಧಾನದಲ್ಲಿರುವ ಕೆಲವು ಅಂಶಗಳನ್ನು ತಪ್ಪಾಗಿ ಉಲ್ಲೇಖಿಸಿ ಭಾರತವು ಒಂದು ರಾಜ್ಯಗಳ ಒಕ್ಕೂಟ ಎನ್ನುವ ಮೂಲಕ ಈ ದೇಶದ ಅಖಂಡತೆಯನ್ನು ಪ್ರಶ್ನಿಸುವಂತಹ, ದೇಶದೊಳಗಿರುವ ಏಕಾತ್ಮತೆಯ ಭಾವನೆಗೆ ಹೊಡೆತ ನೀಡುವಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಪ್ರಧಾನಿ ಮೋದಿಯವರು ಭಾರತದ ಆಧ್ಯಾತ್ಮಿಕ ಸಾಂಸ್ಕೃತಿಕ ಏಕಾತ್ಮತೆಯನ್ನು ಜಾಗೃತಗೊಳಿಸುತ್ತಿದ್ದಾರೆ. ಕಾಂಗ್ರೆಸ್‌ನ ಅಪಾಯಕಾರಿ ವಿಚಾರಧಾರೆ ಅದನ್ನು ಅಪ್ರಸ್ತುತಗೊಳಿಸುತ್ತಿದೆ. ಪ್ರಧಾನಿ ಮೋದಿಯವರು ಪೂರ್ವೋತ್ತರ ರಾಜ್ಯಗಳೊಂದಿಗೆ ಹೊಂದಿರುವ ಸಂಪರ್ಕ, ಭೇಟಿ ಹಾಗೂ ಅಭಿವೃದ್ಧಿ ಕಾರ್ಯಗಳು ಬಿಜೆಪಿಯನ್ನು ನಾಗಾಲ್ಯಾಂಡ್‌ನಲ್ಲಿ ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಯಿತು. ಇದನ್ನೇ ನಾಗಾಲ್ಯಾಂಡ್‌ನ ಬಿಜೆಪಿ ರಾಜ್ಯಾಧ್ಯಕ್ಷ ತ್ವೆಮ್ ಜೆನ್ ಇಮ್ನಾ–ಅಲಿಂಗ್‌ರು ಸ್ವಾರಸ್ಯವಾಗಿ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ರಾಜ್ಯಕ್ಕೆ ಒಂದು ಬಾರಿಯೂ ಭೇಟಿ ನೀಡಿರಲಿಲ್ಲ. ಹೀಗಾಗಿ ನಾವು ದಿಲ್ಲಿಗೆ ಬಂದು ನಮ್ಮ ಸಮಸ್ಯೆ ಎಷ್ಟೇ ವಿವರಿಸಿದರೂ ಅವರಿಗೆ ಅರ್ಥವಾಗುತ್ತಿರಲಿಲ್ಲ. ಆಗ ನಾವು ಭಾರತೀಯರೆಂದು ನಮಗೆ ಅನಿಸುತ್ತಿರಲಿಲ್ಲ. ಮೋದಿಯವರು ನಮ್ಮೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಭೇಟಿಯು ನೀಡುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳು ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಈಗ ನಿರಂತರವಾಗಿ ದಿಲ್ಲಿಯಿಂದ ಬರುತ್ತಿರುವ ಕೇಂದ್ರದ ನಾಯಕರಿಗೆ ಕಾರ್ಯಕ್ರಮ ಕೊಡುವುದೇ ನಮಗೆ ಒಂದು ದೊಡ್ಡ ಸವಾಲಾಗಿದೆ ಎಂದು ಅಭಿಮಾನದಿಂದ ಹೇಳುತ್ತಾರೆ. ನಾಗಾಲ್ಯಾಂಡ್ ಸಹಿತ ಪೂರ್ವೋತ್ತರ ರಾಜ್ಯಗಳ ಜನರಿಗೆ ಈಗ ತಾವು ಭಾರತೀಯರು ಎಂಬ ಭಾವನೆ ಬಂದಿದೆ. ದೇಶದ ಏಕತೆ ಅಖಂಡತೆಯ ದೃಷ್ಟಿಯಿಂದ ಇದು ಅತ್ಯಂತ ಸಕಾರಾತ್ಮಕ ಮಹತ್ವದ ಪರಿವರ್ತನೆಯಾಗಿದೆ.

ಕೆ.ಆರ್.ಕ್ಷೇತ್ರದಲ್ಲಿ ಸುಕನ್ಯಾ, ಮಾತೃವಂದನಾ ಫಲಾನುಭವಿಗಳಿಗೆ ನಾನಾ ಸವಲತ್ತು ವಿತರಣೆ



ಮೈಸೂರು, ಮಾ.18(ಎಸ್‌ಬಿಡಿ)– ವಿವಿಧ ಯೋಜನೆಗಳಡಿ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಫಲಾನುಭವಿಗಳಿಗೆ ಸವಲತ್ತು ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಗರದ ರಾಜೇಂದ್ರ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಗಳಾದ ಸುಕನ್ಯಾ ಸಮೃದ್ಧಿ ಯೋಜನೆ ಮತ್ತು ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ಫಲಾನುಭವಿಗಳಿಗೆ ಸವಲತ್ತು ಕಲ್ಪಿಸಿದ ಶಾಸಕ ಎಸ್.ಎ.ರಾಮದಾಸ್ ಅವರು, 1200 ಜನರಿಗೆ ಉಚಿತವಾಗಿ ಕನ್ನಡಕ ವಿತರಿಸಿದರು. ಈ ವೇಳೆ ಮಾತನಾಡಿದ ಅವರು, ಮುಂದಿನ 5 ವರ್ಷಗಳಲ್ಲಿ ಕೆಆರ್ ಕ್ಷೇತ್ರದಲ್ಲಿ ಗರ್ಭಿಣಿಯರು ಹಾಗೂ ನವಜಾತ ಶಿಶುಗಳ ಸಾವಿನ ಸಂಖ್ಯೆಯನ್ನು ಶೂನ್ಯಕ್ಕೆ ತರುವ ಸಂಕಲ್ಪ ಮಾಡಲಾಗಿದ್ದು, ಈ ನಿಟ್ಟಿನಲ್ಲಿ ಗರ್ಭಿಣಿ ತಾಯಂದಿರ ಆರೋಗ್ಯ ಕಾಳಜಿಗೆ ವಿಶೇಷ ನಿಗಾ ವಹಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಅನುಷ್ಠಾನಕ್ಕೆ ತಂದಿರುವ ನೂರಾರು ಯೋಜನೆಗಳಲ್ಲಿ ನನಗೆ ಮಾತೃವಂದನಾ ಯೋಜನೆ ಪ್ರಧಾನವೆನಿಸುತ್ತದೆ. ಈ ಯೋಜನೆ ದೇಶದಲ್ಲಿ ಮೊದಲಿಗೆ ನಮ್ಮ ಕ್ಷೇತ್ರದಲ್ಲೇ ಜಾರಿಯಾಗಿದ್ದು ಎನ್ನಲು ಹೆಮ್ಮೆಯಾಗುತ್ತದೆ. ಆ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿಗೆ ಭೇಟಿ ನೀಡಿದ್ದಾಗ ನನ್ನ ಬೆನ್ನಿಗೆ ಗುದ್ದಿ ಒಳ್ಳೆಯ ಕೆಲಸ ಮಾಡುತ್ತಿದ್ದೀಯಾ, ಹೀಗೆ ಮುಂದುವರೆಸು ಎಂದು ಹುರಿದುಂಬಿಸಿದರು. ಅದರ ಪರಿಣಾಮವೆಂಬಂತೆ ಇಂದು ನಮ್ಮ ಕ್ಷೇತ್ರದ ಎಲ್ಲಾ ಜಾತಿ, ಧರ್ಮದ 9200 ಗರ್ಭಿಣಿ ತಾಯಂದಿರು ಮಾತೃವಂದನಾ ಸ್ವೀಕರಿಸಿದರು. ಈ ಯೋಜನೆ ಫಲಾನುಭವಿಗೆ 4 ತಿಂಗಳ ಕಾಲ ಪೌಷ್ಠಿಕ ಆಹಾರ, ಸೀರೆ, ಕುಪ್ಪಸ ಹಾಗೂ 6 ಸಾವಿರ ರೂ. ಆರ್ಥಿಕ ನೆರವು ಸಿಗಲಿದೆ. ಚುನಾವಣೆ, ವೋಟು ಅದೆಲ್ಲಾ ಒಂದು ಕಡೆ ಇರಲಿ. ನನ್ನ ಸಹೋದರಿಯರ ನೆಮ್ಮದಿಯ ಬದುಕು ನನ್ನ ಕನಸು ಎಂದರು. ಕಾರ್ಯಕ್ರಮದಲ್ಲಿ ಉಪಮೇಯರ್ ಡಾ.ರೂಪ, ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಮಾ.ವಿ.ರಾಂಪ್ರಸಾದ್, ಬಿಜೆಪಿ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ವಡಿವೇಲು, ನೇತ್ರತಜ್ಞ ಡಾ.ಚೇತನ್, ಮಕ್ಕಳ ಅಭಿವೃದ್ಧಿ ಅಧಿಕಾರಿ ಮಧುಸೂದನ್, ಕಣ್ಣಿನ ಆಸ್ಪತ್ರೆ ಸಿಬ್ಬಂದಿ ಮಂಜುನಾಥ್, ಕನ್ನಡಕ ತಯಾರಕ ವಿಜಯ್‌ಕುಮಾರ್ ಮತ್ತಿತರರು ಇದ್ದರು.

ಮೈಸೂರು ವಿವಿ ಕುಲಪತಿ ಸ್ಥಾನಕ್ಕೆ ಮೂವರ ಹೆಸರು ಶಿಫಾರಸು



ಬೆಂಗಳೂರು, ಮಾ. 18– ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಶರತ್ ಅನಂತಮೂರ್ತಿ, ಮೈಸೂರು ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಮತ್ತು ಮೈಸೂರು ವಿವಿ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎನ್.ಕೆ.ಲೋಕನಾಥ್ ಅವರ ಹೆಸರುಗಳನ್ನು ರಾಜ್ಯಪಾಲರಿಗೆ ಶೋಧನಾ ಸಮಿತಿ ಶಿಫಾರಸ್ಸು ಮಾಡಿದೆ. ಈ ಸಮಿತಿಯಲ್ಲಿ ಮೈಸೂರಿನ ಪ್ರೊ.ಎಂ.ಎಸ್.ಶಿವಕುಮಾರ್, ಮಧ್ಯಪ್ರದೇಶದ ಅಮರ್ ಕಾಂತಕ್‌ನ ಇಂದಿರಾ ಗಾಂಧಿ ರಾಷ್ಟ್ರೀಯ ಬುಡಕಟ್ಟು ವಿವಿ ಉಪ ಕುಲಪತಿ ಪ್ರೊ.ಪ್ರಕಾಶ್ ಮಣಿ ತ್ರಿಪಾಠಿ, ಪಂಜಾಬ್ ಕೇಂದ್ರೀಯ ವಿವಿ ಉಪ ಕುಲಪತಿ ಪ್ರೊ. ರಾಘವೇಂದ್ರ ಪಿ. ತಿವಾರಿ, ಲಕ್ನೋದ ಸಿಎಸ್‌ಐಆರ್ ಕೇಂದ್ರೀಯ ಡ್ರಗ್ ಇನ್‌ಸ್ಟಿಟ್ಯೂಟ್ ನಿರ್ದೇಶಕ ಡಾ. ಶ್ರೀನಿವಾಸರೆಡ್ಡಿ ಇದ್ದರು. ಈ ಶೋಧನಾ ಸಮಿತಿ ಸಭೆ ಇಂದು ಬೆಂಗಳೂರಿನಲ್ಲಿ ನಡೆದು ಮೈಸೂರು ವಿವಿ ಕುಲಪತಿ ಸ್ಥಾನಕ್ಕೆ ಮೂವರನ್ನು ಶಿಫಾರಸು ಮಾಡಿದೆ.



ಇತ್ತೀಚೆಗೆ ಮಂಡ್ಯಕ್ಕೆ ತೆರಳುವ ಮಾರ್ಗ ಮೈಸೂರು ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಮೈಸೂರು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೊಸಳ್ಳಿ ವೆಂಕಟೇಶ ಆತ್ಮೀಯವಾಗಿ ಸ್ವಾಗತಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಿದ್ದರಾಮಯ್ಯರೊಂದಿಗೆ ಕೋಲಾರ ಕಾಂಗ್ರೆಸ್ ಮುಖಂಡರ ವಾಗ್ವಾದ

ಬೆಂಗಳೂರು, ಮಾ. 18– ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸದಂತೆ ಎಐಸಿಸಿ ಮುಖಂಡ



ರಾಹುಲ್ ಗಾಂಧಿ ತಮಗೆ ಸಲಹೆ ನೀಡಿದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ನಿವಾಸದಲ್ಲಿ ಕರೆದಿದ್ದ ಸಭೆಯಲ್ಲಿ ಕೋಲಾರ ಜಿಲ್ಲೆಯ ಕೆಲವು ನಾಯಕರು ಸಿದ್ದರಾಮಯ್ಯರೊಂದಿಗೆ ವಾಗ್ವಾದ ನಡೆಸಿದಿದ್ದಾರೆ.

ಸಿದ್ದರಾಮಯ್ಯ ಕೋಲಾರದಲ್ಲಿ ಸ್ಪರ್ಧಿಸುವುದಿಲ್ಲ ಎಂಬ ವಿಚಾರ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆಯೇ ಇದರಿಂದ ಬೇಸರಗೊಂಡಿದ್ದ ಸಿದ್ದರಾಮಯ್ಯ ಆಪ್ತರಾದ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಹಾಗೂ ಅವರ ಬಣದ ನಂಜೇಗೌಡ, ಎಸ್.ಎನ್.ನಾರಾಯಣಸ್ವಾಮಿ, ಶಾಸಕ ಶ್ರೀನಿವಾಸಗೌಡ ಅವರು ಸಿದ್ಧರಾಮಯ್ಯ ಕರೆದಿದ್ದ ಸಭೆಗೆ ಗೈರಾಗಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಕೆಲವು ನಾಯಕರು, 'ನೀವು ಕೋಲಾರಕ್ಕೆ ಬರಲೇಬೇಕು, ನೀವು ಬರದೇ ಇದ್ದರೆ ಕೋಲಾರ ಜಿಲ್ಲೆಯ ಆರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅನ್ನು ಸೋಲಿಸುತ್ತೇವೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಅವರ ಮಾತಿನಿಂದ ಗರಂ ಆದ ಸಿದ್ದರಾಮಯ್ಯ 'ಸುಮ್ನಿರಿ, ನೀವೆಲ್ಲಾ ಏನ್ ಪಕ್ಷ ಬಿಡೋದು ಎಲ್ಲಾ ನಮ್ಮವರೇ ಆಗಿದ್ದು, ಏನೇನೋ ಮಾತಾಡ್ತಿದ್ದೀರಲ್ಲಾ. ರಾಹುಲ್ ಗಾಂಧಿಯವರೇ ಹೇಳಿದ ಮೇಲೆ ನಾನೇನು ಮಾಡ್ಲಿ, ಹೈಕಮಾಂಡ್ ಮಾತನ್ನು ಮೀರಲು ಸಾಧ್ಯವಿಲ್ಲ' ಎಂದಿದ್ದಾರೆ. ಈ ವೇಳೆ ಕೋಲಾರ ಮುಖಂಡರ ಗದ್ದಲ ಜಾಸ್ತಿಯಾದಾಗ ಸಿದ್ದರಾಮಯ್ಯ ಅವರು, ತನ್ನ ನಿರ್ಧಾರವನ್ನು ಇನ್ನೆರಡು ದಿನದಲ್ಲಿ ಪ್ರಕಟಿಸುವುದಾಗಿ ತಿಳಿಸಿ ಅವರನ್ನು ಸಮಾಧಾನಪಡಿಸಿದ್ದಾರೆ.

ಮತ್ತೊಂದೆಡೆ ಕೋಲಾರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಶ್ರೀನಿವಾಸಗೌಡ, ಕೋಲಾರದಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದರೇ ಅವರ ಪರವಾಗಿ ಕೆಲಸ ಮಾಡುತ್ತೇನೆ. ಅವರು ಇಲ್ಲಿ ಸ್ಪರ್ಧಿಸದಿದ್ದರೆ ರಾಜಕೀಯದಿಂದಲೇ ನಿವೃತ್ತಿ ಪಡೆಯುತ್ತೇನೆ. ರಾಜ್ಯಕ್ಕೆ ಮೊದಲ ಮುಖ್ಯಮಂತ್ರಿಯನ್ನು ನೀಡಿದ್ದು ಕೋಲಾರ ಜಿಲ್ಲೆ. ಇದೀಗ ಈ ಜಿಲ್ಲೆಯಿಂದ ಮತ್ತೊಬ್ಬ ಮುಖ್ಯಮಂತ್ರಿಯನ್ನು ನೀಡಬೇಕು ಎಂಬುದು ನಮ್ಮ ಮಹದಾಸೆಯಾಗಿತ್ತು. ಅವರು ಇಲ್ಲಿ ಸ್ಪರ್ಧಿಸಿದ್ದರೆ ಖಂಡಿತಾ ಗೆಲ್ಲುತ್ತಿದ್ದರು. ಅವರು ಕೋಲಾರದಿಂದಲೇ ಸ್ಪರ್ಧಿಸುತ್ತಾರೆ ಎಂಬ ವಿಶ್ವಾಸ ನನಗೆ ಈಗಲೂ ಇದೆ ಎಂದರು.

ಕುಂಬಾರ ಅಭಿವೃದ್ಧಿ ನಿಗಮ ಸ್ಥಾಪಿಸಿ ರಾಜ್ಯ ಸರ್ಕಾರ ಆದೇಶ

ಬೆಂಗಳೂರು,ಮಾ.18– ರಾಜ್ಯ ಕುಂಬಾರ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಕುರಿತು ಟ್ವೀಟರ್‌ನಲ್ಲಿ ಮಾಹಿತಿ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದ ಕುಂಬಾರ ಸಮುದಾಯದ ಬಹುದಿನಗಳ ಬೇಡಿಕೆಯಾಗಿದ್ದ ಕುಂಬಾರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ, ಆದೇಶ ಹೊರಡಿಸಲಾಗಿದೆ. ಈ ನಿಗಮವು ಕುಂಬಾರ, ಚಕ್ರಸಾಲಿ, ಕುಲಾಲ ಸೇರಿದಂತೆ ಇನ್ನಿತರ ಜಾತಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದ್ದಾರೆ. ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯ ಪ್ರವರ್ಗ 2ಎ ನ ಕ್ರಮ ಸಂಖ್ಯೆ:6 ಎ ಯಿಂದ ಕ್ಯೂವರೆಗೆ ಕ್ರಮವಾಗಿ ಕುಂಬಾರ, ಚಕ್ರಸಾಲಿ ಗುಣಗ, ಗಣಗಿ, ಕೊಡವ, ಕುಲ, ಕುಲಾಲ, ಕುಂಬಾರ್, ಕುಂಬಾರ್ಡ್, ಕುಮ್ಮಾರ, ಕಸವನ್ ,ಮೂಲ್ಯ, ಸಜ್ಜನ ಕುಂಬಾರ, ಖುಮಾರ, ಕುಂಬಾರ, ಖುಂಬಾರ, ಕುಲಾಲರ್ ಜಾತಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಕುಂಬಾರ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ಪಾಹೀನ್ ಪರ್ವೀನ್ ಆದೇಶ ಹೊರಡಿಸಿದ್ದಾರೆ.

ಅರಮನೆ ಮಂಡಳಿಯಿಂದ ಯುಗಾದಿ ಸಂಗೀತೋತ್ಸವ

ಮೈಸೂರು, ಮಾ.18– ಅರಮನೆ ಮಂಡಳಿ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ ಮಾ. 22ರಿಂದ 24ರವರೆಗೆ 2023ರ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮಾ.22ರಂದು ಸಂಜೆ 6:30 ಕ್ಕೆ ಸಹಕಾರ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಸ್.ಎ.ರಾಮದಾಸ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು. ಅತಿಥಿ ಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ.ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್‌ಕುಮಾರ್, ಹೆಚ್.ಪಿ.ಮಂಜುನಾಥ್, ಎಲ್.ನಾಗೇಂದ್ರ ಡಾ. ಯತೀಂದ್ರ, ಅನಿಲ್‌ಕುಮಾರ್ ಹಾಗೂ ವಿಧಾನ ಪರಿಷತ್ತಿನ ಶಾಸಕರಾದ ಡಾ.ಡಿ. ತಿಮ್ಮಯ್ಯ, ಮರಿತಿಬ್ಬೆಗೌಡ, ಸಿ.ಎನ್.ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು. ವಿವಿಧ ಸಂಗೀತ ಕಾರ್ಯಕ್ರಮಗಳು ಜರುಗಲಿದ್ದು, ಮಾ.22ರಂದು ಸಂಜೆ 5:30ರಿಂದ 6 ಗಂಟೆವರೆಗೆ ಯದುಕುಮಾರ್ ಮತ್ತು ತಂಡದವರಿಂದ ಮಂಗಳವಾದ್ಯ ಮತ್ತು ಸಾಕ್ಸ್ ಫೋನ್ ವಾದನ, ಸಂಜೆ 6ರಿಂದ 6.30 ರವರೆಗೆ ವೇದ ಬ್ರಹ್ಮ ಶ್ರೀ ಶ್ರೀಧರ್ ಶರ್ಮ ಹಾಗೂ ಅರಮನೆ ಪುರೋಹಿತರಿಂದ ಪಂಚಾಂಗ ಶ್ರವಣ ಹಾಗೂ ಸಂಜೆ 7.15ರಿಂದ ರಾತ್ರಿ 9.30ರವರೆಗೆ ಖ್ಯಾತ ಹಿನ್ನೆಲೆ ಗಾಯಕರಾದ ರಘು ದೀಕ್ಷಿತ್ ಹಾಗೂ ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಮಾ.23ರಂದು ಸಂಜೆ 6ರಿಂದ 7ರವರೆಗೆ ಕರ್ನಾಟಕ ಪೊಲೀಸ್ ಬ್ಯಾಂಡ್, ಸಂಜೆ 7ರಿಂದ 9.30ವರೆಗೆ ಗುರುಕಿರಣ್ ರವರಿಂದ ನೈಟ್ಸ್ ಕಾರ್ಯಕ್ರಮ ನಡೆಯಲಿದೆ. ಮಾ.24ರಂದು ಸಂಜೆ 6ರಿಂದ 7 ಗಂಟೆವರೆಗೆ ಆಂಗ್ಲ ಪೊಲೀಸ್ ಬ್ಯಾಂಡ್ ಹಾಗೂ 7ರಿಂದ 9.30 ರವರೆಗೆ ಶ್ರೀ ವಾಸುಕಿ ವೈಭವ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸದರಿ ಕಾರ್ಯಕ್ರಮಗಳ ನಿಮಿತ್ತ ಮಾ.22ರಿಂದ 24 ರವರೆಗೆ ಸಂಜೆ 7ರಿಂದ ರಾತ್ರಿ 9:30ವರೆಗೆ ಅರಮನೆಯ ವಿದ್ಯುತ್ ದೀಪ ಅಲಂಕಾರ ವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಚೆಲುವಾಂಬ ಆಸ್ಪತ್ರೆಯಲ್ಲಿ 11 ದಿನದ ಮಗು ಕಳವಾದ ಐದೇ ಗಂಟೆಯಲ್ಲಿ ಪತ್ತೆ ಹಚ್ಚಿದ ಪೊಲೀಸರು

ಮದುವೆಯಾಗಿ ಎರಡೂವರೆ ವರ್ಷವಾದರೂ ಮಕ್ಕಳಾಗದ ಕಾರಣಕ್ಕೆ ಪತಿ ಮನೆಯವರ ಚುಚ್ಚು ನುಡಿಗೆ ನೊಂದು ಮಗು ಕದ್ದ ಮಹಿಳೆ



ಬಿ.ಶಿವಕುಮಾರ್



ಎಂ.ಜೈಕೀರ್ತಿ



ಪ್ರವೀಣ್



ಪ್ರದೀಪ್



ಸುರೇಶ್

ಮೈಸೂರು, ಮಾ.18 (ಎಂಟಿವೈ)– ಮೈಸೂರಿನ ಚೆಲುವಾಂಬ ಮಕ್ಕಳ ಆಸ್ಪತ್ರೆಯಿಂದ ಅಪಹರಣವಾಗಿದ್ದ ಮಗುವನ್ನು ಕೇವಲ 5 ಗಂಟೆ ಅಂತರದಲ್ಲಿ ರಕ್ಷಿಸುವಲ್ಲಿ ಯಶಸ್ವಿಯಾದ ದೇವರಾಜ ಠಾಣೆಯ ಇನ್ಸ್‌ಪೆಕ್ಟರ್ ಬಿ.ಶಿವಕುಮಾರ್ ನೇತೃತ್ವದ ಪೊಲೀಸರು ಅಪಹರಣಕಾರಳನ್ನು ಬಂಧಿಸಿದ್ದಾರೆ.

ವಿವರ: ಒರಿಸ್ಸಾದಿಂದ ಜೀವನೋಪಾಯಕ್ಕಾಗಿ ಕೂಲಿ ಕೆಲಸ ಮಾಡಲು ನಂಜನಗೂಡಿಗೆ ಆಗಮಿಸಿದ್ದ ಪ್ರೇಮ್ ಎಂಬುವರ ಪತ್ನಿ ವಸುಮತಿ ಅವರಿಗೆ ಚೆಲುವಾಂಬ ಆಸ್ಪತ್ರೆಯಲ್ಲಿ 11 ದಿನದ ಹಿಂದೆ ಹೆಣ್ಣು ಮಗು ಜನಿಸಿತ್ತು. ಸಾಮಾನ್ಯ ವಾರ್ಡ್‌ನಲ್ಲಿದ್ದ ಈ ದಂಪತಿಯನ್ನು 26 ವರ್ಷದ ಮಹಿಳೆಯೋರ್ವಳು ಪರಿಚಯಿಸಿಕೊಂಡು, ತಮ್ಮ ಸಂಬಂಧಿಕರ ಪತ್ನಿಗೆ ಹೆರಿಗೆಯಾಗಿ ಇದೇ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದು ಹೇಳಿಕೊಂಡಿದ್ದಳು.

ಒರಿಸ್ಸಾದಿಂದ ಬಂದಿದ್ದ ದಂಪತಿಗೆ ಕನ್ನಡ ಸರಿಯಾಗಿ ಬರುತ್ತಿರಲಿಲ್ಲ. ಶುಕ್ರವಾರ ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ಪ್ರೇಮ್ ಅವರು ಸ್ಕ್ಯಾನಿಂಗ್ ಮಾಡಿಸಲು ಮಗುವನ್ನು ಕೊಂಡೊಯ್ದಾಗ ಸ್ಕ್ಯಾನಿಂಗ್ ಸ್ಥಳಕ್ಕೆ ಪುರುಷರಿಗೆ ಅವಕಾಶವಿಲ್ಲವೆಂದು ಅವರಿಗೆ ತಿಳಿಸಿದ ಮಹಿಳೆ, ಮಗುವನ್ನು ಅವರಿಂದ ಪಡೆದುಕೊಂಡು ಕೌಂಟರ್‌ನಲ್ಲಿ ಶುಲ್ಕ ಕಟ್ಟಿ ಬರುವಂತೆ ಕಳುಹಿಸಿದ್ದಾಳೆ. ಪ್ರೇಮ್ ಅವರು ಶುಲ್ಕ ಕಟ್ಟಿ ಬರುವಷ್ಟರಲ್ಲಿ ಮಗುವಿನೊಂದಿಗೆ ಮಹಿಳೆ ನಾಪತ್ತೆಯಾಗಿದ್ದಾಳೆ.

ಸರಿಯಾಗಿ ಭಾಷೆಯೂ ಬಾರದ ಪ್ರೇಮ್, ಆಸ್ಪತ್ರೆಯಲ್ಲಿ ತಮ್ಮ ಮಗು ಅಪಹರಣವಾಗಿರುವ ಬಗ್ಗೆ ಅವರಿವರಲ್ಲಿ ಗೋಳಾಡುತ್ತಿದ್ದಾಗ ಸಾರ್ವಜನಿಕರೊಬ್ಬರು ನೀಡಿದ ಸಲಹೆ ಮೇರೆಗೆ ದೇವರಾಜ ಠಾಣೆಗೆ ತೆರಳಿ ದೂರು ಸಲ್ಲಿಸಿದ್ದಾರೆ. ತಕ್ಷಣವೇ ಕಾರ್ಯಪ್ರವೃತ್ತರಾದ ಇನ್ಸ್‌ಪೆಕ್ಟರ್ ಬಿ.ಶಿವಕುಮಾರ್ ಅವರು ಸಬ್ ಇನ್ಸ್‌ಪೆಕ್ಟರ್ ಎಂ.ಜೈಕೀರ್ತಿ, ಸಿಬ್ಬಂದಿಗಳಾದ ಪ್ರವೀಣ್, ಪ್ರದೀಪ್, ಸುರೇಶ್ ಇನ್ನಿತರರೊಂದಿಗೆ ಆಸ್ಪತ್ರೆಗೆ ಬಂದು ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸಿ ಮಗು ಅಪಹರಿಸಿದ ಮಹಿಳೆಯ ಗುರುತನ್ನು ಪ್ರೇಮ್ ಅವರ ಮೂಲಕ ತಿಳಿದುಕೊಂಡಿದ್ದಾರೆ.



ಮರಳಿ ಮಗು ಪಡೆದ ತಾಯಿ ವಸುಮತಿ

ಮಗು ಅಪಹರಿಸಿದ ಮಹಿಳೆ ಆಟೋದಲ್ಲಿ ಹೋಗಿರಬಹುದು ಎಂಬ ಉದ್ದೇಶದಿಂದ ಆಟೋ ಸ್ಟ್ಯಾಂಡ್‌ನಲ್ಲಿ ಪೊಲೀಸರು ಮಾಹಿತಿ ಕಲೆ ಹಾಕಿದಾಗ ಬೆಳಗ್ಗೆ 11 ಗಂಟೆಗೆ ಓರ್ವ ಮಹಿಳೆ ಜೊತೆಯಲ್ಲಿ ಯಾರೂ ಸಹಾಯಕರಿಲ್ಲದೆ ಮಗುವಿನೊಂದಿಗೆ ಪ್ರಯಾಣಿಸಿರುವುದು ಗೊತ್ತಾಗಿದೆ. ಸದರಿ ಆಟೋ ಚಾಲಕನಿಗೆ ಸಿಸಿ ಕ್ಯಾಮರಾ ಫುಟೇಜ್ ತೋರಿಸಿದಾಗ ಆತನೂ ಕೂಡ ತನ್ನ ಆಟೋದಲ್ಲಿ ಪ್ರಯಾಣಿಸಿದ ಮಹಿಳೆ ಈಕೆಯೇ ಎಂಬುದನ್ನು ದೃಢಪಡಿಸಿದ್ದಲ್ಲದೇ, ತಾನು ಆಕೆಯನ್ನು ಕುಂಬಾರಕೊಪ್ಪಲಿನಲ್ಲಿ ಡ್ರಾಪ್ ಮಾಡಿರುವುದಾಗಿ ತಿಳಿಸಿದ್ದಾನೆ.

ಸ್ವಲ್ಪವೂ ತಡ ಮಾಡದೇ ಕುಂಬಾರಕೊಪ್ಪಲಿನಲ್ಲಿರುವ ತಮ್ಮ ಮಾಹಿತಿದಾರರನ್ನು ಜಾಗೃತಗೊಳಿಸಿದ ಇನ್ಸ್‌ಪೆಕ್ಟರ್ ಶಿವಕುಮಾರ್, ಸಿಬ್ಬಂದಿಯನ್ನೂ ಕೂಡ ಅಲ್ಲಿಗೆ ಕಳುಹಿಸಿದ್ದಾರೆ. ಒಂದೆಡೆ ಮಾಹಿತಿದಾರರು ಗಲ್ಲಿ ಗಲ್ಲಿಗಳಲ್ಲಿ ಪುಟ್ಟ ಮಗುವನ್ನು ಮಹಿಳೆ ತಂದಿರುವ ಬಗ್ಗೆ ಮಾಹಿತಿ ಸಂಗ್ರಹಣೆಯಲ್ಲಿ ತೊಡಗಿದ್ದರೆ, ಮತ್ತೊಂದೆಡೆ ಪೊಲೀಸರೂ ಕೂಡ ಹುಡುಕಾಟ ನಡೆಸುತ್ತಿದ್ದರು. ಈ ವೇಳೆ ಸಂಜೆ 5 ಗಂಟೆ ಸುಮಾರಿನಲ್ಲಿ ಮನೆಯೊಂದರಿಂದ ಪುಟ್ಟ ಮಗು ಚೀರಾಡುತ್ತಿರುವ ಶಬ್ದ ಕೇಳಿಬಂದಿದ್ದು, ಆ ಮನೆಯಲ್ಲಿ ಯಾವುದೇ ಮಗು ಇರಲಿಲ್ಲ ಎಂಬುದನ್ನೂ ಕೂಡ ಖಚಿತಪಡಿಸಿಕೊಂಡ ಪೊಲೀಸರು, ಮನೆಯೊಳಗೆ ತೆರಳಿ ಪರಿಶೀಲನೆ ಮಾಡಿದಾಗ ಅಪಹರಣವಾಗಿದ್ದ ಮಗು ಪತ್ತೆಯಾಗಿದೆ. ಕೂಡಲೇ ಮಗುವನ್ನು ವಶಪಡಿಸಿಕೊಂಡ ಪೊಲೀಸರು, ಮಹಿಳೆಯನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಜೀವನೋಪಾಯಕ್ಕಾಗಿ ದೂರದ ಒರಿಸ್ಸಾದಿಂದ ಬಂದಿದ್ದ ದಂಪತಿ ಮಗು ಅಪಹರಣವಾಗಿದ್ದರಿಂದ ತೀವ್ರ ಕಂಗಾಲಾಗಿದ್ದರು. ಸರಿಯಾಗಿ ಭಾಷೆ ಗೊತ್ತಿಲ್ಲದ ಊರಿನಲ್ಲಿ ತಾವು ಕಳೆದುಕೊಂಡ ಮಗುವಿಗಾಗಿ ರೋದಿಸುತ್ತಿದ್ದರು. ಸಂಜೆ ವೇಳೆಗೆ ಪೊಲೀಸರು ಮಗುವನ್ನು ತಾಯಿಯೊಂದಿಗೆ ಸೇರಿಸಿದಾಗ ಅವರ ಸಂತೋಷಕ್ಕೆ ಪಾರವೇ ಇಲ್ಲದಂತಾಗಿತ್ತು.

ಕುಂಬಾರಕೊಪ್ಪಲಿನ ಮಧ್ಯಮ ವರ್ಗದ ಮಹಿಳೆ ತನಗೆ ಮದುವೆಯಾಗಿ ಎರಡೂವರೆ ವರ್ಷವಾದರೂ ಮಕ್ಕಳಾಗದ ಕಾರಣ ಚೆಲುವಾಂಬ ಆಸ್ಪತ್ರೆಯಲ್ಲಿ ಮಗುವನ್ನು ಅಪಹರಿಸುವ ಕೃತ್ಯಕ್ಕೆ ಕೈಹಾಕಿದಳು ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದು ಬಂದಿದೆ. ಈಕೆ ಮಂಡ್ಯ ಜಿಲ್ಲೆಯ ವರ್ತಕರೊಬ್ಬರೊಂದಿಗೆ ಕಳೆದ ಎರಡೂವರೆ ವರ್ಷದ ಹಿಂದೆ ಮದುವೆಯಾಗಿದ್ದಳು. ಈಕೆಯ ತವರು ಮನೆಗಿಂತ ಗಂಡನ ಮನೆಯವರು ಸ್ವಲ್ಪ ಮಟ್ಟಿಗೆ ಸ್ಥಿತಿವಂತರಾಗಿದ್ದರು ಎಂದು ಹೇಳಲಾಗಿದೆ. ಮಗುವಾಗಲಿಲ್ಲ ಎಂಬ ಮಾತುಗಳು ಗಂಡನ ಮನೆಯಿಂದ ಕೇಳಿಬರುತ್ತಿದ್ದ ಕಾರಣ ತನಗೆ ಮಗುವಾಗದಿದ್ದರೆ ಏನಾಗುವುದೋ ಎಂಬ ಹೆದರಿಕೆಯಿಂದ ಈಕೆ ತಾನು ಗರ್ಭಿಣಿಯಾಗಿರುವುದಾಗಿ ಗಂಡನ ಮನೆಯವರಿಗೆ ತಿಳಿಸಿ, ಕೆಲ ತಿಂಗಳ ಹಿಂದೆ ತವರು ಮನೆ ಸೇರಿದ್ದಳು. ಆಕೆ ತವರು ಮನೆ ಸೇರಿ ಮಗು ಜನಿಸುವ ದಿನಗಳು ಹತ್ತಿರವಾಗುತ್ತಿದ್ದಂತೆ ಆಕೆಯ ತಾಯಿ, ಗರ್ಭಿಣಿ ಎಂದು ಸುಳ್ಳು ಹೇಳಿ ಬಂದಿದ್ದೀಯೆ. ದಿನಗಳು ಕಳೆಯುತ್ತಿವೆ. ಮಗುವಿಗೆ ಏನು ಮಾಡುತ್ತೀಯೆ ಎಂದು ಚಿಂತಾಕ್ರಾಂತರಾಗಿ ಕೇಳಿದಾಗ, ಮನೆ ಬಿಟ್ಟು ಹೊರ ಬಂದ ಮಹಿಳೆ ನೇರವಾಗಿ ಚೆಲುವಾಂಬ ಆಸ್ಪತ್ರೆಗೆ ಬಂದು ಸುತ್ತಾಡುತ್ತಾ, ಭಾಷೆ ಗೊತ್ತಿಲ್ಲದ ಈ ದಂಪತಿಯ ಮಗುವನ್ನು ಅಪಹರಿಸಿದ್ದಾಳೆ. ತಾಯಿಯ ಹಾಲಿಲ್ಲದೆ ಹಸಿವಿನಿಂದ ಮಗು ಚೀರಾಡಿದಾಗ ಅದೇ ರಸ್ತೆಯಲ್ಲಿದ್ದ ಪೊಲೀಸರಿಗೆ ಶಬ್ದ ಕೇಳಿಸಿದ ಕಾರಣ ಈ ಮಹಿಳೆ ತಾನು ಅಪಹರಿಸಿದ ಮಗುವಿನೊಂದಿಗೆ ಸಿಕ್ಕಿಬಿದ್ದಿದ್ದಾಳೆ. ಪೊಲೀಸರು ಬಂಧಿಸಿ ಕರೆತಂದಾಗ ಆಕೆ ತನ್ನ ನೋವಿನ ಕತೆಯನ್ನು ಹೇಳಿಕೊಂಡು ದಿಕ್ಕು ತೋಚದೇ ತಾನು ಮಗುವನ್ನು ಅಪಹರಿಸಿದ್ದಾಗಿ ತಿಳಿಸಿದ್ದಾಳೆ.

ಒತ್ತಡದ ಬದುಕಿಗೆ ಸಂಗೀತವೇ ಮದ್ದು

ರಂಗಕರ್ಮಿ ಪ್ರೊ. ಸಿ.ವಿ.ಶ್ರೀಧರಮೂರ್ತಿ ಅಭಿಮತ



ಮೈಸೂರು, ಮಾ.18(ಎಸ್‌ಪಿಎನ್)– ಪ್ರಸ್ತುತ ಒತ್ತಡದಲ್ಲಿ ಬದುಕುತ್ತಿರುವ ಜನತೆಗೆ ಸಂಗೀತ ನೆಮ್ಮದಿ ನೀಡಲಿದೆ ಎಂದು ಹಿರಿಯ ರಂಗಕರ್ಮಿ ಹಾಗೂ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ವಿ. ಶ್ರೀಧರಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಭವನದಲ್ಲಿ ಮೈಸೂರು ಗಾನ ವೈದ್ಯಲೋಕ ಸಂಸ್ಥೆ ಹಾಗೂ ಜಿಲ್ಲಾ ಕಸಾಪ ಸಹಯೋಗದೊಂದಿಗೆ ಆಯೋಜಿಸಿದ್ದ 'ಎಂದೂ ಮರೆಯದ ಹಾಡು–4' ಗಾನ ಸವಿಸಂಜೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಸಂಗೀತ ಹಲವು ರೋಗಗಳು ವಾಸಿಯಾಗಲು ಸಹಕಾರಿಯಾಗುತ್ತದೆ ಎಂದು ಈಗಾಗಲೇ ಅನೇಕ ಸಂಶೋಧನೆಗಳಿಂದ ದೃಢಪಟ್ಟಿದೆ. ಒತ್ತಡ ಮುಕ್ತ ಸಮಾಜ ರೂಪಿಸಲು ಕಲೆ, ಸಾಹಿತ್ಯ, ಸಂಗೀತ ಸಹಕಾರಿಯಾಗುತ್ತದೆ. ಅದಕ್ಕಾಗಿಯೇ ಪ್ರಪಂಚದ ವಿವಿಧ ದೇಶಗಳು ತಮ್ಮ ಕಲೆ, ಸಾಹಿತ್ಯ, ಸಂಗೀತದ ಉಳಿವಿಗೆ ಹೆಚ್ಚಿನ ಆದ್ಯತೆ ನೀಡುತ್ತವೆ ಎಂದು ತಿಳಿಸಿದರು.

ಪ್ರಸ್ತುತ ಸಮಾಜದಲ್ಲಿ ಅಶಾಂತಿಯ ವಾತಾವರಣ ರೂಪುಗೊಂಡಿದೆ. ಇದನ್ನು ಶಾಂತಿಯುತ ವಾತಾವರಣಕ್ಕೆ ಬದಲಿಸಬೇಕಾದರೆ ಕಲೆ–ಸಂಸ್ಕೃತಿಯಿಂದ ಮಾತ್ರ ಸಾಧ್ಯ. ಹಾಗಾಗಿ ಪ್ರತಿಯೊಬ್ಬರು ಶಾಂತಿ, ನೆಮ್ಮದಿಯ ಬದುಕು ರೂಪಿಸಿಕೊಳ್ಳಲು ಸಮಾಜದಲ್ಲಿ ಮನರಂಜನೆ ಕಾರ್ಯಕ್ರಮ ಆಯೋಜನೆ ಅತ್ಯಗತ್ಯ ಎಂದರು.

ಗಾನಸವಿ ಸಂಜೆ ಶೀರ್ಷಿಕೆಯಡಿ ವಿವಿಧ ಸಿನಿಮಾ, ಭಕ್ತಿಗೀತೆಗಳಿಗೆ ಗಾಯಕರಾದ ಡಾ.ವೈ.ಡಿ.ರಾಜಣ್ಣ, ಡಾ.ಟಿ.ರವಿಕುಮಾರ್, ಡಾ.ಎ.ಎಸ್.ಪೂರ್ಣಿಮಾ, ಡಾ.ಪಿ.ಚಂದ್ರಶೇಖರ್, ಡಾ.ಸುರೇಂದ್ರನ್, ಶ್ರೀಲತಾ ಮನೋಹರ್, ಡಾ.ಶ್ಯಾಮಪ್ರಸಾದ್,ಸಿ.ಎಸ್.ವಾಣಿ, ಡಾ.ಶಿವಕುಮಾರ್, ವೈಜು ವಿಸ್ಮಿತಾ, ಜೋಶಿ ವರ್ಮ ಸಿರಿಕಂಠದಲ್ಲಿ ಮೂಡಿಬಂದ ಗಾಯನ ಪ್ರೇಕ್ಷಕರ ಮನಗೆದ್ದವು.

ಈ ವೇಳೆ 'ಪವಡಿಸು ಪರಮಾತ್ಮ', 'ಜೊತೆಯಾಗಿ ಹಿತವಾಗಿ', ಓಹೋ ಹಿಮಾಲಯ, ನನ್ನಾಣೆ ನಾನು ಬೆಂಕಿಯಲ್ಲಿ, ಆ ದೇವರಾ ಹಾಡಿದು, ಹೊಸ ಬಾಳಿಗೆ ನೀ ಜೊತೆ, ಲವ್ ಯು ಚಿನ್ನ, ಆನಂದವೇ ಮೈ ತುಂಬಿದೇ, ಒಂದೇ ಒಂದು ಕಣ್ಣ ಬಿಂದು, ಕುಣಿದು ಕುಣಿದು ಬಾರೆ, ನೂರು ನೂರು ಕೊಹಿನೂರು, ಆಕಾಶದಾಗೆ ಯಾರೊ ಮಾಯಕಾರನು, ಕಣ್ಣು ಕಣ್ಣು ಕಲೆತಾಗ, ನಾನು ಯಾರು ಯಾವ ಊರು, ಯಾವ ಮೋಹನ ಮುರಳಿ, ನಾದಾ ನಾದಾ ಪ್ರೇಮದ ನಾದ, ಸಿಹಿ ಎಂಥಾ ಆ ಕ್ಷಣ, ಕಣ್ಣಂಚಿನ ಮಾತಲಿ, ಹೃದಯದಲಿ ಇದೇನಿದು, ಈ ಹಸಿರು ಸಿರಿಯಲಿ ಮನಸು, ಎಂದೂ ನಿನ್ನ ನೋಡುವೆ, ಇಂದೂ ಆನಂದ, ನಾ ತಾಳಲಾರೆ, ಕೇಳಸದೆ ಕಲ್ಲು ಕಲ್ಲಿನಲಿ, ಅಲ್ಲಿ ಇಲ್ಲಿ ಹುಡುಕುತ ಕಣ್ಣ, ನಿನ್ನಂದಲೇ ನಿನ್ನಿಂದಲೇ ಶುರು, ಎಂದೂ ಕಾಣದ ಬೆಳಕ ಕಂಡೆ, ಒಂದೇ ಒಂದು ಆಸೆಯು ತೋಳಲಿ, ಭೂಮಿ ತಾಯಾಣೆ ನೀ ಇಷ್ಟಕಣೆ, ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ, 'ಓ ಮೇಘವೇ ಮೇಘವೇ ಹೋಗಿ ಬಾ' ಹಾಡುಗಳ ಗಾಯನ ಪ್ರೇಕ್ಷಕರ ಮನಗೆದ್ದವು. ಹಿರಿಯ ಲೇಖಕ ಎಂ.ಎಲ್.ರಮೇಶ್, ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಅಧ್ಯಕ್ಷ ಡಾ.ಟಿ.ರವಿಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಇದ್ದರು.

ಲಂಚ ಸ್ವೀಕರಿಸಿದ್ದ ಕಂದಾಯ ನಿರೀಕ್ಷಕನಿಗೆ 5 ವರ್ಷ ಜೈಲು ಶಿಕ್ಷೆ, 4 ಲಕ್ಷ ದಂಡ

ಬೆಂಗಳೂರು: ಲಂಚಕ್ಕೆ ಬೇಡಿಕೆ ಇಟ್ಟು ಸಿಕ್ಕಿಬಿದ್ದಿದ್ದ ಕಂದಾಯ ನಿರೀಕ್ಷಕನೊಬ್ಬನಿಗೆ ವಿಶೇಷ ನ್ಯಾಯಾಲಯ ಐದು ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದ್ದು, 4 ಲಕ್ಷ ರೂಪಾಯಿ ದಂಡ ಪಾವತಿಸುವಂತೆ ಆದೇಶಿಸಿದೆ. ಕೆಂಗೇರಿ ಹೋಬಳಿಯ ಕಂದಾಯ ನಿರೀಕ್ಷಕ ಸುರೇಶ್ ಜಿ.ಸಿ. (51) ದೋಷಿ ಎಂದು ತೀರ್ಮಾನಿಸಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, 5 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ರೂ. 4 ಲಕ್ಷ ದಂಡ ವಿಧಿಸಿದೆ.

ಮ್ಯುಟೇಷನ್ ಬದಲಾವಣೆ ಮಾಡಲು ಕೆಲ ವ್ಯಕ್ತಿಗಳಿಗೆ ಸುರೇಶ್ ರೂ. 5 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ನಂತರ ಚೌಕಾಸಿ ಮಾಡಿದಾಗ ರೂ.4 ಲಕ್ಷಕ್ಕೆ ಒಪ್ಪಿಕೊಂಡಿದ್ದರು. ಇದರಂತೆ ರೂ.2 ಲಕ್ಷವನ್ನು ಮುಂಗಡ ಪಡೆದಿದ್ದರು. ರೂ.2 ಲಕ್ಷ ನೀಡಿದ್ದ ವ್ಯಕ್ತಿಗಳು ಉಳಿದ ಹಣ ನೀಡುವುದಕ್ಕೂ ಮುನ್ನ ಎಸಿಬಿಗೆ ದೂರು ನೀಡಿದ್ದಾರೆ. ಇದರಂತೆ 2016ರ ಸೆಪ್ಟೆಂಬರ್ 2ರಂದು ಲಂಚ ಪಡೆಯುತ್ತಿದ್ದಾಗ ಕಂದಾಯ ನಿರೀಕ್ಷಕನನ್ನು ಅಧಿಕಾರಿಗಳು ಬಂಧನಕ್ಕೊಳಪಡಿಸಿದ್ದರು. ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಎಸಿಬಿ ಅಧಿಕಾರಿಗಳು, ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಮಂಗಳವಾರ ವಿಚಾರಣೆ ಪೂರ್ಣಗೊಳಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಕೆ ಅವರು, ಸುರೇಶ್ ವಿರುದ್ಧದ ಆರೋಪಗಳು ಸಾಬೀತಾಗಿವೆ. ಲಂಚಕ್ಕೆ ಬೇಡಿಕೆ ಇಟ್ಟಿರುವುದು ಹಾಗೂ ಪಡೆದಿರುವುದು ದೃಢಪಟ್ಟಿದೆ ಎಂದು ಪ್ರಕಟಿಸಿದರು. ಅಲ್ಲದೆ, ಸುರೇಶ್ ಅವರಿಗೆ 5 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ರೂ.4 ಲಕ್ಷ ದಂಡ ವಿಧಿಸಿ ಆದೇಶ ಹೊರಡಿಸಿದರು. ದಂಡ ಪಾವತಿಗೆ ತಪ್ಪಿದಲ್ಲಿ ನಾಲ್ಕು ತಿಂಗಳ ಸಾದಾ ಜೈಲು ಶಿಕ್ಷೆ ಅನುಭವಿಸುವಂತೆ ಆದೇಶದಲ್ಲಿ ತಿಳಿಸಿದರು.

ಚಾರ್ಟರ್ ವಿಮಾನ ಪತನ: ಇಬ್ಬರು ಪೈಲಟ್‌ಗಳು ಸಾವು

ಮಧ್ಯಪ್ರದೇಶ: ಇಲ್ಲಿನ ಬಾಲಘಾಟ್‌ನಲ್ಲಿ ಚಾರ್ಟರ್ ವಿಮಾನವೊಂದು ಪತನಗೊಂಡಿದ್ದು ವಿಮಾನದ ಪೈಲಟ್ ಮತ್ತು ಟ್ರೈನಿ ಪೈಲಟ್ ಇಬ್ಬರೂ ಮೃತಪಟ್ಟಿದ್ದಾರೆ. ಬಂಡೆಗಳ ನಡುವೆ ಒಬ್ಬರು ದೇಹ ಉರಿಯುತ್ತಿರುವುದು ಕಂಡುಬಂದಿದೆ. ಬಾಲಾಘಾಟ್ ಜಿಲ್ಲೆಯ ಲಾಂಜಿ ಮತ್ತು ಕಿರ್ನಾಪುರ ನಡುವಿನ ಭಕ್ಕುಟೋಲಾ–ಕೋಸ್ಮಾರಾ ಬೆಟ್ಟದಲ್ಲಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಟ್ರೈನಿ ಪೈಲಟ್ ರುಕಾಶಂಕ ವರ್ಸುಕ ಮತ್ತು ಪೈಲಟ್ ಮೋಹಿತ್ ಸಾವನ್ನಪ್ಪಿದ್ದಾರೆ. ಈ ವಿಮಾನವು ತರಬೇತಿ ವಿಮಾನವಾಗಿದ್ದು, ಮಹಾರಾಷ್ಟ್ರದ ಗೊಂಡಿಯಾ ಜಿಲ್ಲೆಯ ಬಿರ್ಸಿ ಏರ್‌ಸ್ಟ್ರಿಪ್‌ನಿಂದ ಹಾರಿದೆ ಎಂದು ಬಾಲಘಾಟ್ ಎಸ್‌ಪಿ ಸಮೀರ್ ಸೌರಭ್ ಹೇಳಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.18–ಮಾ.19ರ ಭಾನುವಾರ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ. ರಾಮಾನುಜ ರಸ್ತೆ 1ರಿಂದ



9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿ ಬೆಟ್ಟ ಮತ್ತು ಪಾದ, ಗುಂಡುರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರ ನಗರ, ನಂಜನಗೂಡು ಟೋಲ್ ಗೇಟ್, ತಾವರೆಕೆರೆ, ಜಾಕಿ ಕ್ವಾಟ್ರಸ್, ರೇಸ್ ಕೋರ್ಸ್ ಹಿಂಭಾಗ, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅತಿಥಿಗೃಹ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ತಾಲೂಕು ಕಚೇರಿ, ಡಿ. ದೇವರಾಜ ಅರಸು ರಸ್ತೆ, ಬಿ.ಎನ್.ರಸ್ತೆ, ಚಾಮುಂಡಿ ಬೆಟ್ಟ, ಸಿದ್ದಾರ್ಥನಗರ, ಆಲನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತಮುತ್ತಲಿನ ಪ್ರದೇಶಗಳು, ಶ್ರೀ ಹರ್ಷ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತಲಿನ ಪ್ರದೇಶಗಳು, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ನ.ರಾ. ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮೈಸೂರು ಕ್ಲಸ್ಟರ್ ಸೀಡ್ ಫಂಡ್, ಕರ್ನಾಟಕ ಆಕ್ಸಿಲರೇಟರ್ ನೆಟ್‌ವರ್ಕ್, ಮೈಸೂರು ಗ್ಲೋಬಲ್ ಟೆಕ್ನಾಲಜಿ ಸೆಂಟರ್‌ಗೆ ಚಾಲನೆ

- ಉನ್ನತ, ಐಟಿ–ಬಿಟಿ ಸಚಿವ ಡಾ.ಅಶ್ವತ್ಥ ನಾರಾಯಣರಿಂದ ಅಗತ್ಯ ನೆರವಿನ ಘೋಷಣೆ
- ಸಾವಿರಾರು ಉದ್ಯೋಗ ಸೃಷ್ಟಿ ಆಶಾಭಾವ

ಬೆಂಗಳೂರು, ಮಾ.18(ಕೆಎಂಶಿ)– ರಾಜ್ಯದ ಎಲ್ಲ ಭಾಗಗಳಲ್ಲೂ ಉದ್ದಿಮೆಗಳು ನೆಲೆಯೂರುವಂತೆ ಮಾಡುವ ಮಹತ್ವಾಕಾಂಕ್ಷೆಯಿಂದ ರೂಪಿಸಿರುವ ಬೆಂಗಳೂರು ಅಂಡ್ ಬಿಯಾಂಡ್ ಉಪಕ್ರಮದಡಿ ಮೈಸೂರು ಕ್ಲಸ್ಟರ್ ಸೀಡ್ ಫಂಡ್, ಕರ್ನಾಟಕ ಆಕ್ಸಿಲರೇಟರ್ ನೆಟ್‌ವರ್ಕ್ ಮತ್ತು ಮೈಸೂರು ಗ್ಲೋಬಲ್ ಟೆಕ್ನಾಲಜಿ ಸೆಂಟರ್ ಸೌಲಭ್ಯಗಳಿಗೆ ಐಟಿ–ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಚಾಲನೆ ನೀಡಿದರು.

ಇದರ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲೆಕ್ಟ್ರಾನಿಕ್ಸ್, ಐಟಿ–ಬಿಟಿ ಇಲಾಖೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಸ್ಟಾರ್ಟಪ್‌ಗಳಿಗೆ ಪೂರಕ ವಾತಾವರಣ ಸೃಷ್ಟಿಸಿ, ಪ್ರೋತ್ಸಾಹಿಸಲೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಬಜೆಟ್‌ನಲ್ಲಿ ಹಲವು ಉಪಕ್ರಮಗಳನ್ನು ಘೋಷಿಸಿದ್ದು, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡಿಇಎಂ)ನಡಿ ಆಯ್ದ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ಕ್ಲಸ್ಟರ್ ಸೀಡ್ ಫಂಡ್: 25 ಕೋಟಿ ರೂ. ವೆಚ್ಚದಲ್ಲಿ ಮೈಸೂರು ಕ್ಲಸ್ಟರ್ ಸೀಡ್ ಫಂಡ್ ಅನ್ನು ಇಂದು ಆರಂಭಿಸಲಾಗಿದೆ. ಇದರ ಮೂಲಕ 70ಕ್ಕೂ ಹೆಚ್ಚು ಸ್ಟಾರ್ಟಪ್‌ಗಳಿಗೆ ಅಗತ್ಯ ನೆರವು ಸಿಗಲಿದೆ. ಇದರಿಂದ ಈ ಕ್ಲಸ್ಟರ್‌ನಲ್ಲಿ ವರ್ಷಕ್ಕೆ ಒಂದು ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಈ ಕ್ಲಸ್ಟರ್‌ಗಳಲ್ಲಿ ಆಯ್ದ ಸ್ಟಾರ್ಟಪ್‌ಗಳ ಬಂಡವಾಳ ಹೂಡಿಕೆಗೆ ಸರ್ಕಾರ ಸಹಕಾರ ನೀಡಲಿದೆ. ಉದಯೋನ್ಮುಖ ಉದ್ಯಮಿಗಳಿಗೆ ಇದು ಉತ್ತಮ ಅವಕಾಶವಾಗುವುದರ ಜೊತೆಗೆ ಹೊಸ ಅಭಿವೃದ್ಧಿ ಕೇಂದ್ರಗಳನ್ನು ಸೃಷ್ಟಿಸುತ್ತದೆ. ಉದ್ಯೋಗ ಸೃಷ್ಟಿ ಹಾಗೂ ಡಿಜಿಟಲ್ ಆರ್ಥಿಕತೆಯ ವೇಗ ಹೆಚ್ಚಿಸುತ್ತದೆ. ಇದಕ್ಕಾಗಿ ಉದ್ಯಮ ಮತ್ತು ವೃತ್ತಿಪರರನ್ನು ಒಳಗೊಂಡ ಹೂಡಿಕೆ ಸಮಿತಿ(ಐಸಿ) ಪ್ರತ್ಯೇಕ ನಿಧಿಯನ್ನು ನಿರ್ವಹಿಸುತ್ತದೆ. ಈ ಮೂಲಕ 70–80 ಸ್ಟಾರ್ಟಪ್‌ಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ ಎಂದು ಸಚಿವ ಅಶ್ವತ್ಥ್ ನಾರಾಯಣ ತಿಳಿಸಿದರು.



ಸಮಾವೇಶವು (ಬಿಟಿಎಸ್) ಈ ವರ್ಷದ ನವೆಂಬರ್ 29ರಿಂದ ಡಿಸೆಂಬರ್ 1ರವರೆಗೆ ನಡೆಯಲಿದೆ. ಈ ಸಂಬಂಧವಾಗಿ ಸರಕಾರದ ಐಟಿ-ಬಿಟಿ ಮತ್ತು ಸ್ಟಾರ್ಟಪ್ ವಿಷನ್ ಗ್ರೂಪ್ ಹಾಗೂ ನಾಸ್ಕಾಂ, ಐಇಎಸ್‌ಎ, ಟಿಐಇ, ಎಬಿಎಐ, ಐಬಲ್ ಮುಂತಾದ ಔದ್ಯಮಿಕ ಸಂಘಟನೆಗಳ ಜತೆ ವಿಚಾರ ವಿನಿಮಯ ನಡೆಸುತ್ತಿದ್ದು, ಸದ್ಯದಲ್ಲೇ ಮುಂಬರುವ ಸಮಾವೇಶದ ಚಟುವಟಿಕೆಗಳನ್ನು ನಿರ್ಧರಿಸಲಾಗುವುದು. ಒಟ್ಟಿನಲ್ಲಿ ಈ ಸಮಾವೇಶವನ್ನು ಜಾಗತಿಕ ಮಟ್ಟದ ಒಂದು ಕಾರ್ಯಕ್ರಮವನ್ನಾಗಿ ನಡೆಸಲಾಗುವುದು.

ಕರ್ನಾಟಕ ಆಕ್ಸಿಲರೇಟರ್ ನೆಟ್‌ವರ್ಕ್: ದೇಶದಲ್ಲೇ ಮೊದಲ ಬಾರಿಗೆ ರಾಜ್ಯ ಸರಕಾರ ಈ ಉಪಕ್ರಮ ಆರಂಭಿಸಿದೆ. ಈ ನೆಟ್‌ವರ್ಕ್ ಅಡಿಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ 300ಕ್ಕೂ ಹೆಚ್ಚು ನವೋದ್ಯಮಗಳನ್ನು ಬೆಂಬಲಿಸುವ ವ್ಯವಸ್ಥೆ ಮಾಡಲಾಗುವುದು. ವೇಗವರ್ಧಕ ಪರಿಸರ ವ್ಯವಸ್ಥೆ ಜೊತೆಗೆ ನವೋದ್ಯಮ ಬೆಳವಣಿಗೆ ಇರುವ ಅಡೆತಡೆಗಳನ್ನು ನಿವಾರಿಸಲು ಸಹಕಾರಿಯಾಗಲಿದೆ. ಬೆಂಗಳೂರು ಜೊತೆಗೆ ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ–ಧಾರವಾಡಗಳಲ್ಲಿ ಕ್ಲಸ್ಟರ್‌ಗಳನ್ನು ಸ್ಥಾಪಿಸಲು ನೆರವು ನೀಡಲಾಗುವುದು. ಇದಕ್ಕೆ ಅಗತ್ಯವಾದ ಮಾರ್ಗದರ್ಶಕ ಹಾಗೂ ಮಾಹಿತಿ ಜಾಲವನ್ನು ರೂಪಿಸುತ್ತದೆ. ಮೈಸೂರು ಕ್ಲಸ್ಟರ್‌ಗೆ ಎಸ್‌ಜೆಸಿಇ ಸ್ಟೆಪ್ ಸೇರಿದಂತೆ ಇತರೆ ಕ್ಲಸ್ಟರ್‌ಗಳಿಗೆ ಮಾರ್ಗದರ್ಶನ ಸಂಸ್ಥೆಗಳನ್ನು ಗುರುತಿಸಲಾಗಿದೆ. ಈ ಎರಡು ಕ್ರಮಗಳಿಂದ ವರ್ಷಕ್ಕೆ 200 ಕೋಟಿ ರೂ.ಗಳಿಗೂ ಹೆಚ್ಚು ಆದಾಯ ಬರಲಿದ್ದು, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಮೂಲಕ ಇವು ಜಾರಿಗೆ ಬರಲಿವೆ ಎಂದರು.

ಮೈಸೂರು ಗ್ಲೋಬಲ್ ಟೆಕ್ನಾಲಜಿ ಸೆಂಟರ್(ಎಂಜಿಟಿಸಿ): ಎಂಜಿಟಿಸಿ, ಪ್ಲಗ್ ಮತ್ತು ಪ್ಲೇ ಮಾದರಿಯ ಜಾಗತಿಕ ಗುಣಮಟ್ಟದ ಮೂಲಸೌಲಭ್ಯವಾಗಿದೆ. ಇದರಡಿಯಲ್ಲಿ 2 ಲಕ್ಷ ಚದರ ಅಡಿಗಳಷ್ಟು ಮತ್ತು 3,000 ಜನರು ಕೆಲಸ ಮಾಡಬಹುದಾದಷ್ಟು ವಿಶಾಲ ವ್ಯವಸ್ಥೆ ನಿರ್ಮಾಣವಾಗಲಿದೆ. ಇದರಿಂದ ಐಟಿ, ಐಟಿಇಎಸ್, ಜಿಸಿಸಿ ಮತ್ತು ಇಎಸ್‌ಡಿಎಂ ವಲಯದ ನವೋದ್ಯಮಗಳ ಬೆಳವಣಿಗೆಗೆ ಇಂಬು ಸಿಗಲಿದ್ದು, ಬಂಡವಾಳ ಹೂಡಿಕೆದಾರರ ಆಕರ್ಷಿಸಲು ಸಾಧ್ಯವಾಗಲಿದೆ. ವಿಶೇಷವಾಗಿ ತಂತ್ರಜ್ಞಾನ ವಲಯದ ಉದ್ಯಮದ ಯಶಸ್ಸಿಗೆ ಇದು ನಿರ್ಣಾಯಕ ಅಂಶವಾಗಿದೆ. ಪ್ರಸ್ತುತ ಎಂಜಿಟಿಸಿಯಲ್ಲಿ ಪಾಲ್ಗೊಳ್ಳಲು ಬ್ರೀಚ್ ಪಾಯಿಂಟ್, ಸೈಬರ್ ರೇಂಜ್, ಗಿಗಾ ಇನ್ನೋಹಬ್, ಇನ್ಫಾರ್ಮೇಷನ್ ಶೇರಿಂಗ್ ಅಂಡ್ ಅನಾಲಿಸಿಸ್ ಸೆಂಟರ್ (ಐಎಸ್‌ಎಸಿ), ಐಸೋಕ್ರೇಟ್ಸ್ ಎಲ್‌ಸಿಸಿ, ಲಾಜಿಕಲಿ, ಪ್ರೋಕ್ಸೆಲೆರಾ, ವೆಲೋಕ್ಸ್, ಇಂಟರ್ ನ್ಯಾಷನಲ್ ಹಬ್ ಫಾರ್ ಮೆಟಾವರ್ಸ್ ಸಂಸ್ಥೆಗಳು ಆಸಕ್ತಿ ತೋರಿಸಿವೆ ಎಂದರು. ಈ ವೇಳೆ ಬಿಟಿಎಸ್ ರಜತ ಮಹೋತ್ಸವ ವರ್ಷದ ಸಮಾವೇಶದ ನೆನಪಿಗಾಗಿ ಸಿದ್ಧಪಡಿಸಿರುವ ಕಾಫಿ ಟೇಬಲ್ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

> ಎಲೆಕ್ಟ್ರಾನಿಕ್ ವಲಯವು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಶೇಕಡ 60ಕ್ಕಿಂತಲೂ ಹೆಚ್ಚು ಕೊಡುಗೆ ನೀಡುತ್ತಿದೆ. ಈ ವಲಯದ ಕಾಣಿಕೆಯು ವರ್ಷಕ್ಕೆ 160 ಶತಕೋಟಿ ಡಾಲರ್‌ಗಿಂತಲೂ ಹೆಚ್ಚಿದೆ. ಆದರೂ ನಾವು ಅಪೇಕ್ಷಿತ ಛಾಪು ಮೂಡಿಸಿಲ್ಲ. ಜೊತೆಗೆ ಉದ್ಯಮ ವಲಯವು ತನಗೆ ಏನು ಬೇಕೆಂದು ಸರಕಾರವನ್ನು ಕೇಳುತ್ತಿಲ್ಲ. ಆದರೆ, ಜಾಗತಿಕ ಸ್ಪರ್ಧೆಯ ಈ ಯುಗದಲ್ಲಿ ನಾವೆಲ್ಲರೂ ಸೇರಿಕೊಂಡು ಕೆಲಸ ಮಾಡಬೇಕಾದ ಸವಾಲಿದೆ ಎಂದು ಅವರು ಸೂಚಿಸಿದರು. ನವೋದ್ಯಮ ಕ್ಷೇತ್ರದಲ್ಲಿ ಬೆಂಗಳೂರು ನಗರವು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಈಗ ಚಾಲನೆ ಪಡೆದಿರುವ ಉಪಕ್ರಮಗಳಿಂದ ಮೈಸೂರು ನಗರವು ಇನ್ನು ಮುಂದೆ ವಿಶ್ವದ ಡಿಜಿಟಲ್ ರಂಗದಲ್ಲಿ ಮುನ್ನೆಲೆಗೆ ಬರಲಿದೆ. ಅಲ್ಲದೆ, ಜಾಗತಿಕ ಮಟ್ಟದ ಕಂಪನಿಗಳು ಸ್ಥಳೀಯ ಪ್ರತಿಭಾವಂತರಿಗೆ ಉದ್ಯೋಗ ನೀಡಿ, ಇಲ್ಲೇ ತಮ್ಮ ಬ್ಯಾಕ್ ಆಫೀಸ್‌ಗಳನ್ನು ತೆರೆಯಬಹುದು. ಇದರಿಂದ ಭಾರತದ ಕಡೆಗೆ ಪ್ರತಿಭೆ ಹರಿದು ಬರಲಿದೆ.
>
> –ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್, ಸಚಿವ

ಮುದ್ದುಂಗೆರೆಯಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮ

ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಪ್ರಾಮಾಣಿಕ ಪ್ರಯತ್ನ

ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ



ಮಂಡ್ಯ, ಮಾ.18– ರೈತರಿಗೆ ಕೃಷಿ, ತೋಟಗಾರಿಕೆ, ಆರೋಗ್ಯ, ಪಶು ಸಂಗೋಪನಾ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಮಾಹಿತಿ ನೀಡಿ, ಗ್ರಾಮಗಳಲ್ಲಿರುವ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ಇಂದು ಅಲಕರೆ ಗ್ರಾಪಂ ವ್ಯಾಪ್ತಿಯ ಮುದ್ದುಂಗೆರೆಯಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂದಿನ 2 ತಿಂಗಳು ಜಿಲ್ಲಾಡಳಿತಕ್ಕೆ ಚುನಾವಣೆ ಕೆಲಸವಿರುತ್ತದೆ. ಜೊತೆಗೆ ಸಾರ್ವಜನಿಕರ ಸಮಸ್ಯೆಯನ್ನು ಕಂದಾಯ ಇಲಾಖೆ ಪರಿಹರಿಸಲು ಪ್ರಯತ್ನಿಸುತ್ತದೆ ಎಂದರು.

ಪಿಕಪ್ ನಾಲೆ ರಸ್ತೆಗಳು ಹಾಗೂ ಸ್ಥಳೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆ ಅಧಿಕಾರಿಯೊಂದಿಗೆ ಸಂಪರ್ಕ ಸಾಧಿಸಿ ಸಾರ್ವಜನಿಕರು ಸಮಸ್ಯೆ ಬಗೆಹರಿಸಿಕೊಳ್ಳಿ ಎಂದರು.

ಆರೋಗ್ಯ ಇಲಾಖೆಯಿಂದ ಪ್ರತಿ ಕುಟುಂಬಕ್ಕೆ ಆಯುಷ್ಮಾನ್ ಆರೋಗ್ಯ ಕಾರ್ಡ್ ಮಾಡಿಕೊಡಲಾಗುವುದು. ಇದು ಸಂಪೂರ್ಣ ಉಚಿತವಾಗಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಿ ಎಂದರು.

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಂಡು ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೆ ಹಾಗೂ ಬದಲಾವಣೆಗೆ ತಿಂಗಳ ಅಂತ್ಯದವರೆಗೂ ಕಾಲವಕಾಶವಿದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಮಾತನಾಡಿ, 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮ ವಿಶೇಷವಾಗಿ ಕಂದಾಯ ಇಲಾಖೆ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಸಮಸ್ಯೆಯನ್ನು ಸ್ಥಳದಲ್ಲೇ ಪರಿಹರಿಸಲು ನಡೆಸಲಾಗುತ್ತಿದೆ ಎಂದರು.

ಫಲಾನುಭವಿಗಳಿಗೆ ಕಂದಾಯ ಇಲಾಖೆಯಿಂದ ಪಿಂಚಣಿ ವಿತರಣೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಗರ್ಭಿಣಿ ಸ್ತ್ರಿಯರಿಗೆ ಸೀಮಂತ, ತಾಯಿ ಕಾರ್ಡ್, ಸುಕನ್ಯಾ ಸಮೃದ್ಧಿ ಯೋಜನೆ ಆಯ್ಕೆ ಪತ್ರ, ವಿಶೇಷಚೇತನರಿಗೆ ಗುರುತಿನ ಚೀಟಿ, UDID ಕಾರ್ಡ್ ವಿತರಣೆ, ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಟ್ರೈಪಲ್ ವಿತರಣೆ, ಕೃಷಿ ಇಲಾಖೆಯಿಂದ ಮಣ್ಣಿನ ಆರೋಗ್ಯ ಕಾರ್ಡ್, ಕೀಟನಾಶಕ ಬ್ಯಾಟರಿ ಸ್ಪ್ರೇ ವಿತರಣೆ ಮಾಡಲಾಯಿತು.

ಪಿಕಪ್ ನಾಲೆ ಮಳೆಯಿಂದ ಹಾನಿಗೊಳಗಾಗಿ ರಸ್ತೆ ದುರಸ್ತಿ ಆಗಿದೆ. ಊರಿನ ಹೊರ ಭಾಗದ ಜಮೀನಿಗೆ ಚರಂಡಿ ನೀರು ಹೋಗುವುದನ್ನು ತಡೆಗಟ್ಟಬೇಕು. ಸರ್ಕಾರಿ ಖರಾಬು ಜಮೀನನ್ನು ಗ್ರಾಮಕ್ಕೆ ನೀಡಬೇಕು. ಗದ್ದೆ ಬೈಲುಗಳ ರಸ್ತೆ ದುರಸ್ತಿ ನಿರ್ಮಾಣ ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಎಂ.ಬಾಬು, ತಹಸೀಲ್ದಾರ್ ವಿಜಯ್ ಕುಮಾರ್, ಅಲಕೆರೆ ಗ್ರಾಪಂ ಅಧ್ಯಕ್ಷೆ ರೇಣುಕಮ್ಮ, ತಾಪಂ ಇಓ ಎ.ಬಿ.ವೇಣು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಆರ್.ಆಶೋಕ್, ಕೌಶಾಲ್ಯಾಭಿವೃದ್ಧಿ ಇಲಾಖೆ ಎನ್.ಆರ್.ವೇಣು ಗೋಪಾಲ ಸೇರಿದಂತೆ ಇನ್ನಿತರರಿದ್ದರು.

ಮಜ್ಜಿಗೆಪುರದಲ್ಲಿ ಜಿಲ್ಲಾಧಿಕಾರಿಗಳ ನಡೆ ಅಧಿಕಾರಿಗಳ ಕಡೆ



ಶ್ರೀರಂಗಪಟ್ಟಣ, ಮಾ.18– ತಾಲೂಕಿನ ಮಜ್ಜಿಗೆಪುರದಲ್ಲಿ ಶನಿವಾರ ತಹಸೀಲ್ದಾರ್ ಅಶ್ವಿನಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ನಡೆ ಅಧಿಕಾರಿಗಳ ಕಡೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಆಗಮಿಸಿದ ತಹಸೀಲ್ದಾರ್ ಅಶ್ವಿನಿ ಹಾಗೂ ಅಧಿಕಾರಿಗಳನ್ನು ಹುಲಿಕೆರೆ ಗ್ರಾಪಂ ಅಧ್ಯಕ್ಷೆ ಸುಶೀಲ ಅವರ ನೇತೃತ್ವದಲ್ಲಿ ಗ್ರಾಮಸ್ಥರು ಎತ್ತಿನಗಾಡಿಯಲ್ಲಿ ಮೆರವಣಿಗೆ ಮೂಲಕ ಸ್ವಾಗತಿಸಿದರು. ಈ ವೇಳೆ ಗ್ರಾಮದ ರಸ್ತೆಗಳಲ್ಲಿ ಸಂಚರಿಸಿದ ತಹಸೀಲ್ದಾರ್ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ತಹಸೀಲ್ದಾರ್ ಅಶ್ವಿನಿ ಮಾತನಾಡಿ, ಈ ಕಾರ್ಯಕ್ರಮ ಗ್ರಾಮದ ಸಮಸ್ಯೆಗಳನ್ನು ಬಗೆಹರಿಸಲು ನಡೆಸಲಾಗುತ್ತಿದೆ ಎಂದ ಅವರು ಸಾರ್ವಜನಿಕರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ನಿವೃತ್ತ ಶಿಕ್ಷಕ ಚನ್ನೇಗೌಡ ಮಾತನಾಡಿ, ಕಂದಾಯ ಸಚಿವರು ಇಲಾಖೆಗೆ ಸಂಬಂಧಪಟ್ಟ ಇಲಾಖೆಗೆ ಸಮಸ್ಯೆಗಳು ಶೀಘ್ರ ಬಗೆಹರಿಸಯುತ್ತವೆ ಎಂದಿದ್ದರೂ, ತಿಂಗಳುಗಟ್ಟಲೇ ಕಚೇರಿಗೆ ಅಲೆಯಬೇಕಾಗಿದೆ ಎಂದು ದೂರಿದರು.

ಕಾರ್ಯಕ್ರಮದಲ್ಲಿ ಕುಡಿಯುವ ನೀರು, ಆರೋಗ್ಯ ಸಮಸ್ಯೆ, ಬಸ್ ಸೌಲಭ್ಯ, ಸರ್ಕಾರಿ ಜಾಗ ಕಬಳಿಕೆ ಸೇರಿದಂತೆ ಹಲವು ಸಮಸ್ಯೆಗಳು ಪ್ರತಿಧ್ವನಿಸಿದರು. ಈ ವೇಳೆ ಗ್ರಾಮಸ್ಥರು ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸದಿದ್ದರೇ ಮುಂಬರುವ ಚುನಾವಣೆಯನ್ನು ಸಾಮೂಹಿಕವಾಗಿ ಬಹಿಷ್ಕರಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ತಹಸೀಲ್ದಾರ್ ಎಲ್ಲಾ ಸಮಸ್ಯೆಗಳ ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಬಳಿಕ ಗ್ರಾಮದ ಹಿರಿಯರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರೇಡ್–2 ತಹಸೀಲ್ದಾರ್ ರೇಖಾ, ಭೂ ಮಾಪನ ಇಲಾಖೆ ಎಡಿಎಲ್ಆರ್ ಮೇಘನಾ, ಡಿಹೆಚ್ಓ ಡಾ.ವೆಂಕಟೇಶ್, ಪಶು ಸಂಗೋಪನಾ ಇಲಾಖೆ ಡಾ.ಶಿವಲಿಂಗಯ್ಯ, ತೋಟ ಗಾರಿಕಾ ಇಲಾಖೆ ಸಹಾಯಕ ನಿರ್ದೇಶಕಿ ಗಾಯಿತ್ರಿ, ಉಪ ತಹಸೀಲ್ದಾರ್ ಸಾಕಮ್ಮ, ರಾಜಸ್ವ ನೀರಿಕ್ಷಕ ಉಮೇಶ್, ಜಯಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪುಷ್ಪ, ಗ್ರಾಪಂ ಉಪಾಧ್ಯಕ್ಷೆ ರೇಣುಕಾ, ಸದಸ್ಯ ಮಂಜುನಾಥ್, ಗಿರಿಜಾ, ಪಿಡಿಓ ನಟೇಶ್, ಗ್ರಾಮಲೆಕ್ಕಿಗ ರಮೇಶ್, ರಘು, ಹರ್ಷಿತಾ ಸೇರಿದಂತೆ ಇತರರಿದ್ದರು.

ಮಾ.24, ವಿಶ್ವ ಕ್ಷಯರೋಗ ದಿನಾಚರಣೆ

ಮಂಡ್ಯ, ಮಾ.18– ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದ ವತಿಯಿಂದ ವಿಶ್ವ ಕ್ಷಯರೋಗ ದಿನವನ್ನು ಹೌದು ನಾವು ಕ್ಷಯರೋಗ ಕೊನೆಗೊಳಿಸಬಹುದು ಎಂಬ ಘೋಷವಾಕ್ಯದಡಿ ಮಾ.24ರ ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಆಚರಿಸಲಾಗುತ್ತದೆ ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪೂರ್ಣ ಕಾಮಗಾರಿ ಉದ್ಘಾಟಿಸದಂತೆ

ಜಿಲ್ಲಾಧಿಕಾರಿಗೆ ಕಾಂಗ್ರೆಸ್ ನಿಯೋಗ ಮನವಿ



ಮಂಡ್ಯ, ಮಾ.18– ಮಳವಳ್ಳಿ ಸೇರಿದಂತೆ ಮಂಡ್ಯ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಅಪೂರ್ಣಗೊಂಡಿರುವ ಕಾಮಗಾರಿ ಉದ್ಘಾಟನೆ, ಟೆಂಡರ್‌ಗೂ ಮುನ್ನ ಶಂಕುಸ್ಥಾಪನೆ ನೆರವೇರಿಸುತ್ತಿರುವುದು ಕಂಡು ಬಂದಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಾಗಲು ಒಂದು ವಾರ ಬಾಕಿ ಇದೆ. ಹೀಗಾಗಿ ಅವುಗಳಿಗೆ ಅವಕಾಶ ಮಾಡಿಕೊಡಬಾರದು ಎಂದು ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಮತ್ತು ಮಧು ಜಿ.ಮಾದೇಗೌಡ ಅವರು ಜಿಲ್ಲಾಧಿಕಾರಿ ಗೋಪಾಲ ಕೃಷ್ಣ ಹಾಗೂ ಜಿಪಂ ಸಿಇಓ ಶಾಂತ ಎಲ್. ಹುಲ್ಮನಿ, ಎಸ್ಪಿ ಯತೀಶ್ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಚುನಾವಣಾ ಆಯೋಗದ ಸೂಚನೆ ಧಿಕ್ಕರಿಸಿ ಮತದಾರರಿಗೆ ಆಮಿಷವೊಡ್ಡುವ ಕಾರ್ಯಗಳು ನಿರಂತರವಾಗಿ ನಡೆಯುತ್ತಿದ್ದು, ಮತದಾರರನ್ನು ಮರಳು ಮಾಡುವ ಸಲುವಾಗಿ ನಿರ್ಮಾಣ ಹಂತದಲ್ಲಿರುವ ಅಪೂರ್ಣ ಸರ್ಕಾರಿ ಕಟ್ಟಡಗಳನ್ನು ಹಾಗೂ ಕಾಮಗಾರಿ ಉದ್ಘಾಟಿಸಲಾಗುತ್ತಿದೆ. ಇನ್ನೂ ಪೂರ್ಣವಾಗದಿರುವ ಕಾಮಗಾರಿಗಳನ್ನು ಉದ್ಘಾಟಿಸುವ ಮೂಲಕ ಮತದಾರರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿರುವ ಪ್ರಕರಣಗಳು ಚುನಾವಣಾ ಆಯೋಗದ ನಿರ್ದೇಶನವನ್ನು ಧಿಕ್ಕರಿಸಿ ನಡೆಯುತ್ತಿವೆ. ಅದೇ ರೀತಿ ಟೆಂಡರ್ ಕರೆಯುವ ಮೊದಲೇ ಭೂಮಿ ಪೂಜೆ ಮಾಡಲಾಗುತ್ತಿದೆ. ಇದು ಬಹುತೇಕ ಎಲ್ಲಾ ಇಲಾಖೆಗಳಲ್ಲಿಯೂ ನಡೆಯುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ. ಇದು ಚುನಾವಣಾ ಆಯೋಗದ ಸೂಚನೆಯ ಸ್ಪಷ್ಟ ಉಲ್ಲಂಘನೆಯಾಗಿದೆ.

ಆದ್ದರಿಂದ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ತಾವು ಇಂತಹವುಗಳನ್ನು ತಡೆಯಲು ಕ್ರಮ ವಹಿಸಬೇಕು. ಮತದಾರರ ಮೇಲೆ ಪ್ರಭಾವ ಬೀರುವ ಯಾವುದೇ ಕಾರ್ಯಗಳು ನಡೆಯದಂತೆ ನೋಡಿಕೊಳ್ಳುವ ಮೂಲಕ ನಿಷ್ಪಕ್ಷಪಾತ ಚುನಾವಣೆ ನಡೆಸಲು ಹಾಗೂ ಚುನಾವಣಾ ಆಯೋಗದ ನಿರ್ದೇಶನ ಪಾಲಿಸುವಂತೆ ಈ ಮೂಲಕ ಒತ್ತಾಯಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಗೋಪಾಲಕೃಷ್ಣ ಪ್ರತಿಕ್ರಿಯಿಸಿ, ಈಗಾಗಲೇ ಜಿಲ್ಲಾದ್ಯಂತ ಕ್ರಮ ವಹಿಸಲಾಗಿದೆ. ಎಲ್ಲಾ ತಾಲೂಕುಗಳಿಗೂ ಸೂಚನೆ ನೀಡಲಾಗಿದ್ದು, ಅಪೂರ್ಣ ಕಾಮಗಾರಿ ಉದ್ಘಾಟನೆ ಮಾಡಬಾರದು ಹಾಗೂ ಟೆಂಡರ್ ಆಗದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಬಾರದು ಎಂದು ನಿಯೋಗಕ್ಕೆ ತಿಳಿಸಿದರು.

ಭ್ರಷ್ಟಾಚಾರಕ್ಕೆ ದುರಾಸೆಯೇ ಮೂಲ ಕಾರಣ: ಸಂತೋಷ್ ಹೆಗ್ಡೆ



ಮಂಡ್ಯ, ಮಾ.18– ಸಮಾಜದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳಿಗೆ ದುರಾಸೆಯೇ ಮೂಲ ಕಾರಣ. ಎಲ್ಲಾ ಕಾಯಿಲೆಗಳಿಗೆ ಔಷಧಿ ಇದ್ದರೂ ದುರಾಸೆಗೆ ಔಷದಿ ಇಲ್ಲ. ಇದನ್ನು ಹೋಗಲಾಡಿಸಲು ಒಂದೇ ದಾರಿ ತೃಪ್ತಿ. ತೃಪ್ತಿಯಿಂದ ದುರಾಸೆ ಮಟ್ಟ ಹಾಕಬಹುದು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹೇಳಿದರು.

ನಗರದ ಜ್ಞಾನಸಾಗರ ಕ್ಯಾಂಪಸ್‌ನಲ್ಲಿ ಎಸ್.ಬಿ.ಎಜುಕೇಷನ್ ಟ್ರಸ್ಟ್‌ನಿಂದ ನಡೆದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಸನ್ನಿವೇಶದಲ್ಲಿ ಉತ್ತಮ ಶಿಕ್ಷಣ ಪಡೆದ ವಿದ್ಯಾರ್ಥಿಗಳು ದುರಾಸೆ ಮತ್ತು ಅಪ್ರಾಮಾಣಿಕತೆ ಸಮಾಜವನ್ನು ಬದಲಿಸಲು ಗಟ್ಟಿಯಾಗಿ ನಿಲ್ಲುವ ಮೂಲಕ ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ದೇಶದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅದನ್ನು ನಿಯಂತ್ರಿಸಿದರೆ ಮಾತ್ರ ದೇಶದ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿದೆ. ಹೆಚ್ಚು ಓದಿ ದೊಡ್ಡ ಹುದ್ದೆಗೇರುವ ಆಕಾಂಕ್ಷೆ ಇರಬೇಕು. ಆ ಮೂಲಕ ಶ್ರೀಮಂತರಾಗುವುದು ತಪ್ಪಲ್ಲ. ಇನ್ನೊಬ್ಬರ ಜೇಬಿಗೆ, ಮತ್ತೊಬ್ಬರ ಹೊಟ್ಟೆಗೆ ಕೈ ಹಾಕಿ ಸಿರಿವಂತರಾಗಬೇಕಿಲ್ಲ ಎಂದರು.

ಜೀಪ್ ಹಗರಣದಿಂದ ಕಲ್ಲಿದ್ದಲು ಹಗರಣಗಳವರೆಗೆ ಉದಾಹರಣೆ ನೀಡಿದ ಸಂತೋಷ್ ಹೆಗ್ಡೆ ಅವರು ಸರ್ಕಾರ 1 ರೂ. ಅಭಿವೃದ್ಧಿಗೆ ನೀಡಿದರೆ ಕೊನೆ ಹಂತಕ್ಕೆ 15 ಪೈಸೆ ಮಾತ್ರ ತಲುಪಲಿದೆ ಎಂದು ಅಂದಿನ ಪ್ರಧಾನಿ ರಾಜೀವ್ ಗಾಂಧಿ ಬಹಿರಂಗವಾಗಿ ಹೇಳಿದ್ದರು. 2023ರ ಇಂದಿನ ಕಾಲಘಟ್ಟದಲ್ಲಿ 100 ರೂ. ನೀಡಿದರೆ 15 ಪೈಸೆಯಷ್ಟೇ ಕಡೆ ಹಂತಕ್ಕೆ ತಲುಪುತ್ತಿದೆ ಎಂದು ವಿಷಾದಿಸಿದರು.

ಹಿಂದೆ ಕಾರಣಾಂತರಗಳಿಂದ ಜೈಲಿಗೆ ಹೋಗಿ ಬಂದವರ ಕುಟುಂಬವನ್ನು ಜನರು ಕೀಳಾಗಿ ನೋಡುತ್ತಿದ್ದರು. ಆದರೆ, ಪ್ರಸ್ತುತ ಜೈಲಿಗೆ ಹೋಗಿ ಬರುವವರಿಗೆ ಹಾರ ತುರಾಯಿ ಹಾಕಿ, ಜೈಕಾರ ಹಾಕಿ ಅಭಿನಂದಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮತದಾರರೇ ಉತ್ತಮ ಮಟ್ಟದಲ್ಲಿರುವ ವ್ಯಕ್ತಿಗಳು. ಮತದಾರರ ಕೈಯಿಂದಲೇ ಪ್ರಜಾಪ್ರಭುತ್ವ ಉಳಿಯಬೇಕಿದೆ. ಪ್ರತಿಯೊಬ್ಬ ಮತದಾರರು ಉತ್ತಮ ವ್ಯಕ್ತಿ ಆಯ್ಕೆ ಮಾಡಬೇಕು. ಚುನಾವಣೆ ಬರುತ್ತಿದೆ. ಐಎಎಸ್, ಐಪಿಎಸ್ ಅಧಿಕಾರಿಗಳು ರಾಜೀನಾಮೆ ಕೊಟ್ಟು ಚುನಾವಣೆಗೆ ನಿಲ್ಲುತ್ತಿದ್ದಾರೆ. ಆದ್ದರಿಂದ ಇವರು ಜನತಾ ಸೇವೆಗೆ ಬಂದಿದ್ದಾರಾ ಅಥವಾ ಬೇರೆ ಉದ್ದೇಶಕ್ಕೆ ಬಂದಿದ್ದಾರಾ ಎಂದು ನೋಡಿ ಮತದಾರರು ಮತ ಹಾಕಬೇಕು. ಜನರ ಹಿತಾಸಕ್ತಿ ಇರುವಂತ ಅಭ್ಯರ್ಥಿ ಆಯ್ಕೆಯಾದರೆ ಪ್ರಜಾಪ್ರಭುತ್ವ ಉಳಿಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಎಸ್.ಬಿ.ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಪ್ರೊ.ಬಿ.ಶಿವಲಿಂಗಯ್ಯ, ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ, ಪ್ರಾಂಶುಪಾಲರಾದ ಡಾ.ಪಿ.ಸುಮಾರಾಣಿ, ಹೆಚ್.ಎಂ. ಶ್ರೀನಿವಾಸ್ ಹಾಜರಿದ್ದರು.

ಎಂ.ದೇವರಾಜು ನಿಧನ



ಮಳವಳ್ಳಿ, ಮಾ.18– ತಾಲೂಕಿನ ಕಲ್ಲಾರೆಪುರ ಗ್ರಾಮದ ನಿವಾಸಿ ಎಂ.ದೇವರಾಜು(48) ಶನಿವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ (ಮಾ.19) ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಪ್ರಯತ್ನದಲ್ಲಿ
ಮೈಸೂರು ಮುಕ್ತ ವೇದಿಕೆಯ ಮೂಲಕ 'ನಾಗರಿಕ ಜಾಗೃತಿ' ಸಂದೇಶ





ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಭಾಂಗಣದಲ್ಲಿ 'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಮಾರ್ಗ' ಕುರಿತ ಜಾಗೃತಿ ಕಾರ್ಯಕ್ರಮ ಶನಿವಾರ ನಡೆಯಿತು. ವೇದಿಕೆಯಲ್ಲಿ (ಎಡದಿಂದ) ಮೈಸೂರು ಮುಕ್ತ ವೇದಿಕೆಯ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಪ್ರಥಮ್ ಮೈಸೂರು ಸಂಸ್ಥಾಪಕ ಟ್ರಸ್ಟಿ ಅಶ್ವಿನಿ ರಂಜನ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಮೈಸೂರು ವಿವಿ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಕೃಷ್ಣ ಹೊಂಬಾಳ್, ಕ್ಯಾಬಿನೆಟ್ ಕಾರ್ಯಾಲಯದ ಮಾಜಿ ಅಧಿಕಾರಿ ರವಿ ಜೋಷಿ, ವೇದಿಕೆಯ ಸಂಚಾಲಕ ಪ್ರೊ.ಎಂ.ಉಮಾಪತಿ ಇದ್ದಾರೆ. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ನೆರೆದಿದ್ದ ಸಭಿಕರನ್ನು ಕಾಣಬಹುದು.

ಚುನಾವಣಾ ಸುಧಾರಣೆ; ನಿರ್ಣಯಗಳು....

- ನಮ್ಮಲ್ಲಿ ಪ್ರತಿಯೊಬ್ಬರೂ ಮತ ಚಲಾಯಿಸುವುದು ಮಾತ್ರವಲ್ಲದೆ ಕನಿಷ್ಠ ಐವರು ಮತದಾರರು ತಮ್ಮ ಮತದಾನದ ಹಕ್ಕು ಚಲಾಯಿಸುವಂತೆ ಮನವೊಲಿಸುತ್ತೇವೆ.
- ಮತಪತ್ರದಲ್ಲಿ ಯಾವುದೇ ಅಭ್ಯರ್ಥಿಯು ಸೂಕ್ತವಲ್ಲ ಎಂಬುದು ಮನವರಿಕೆಯಾದರೆ ನಾವೆಲ್ಲರೂ ನೋಟಾ ಆಯ್ಕೆಯನ್ನು ಪರಿಗಣಿಸುತ್ತೇವೆ.
- ನೋಟಾ ಜಾರಿ ಹಾಗೂ ಅಗತ್ಯವಿರುವ ಇತರ ಚುನಾವಣಾ ಸುಧಾರಣೆಗಳನ್ನು ಜಾರಿಗೊಳಿಸುವ ಅಗತ್ಯತೆಯನ್ನು ಒತ್ತಾಯಿಸುತ್ತೇವೆ.

ಉಚಿತಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಕುಸಿತ

ಒಂದನೇ ಪುಟದಿಂದ

ಅಥವಾ ಭವಿಷ್ಯದಲ್ಲಿ ಅಭ್ಯರ್ಥಿಗಳಲ್ಲಿ ಬದಲಾವಣೆಯಾಗಿ ಉತ್ತಮ ಅಭ್ಯರ್ಥಿಗಳನ್ನು ಕಾಣಬಹುದು ಎಂದು ಅಭಿಪ್ರಾಯಿಸಿ 'ನೋಟಾ' ಪರಿಚಯ ಮಾಡಿಕೊಟ್ಟರು.

ಕ್ರಿಮಿನಲ್‌ಗಳೇ ಹೆಚ್ಚು: ಚುನಾವಣೆಯಲ್ಲಿ ಕ್ರಿಮಿನಲ್ ಹಿನ್ನೆಲೆಯುಳ್ಳ ಅಭ್ಯರ್ಥಿಗಳೇ ಗೆಲ್ಲುವ ಪ್ರಮಾಣ ಹೆಚ್ಚಾಗಿದೆ. ಅವರಲ್ಲಿ ಹಣ ಬಲ, ತೋಳ್ಬಲ ಹೆಚ್ಚಾಗಿರುವುದರಿಂದ ಸಹಜವಾಗಿ ಗೆಲ್ಲುವವರು ಅವರೇ ಆಗಿರುತ್ತಾರೆ. ಕೊಲೆ, ಅತ್ಯಾಚಾರ ಮಾಡಿದವರು ಇರುತ್ತಾರೆ. ಕಾನೂನಿನಿಂದ ಬಚಾವ್ ಮಾಡುವ ನಾಯಕರು, ಇಂತಹವರಿಗೆ ಬೆಂಗಾವಲಾಗಿ ನಿಂತಿರುತ್ತಾರೆ. ಅವರು ಗೆಲ್ಲುತ್ತಾರೆ ಎನ್ನುವುದೇ ಇದಕ್ಕೆ ಕಾರಣವಾಗಿರಬಹುದು. 2008ರ ಲೋಕಸಭಾ ಚುನಾವಣೆಯಲ್ಲಿ 195 ಮಂದಿ ಕ್ರಿಮಿನಲ್ ಹಿನ್ನಲೆಯುಳ್ಳವರು ಇದ್ದರೆ, 2013ರಲ್ಲಿ 334 ಮಂದಿ ಹಾಗೂ 2018ರಲ್ಲಿ 391 ಮಂದಿ ಇದ್ದರು. 2014ಕ್ಕೆ ಕ್ರಿಮಿನಲ್ ಹಿನ್ನಲೆಯುಳ್ಳ ಅಭ್ಯರ್ಥಿ ಪ್ರಮಾಣ ಶೇ.26ರಷ್ಟು ಹೆಚ್ಚಾಗಿದೆ. ಕಳೆದ ಚುನಾವಣೆಯಲ್ಲಿ ಗೆಲುವು ಪಡೆದಿರುವ 539 ಅಭ್ಯರ್ಥಿಗಳಲ್ಲಿ 233 ಸಂಸದರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಬಿಜೆಪಿಯ 116 ಮಂದಿ, ಕಾಂಗ್ರೆಸ್‌ನ 29, ಜೆಡಿಯುನ 13 ಹಾಗೂ ಡಿಎಂಕೆ ಹಾಗೂ ಇತರೆ ಪಕ್ಷಗಳಿಂದ 10 ಮಂದಿ ಕ್ರಿಮಿನಲ್ ಹಿನ್ನಲೆಯುಳ್ಳ ಸಂಸದರಿದ್ದಾರೆ. ಕ್ರಿಮಿನಲ್ ಹಿನ್ನಲೆಯುಳ್ಳ ವ್ಯಕ್ತಿಗಳು ಜನಪ್ರತಿನಿಧಿಯಾಗಿ ಆಯ್ಕೆಯಾದಾಗ ಭ್ರಷ್ಟಾಚಾರ ತಾನಾಗಿಯೇ ಹೆಚ್ಚಾಗುತ್ತದೆ. ಕಮಿಷನ್ ಮಾದರಿಯಲ್ಲಿ ಹಣ ಸಂಗ್ರಹಿಸಿ ಚುನಾವಣೆಗೆ ಮತ್ತೇ ಹೂಡಿಕೆ ಮಾಡುವುದು, ಅಪರಾಧ ಪ್ರಕರಣಗಳ ಹೆಚ್ಚಳ, ಹಲ್ಲೆ, ವ್ಯವಹಾರದಲ್ಲಿ ವಂಚನೆ ಪ್ರಕರಣ ಸೇರಿ ಕೊನೆಗೆ ಕರ್ನಾಟಕ, ದೇಶದಲ್ಲಿಯೇ ಅತೀ ಭ್ರಷ್ಟಾಚಾರದಿಂದ ಕೂಡಿರುವ ರಾಜ್ಯ ಎಂಬ ಅಪಖ್ಯಾತಿಯನ್ನು ಪಡೆಯಬೇಕಾಗುತ್ತದೆ ಎಂದು ಮತದಾರರನ್ನು ಎಚ್ಚರಿಸಿದರು.

ಉಚಿತಗಳು: ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಉಚಿತಗಳನ್ನು ಘೋಷಣೆ ಮಾಡುತ್ತಾರೆ. ಪಕ್ಷದಿಂದ ಉಚಿತ ಅಕ್ಕಿ, ಮಾಸಿಕ ಭತ್ಯೆ, ಉಚಿತ ವಿದ್ಯುತ್, ಉಚಿತ ಬಸ್ ಪಾಸ್ ಇತ್ಯಾದಿ ಉಚಿತ ಘೋಷಣೆಗಳನ್ನು ಮಾಡಿದರೆ, ಅಭ್ಯರ್ಥಿಗಳು ಹಣ, ಹೆಂಡ, ಮಾಂಸದೂಟ, ಸೀರೆ, ಟಿವಿ, ಕುಕ್ಕರ್, ಉಚಿತ ಪ್ರವಾಸ ಎಂಬಿತ್ಯಾದಿ ಉಡುಗೊರೆಗಳ ಜೊತೆಗೆ ಉದ್ಯೋಗ ಕೊಡಿಸುವ ಭರವಸೆಗಳನ್ನು ನೀಡಿ ಚುನಾವಣಾ ಸಂದರ್ಭದಲ್ಲಿ ಹಣದ ಹೊಳೆಯನ್ನೇ ಹರಿಸುತ್ತಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್ ಘೋಷಣೆ ಮಾಡಿರುವ ಗೃಹಜ್ಯೋತಿ ಮತ್ತು ಗೃಹಲಕ್ಷ್ಮಿ ಯೋಜನೆಗೆ 56,550 ಕೋಟಿ ರೂ. ಖರ್ಚಾದರೆ, ಎಎಪಿ ಪಕ್ಷದ ಕೃಷಿ ಸಾಲ ಯೋಜನೆ ಮತ್ತು ಉಚಿತ ವಿದ್ಯುತ್‌ಗೆ 62,301 ಕೋಟಿ ರೂ. ಹಾಗೂ ಬಿಜೆಪಿಯ ಗೃಹಿಣಿ ಶಕ್ತಿ ಮತ್ತು ಉಚಿತ ಬಸ್ ಪಾಸ್‌ಗೆ 2,132 ಕೋಟಿ ರೂ. ಖರ್ಚಾಗಲಿದೆ. ಈ ಉಚಿತ ಯೋಜನೆಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಕುಸಿಯಲಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಉಚಿತಗಳಿಂದ ಇತರೆ ಪ್ರಮುಖ ಯೋಜನೆಗಳ ಜಾರಿಗೆ ಹಿನ್ನಡೆಯಾಗಲಿದೆ. ಎಲ್ಲಾ ಬಗೆಯ ಸಂಪನ್ಮೂಲಗಳ ಕೊರತೆ ಉಂಟಾಗುತ್ತದೆ. ಒಮ್ಮೆ ಉಚಿತವಾಗಿ ನೀಡಿದನ್ನು ಮತ್ತೆ ಮತ್ತೆ ಜನರು ಅಪೇಕ್ಷೆ ಮಾಡುತ್ತಾರೆ. ನೀರುದ್ಯೋಗಿಗಳು ಭ್ರಷ್ಟ ರಾಜಕಾರಣಿಗಳನ್ನೇ ಅವಲಂಭಿಸಬೇಕಾಗುತ್ತದೆ. ಇದರಿಂದ ಅಪರಾಧ ಪ್ರಕರಣಗಳು ಹೆಚ್ಚಾಗುತ್ತವೆ. ಕಾರ್ಮಿಕರು ದೊರೆಯುವುದು ಕಷ್ಟವಾಗುವುದರ ಜೊತೆಗೆ ಕಡಿಮೆ ಅವಧಿಯ ಯೋಜನೆಗಳು ದೀರ್ಘಕಾಲ ತೆಗೆದುಕೊಳ್ಳುತ್ತವೆ ಎಂದು ಉಚಿತಗಳನ್ನು ನೀಡುವುದರಿಂದಾಗುವ ಪರಿಣಾಮಗಳನ್ನು ಸವಿವರವಾಗಿ ತಿಳಿಸಿದರು.

ಪರಿಹಾರಗಳು: ಮತ ನೀಡದ ಶೇ.38ರಷ್ಟು ಮತದಾರರು ತಪ್ಪದೇ ಮತ ಹಾಕುವಂತೆ ಮಾಡುವುದು. ಇಂತಹ ಪಕ್ಷದ ಅಭ್ಯರ್ಥಿ ಎಂಬುದನ್ನು ಪರಿಗಣಿಸದೆ ತಮಗೆ ಸೂಕ್ತ ಹಾಗೂ ಅರ್ಹ ಎನಿಸುವ ಅಭ್ಯರ್ಥಿಗೆ ಮತ ನೀಡುವುದು. ಬದಲಾವಣೆ ತರುವ ಹಾಗೂ ನಾಯಕತ್ವದ ಗುಣವುಳ್ಳವರಿಗೆ ಆದ್ಯತೆ ನೀಡುವುದು. ನೀರುದ್ಯೋಗ ಸಮಸ್ಯೆ ಬಗೆಹರಿಸುವ ಚಿಂತನೆಯುಳ್ಳವರನ್ನು ಬೆಂಬಲಿಸುವುದರಿಂದ ಉತ್ತಮರು ಹಾಗೂ ಸಾಧಕರನ್ನೊಳಗೊಂಡ ದೇಶವಾಗಿ ಭಾರತ ಹೊರಹೊಮ್ಮುತ್ತದೆ. ಗ್ರಾಮೀಣ ಭಾಗದ ಯುವಕರಿಗೆ ಪ್ರೋತ್ಸಾಹ, ಕೌಶಲ್ಯ ತರಬೇತಿ ಹಾಗೂ ಹೆಚ್ಚು ಅವಕಾಶ ನೀಡುವುದು, ಅಕ್ಕಿ, ಬಟ್ಟೆ ಬದಲಿಗೆ ಚಿಕ್ಕ ಮಕ್ಕಳಿಗೆ ಕಂಪ್ಯೂಟರ್ ನೀಡುವ ಮೂಲಕ ಅವರಲ್ಲಿ ತಾಂತ್ರಿಕ ಜ್ಞಾನ ಹೆಚ್ಚಿಸುವುದು. ನಿಗದಿತ ಸಮಯದಲ್ಲಿ ಸುಧಾರಣೆ ತರುವುದು ಮುಖ್ಯವಾಗಿದೆ ಎಂದರು.

ಪ್ರತ್ಯೇಕ ಸೂಕ್ತ ಕಾನೂನು ಅಗತ್ಯ

ಸ್ವಚ್ಛ ಸರ್ಕಾರ ಎನ್ನುವುದು ಒಂದು ಸುಂದರ ಕನಸಷ್ಟೆ ಇದು ಸಾಧ್ಯವಾಗಬೇಕಾದರೆ ಪರಿಣಾಮಕಾರಿ ಸುಧಾರಣೆ ಅತ್ಯವಶ್ಯವಾಗಿದೆ. ಸುಧಾರಣೆಯಿಂದ ಹಣ ಮತ್ತು ತೋಳ್ಬಲದ ಶಕ್ತಿ ಕುಂದುತ್ತದೆ. ಆದರೆ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಬಳಸಿಕೊಂಡು ಕ್ರಿಮಿನಲ್‌ಗಳು ರಾಜಕೀಯ ಪ್ರವೇಶಿಸಿ, ಚುನಾವಣೆಯಲ್ಲೂ ಗೆದ್ದು ಬರುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು. ಚುನಾವಣಾ ಸುಧಾರಣೆ ನಿಟ್ಟಿನಲ್ಲಿ ಹಲವು ದಿಟ್ಟ ನಿರ್ಧಾರಗಳೊಂದಿಗೆ ಹೆಜ್ಜೆ ಇಡಬೇಕು. ಮೊದಲಿಗೆ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು. ಇದು ಸುಲಭದ ವಿಚಾರವಲ್ಲ. ಹಾಗಾಗಿ ಹಲವು ದೇಶಗಳಲ್ಲಿ ಪೂರ್ವ ಚುನಾವಣೆ ನಡೆಸುವ ಮೂಲಕ ಅಭ್ಯರ್ಥಿಗಳ ಪಟ್ಟಿ ಮಾಡಲಾಗುತ್ತದೆ. ರಾಜಕೀಯ ಪಕ್ಷಗಳ ಆಂತರಿಕ ವಿಚಾರವಾದರೂ ಸಾರ್ವಜನಿಕರು ಮತ ಚಲಾಯಿಸಬಹುದು. ಚುನಾವಣೆಯಲ್ಲಿ ಯಾವ ಅಭ್ಯರ್ಥಿ ಸ್ಪರ್ಧಿಸಿದರೆ ಸೂಕ್ತ ಎಂದು ತಿಳಿಸಬಹುದು. ನಮ್ಮಲ್ಲೂ ಅಂತಹ ವ್ಯವಸ್ಥೆ ಅನುಸರಿಸಬಹುದು. ಮತದಾನದ ವೇಳೆ ನೋಟಾ ಆಯ್ಕೆ ಒಂದು ನಕಾರಾತ್ಮಕ ಆಯ್ಕೆಯಾಗಿದೆ. ಇದರಿಂದ ಯಾವುದೇ ಬದಲಾವಣೆ ನಿರೀಕ್ಷಿಸಲಾಗದು. ಒಂದು ವೇಳೆ ಅಭ್ಯರ್ಥಿಗಳಿಗಿಂತ ನೋಟಾಗೆ ಹೆಚ್ಚು ಮತ ಸೇರಿದರೆ ಚುನಾವಣೆಯೇ ಅಮಾನ್ಯವಾದಂತಾಗುತ್ತದೆ ಎಂದರು.ರಾಜಕೀಯ ಪಕ್ಷಗಳು ಈ ದೇಶದಲ್ಲಿ ಕಪ್ಪುಹಣ ಮತ್ತು ಭ್ರಷ್ಟಾಚಾರದ ತಾಯಿಯಿದ್ದಂತೆ. ಅವು ನಿಯಂತ್ರಣದಲ್ಲಿಲ್ಲ. ಪಕ್ಷಗಳ ಆರ್ಥಿಕ ಲೆಕ್ಕಪತ್ರವೂ ಪಾರದರ್ಶಕವಾಗಿಲ್ಲ. ಅವುಗಳನ್ನು ಶಿಕ್ಷಿಸುವ ಅವಕಾಶವೂ ಇಲ್ಲವಾಗಿದೆ. ಹಾಗಾಗಿ ರಾಜಕೀಯ ಪಕ್ಷಗಳ ನಿಯಂತ್ರಣಕ್ಕೆ ಪ್ರತ್ಯೇಕ ಸೂಕ್ತ ಕಾನೂನು ಅವಶ್ಯಕತೆ ಇದೆ. ಚುನಾವಣಾ ವೆಚ್ಚವನ್ನು ಕಡಿಮೆ ಮಾಡಿ, ಪಾರದರ್ಶಕತೆ ತರಬೇಕು. ಉದ್ಯಮಿಗಳು, ಗುತ್ತಿಗೆದಾರರು, ಕೈಗಾರಿಕೋದ್ಯಮಿಗಳು ಇನ್ನಿತರ ಹಣವಂತರು ಚುನಾವಣಾ ಸುಧಾರಣೆಯನ್ನು ಗಂಭೀರವಾಗಿ ಪರಿಗಣಿಸಿ, ಆರ್ಥಿಕ ಸಹಕಾರದಿಂದ ಹಿಂದೆ ಸರಿಯಬೇಕು. ಹೀಗೆ ಚುನಾವಣಾ ಸುಧಾರಣೆಯಿಂದ ಮಾತ್ರ ಭ್ರಷ್ಟ ರಹಿತ ಉತ್ತಮ ಸರ್ಕಾರ, ಪಾರದರ್ಶಕ ಆಡಳಿತ ನಿರೀಕ್ಷಿಸಲು ಸಾಧ್ಯ ಎಂದು ತಿಳಿಸಿದರು.

ಮುಕ್ತ ವೇದಿಕೆಯ ಮೊದಲ ಹೆಜ್ಜೆ....

ಕಟ್ಟಲೂ ಸಾಧ್ಯವಿಲ್ಲ. ಸಮಾಜ ಹರಿಯುವ ನೀರಿನಂತೆ. ನೀರು ಬೇಕ್ಕಿದ್ದರೆ ಡ್ಯಾಂ ಕಟ್ಟಬೇಕಾಗುತ್ತದೆ.ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೋ ಯಾತ್ರೆ'ಗೆ ಹೇಗೆ ಒಬ್ಬೊಬ್ಬರಾಗಿ ಬಂದು ಸೇರಿದರೋ ಹಾಗೆಯೇ ಮೈಸೂರು ಮುಕ್ತ ವೇದಿಕೆ ಪ್ರಯತ್ನಕ್ಕೆ ಹಂತ ಹಂತವಾಗಿ ಪ್ರೋತ್ಸಾಹ ದೊರಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವವನ್ನು 10 ವರ್ಷ ರದ್ದುಪಡಿಸಬೇಕು ಎಂಬುವರ ಪ್ರಶ್ನೆಗೆ ಉತ್ತರಿಸಿದ ಅವರು, 1975ರಲ್ಲಿ ಉಕ್ಕಿನ ಮಹಿಳೆ ಎಂದೇ ಹೆಸರು ಪಡೆದಿದ್ದ ಶ್ರೀಮತಿ ಇಂದಿರಾ ಗಾಂಧಿಯವರೇ 2 ವರ್ಷಗಳ ನಂತರ ತುರ್ತು ಪರಿಸ್ಥಿತಿಯನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ಅಂತಹದರಲ್ಲಿ ಪ್ರಜಾಪ್ರಭುತ್ವವನ್ನು ರದ್ದು ಮಾಡಿದರೆ ದೇಶದ ಸ್ಥಿತಿಯೇನು ಎಂದು ತಿಳಿಸುವ ಮೂಲಕ ಪ್ರಜಾಪ್ರಭುತ್ವದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.

ಮಕ್ಕಳಿಗೆ ಮೌಲ್ಯ ಶಿಕ್ಷಣ ನೀಡುವ ಕುರಿತು ಶ್ರೀಮತಿ ಹರಿಪ್ರಸಾದ್ ಎಂಬುವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೆಬಿಜಿಯವರು, ನಮ್ಮ ದೇಶದಲ್ಲಿ 33 ಕೋಟಿ ದೇವರುಗಳಿವೆ. 10 ಸಾವಿರಕ್ಕೂ ಹೆಚ್ಚು ದೇವಮಾನವರಿದ್ದಾರೆ. ಪ್ರತಿದಿನವೂ ಒಂದಲ್ಲಾ ಒಂದು ಧಾರ್ಮಿಕ ಪ್ರವಚನ ಕೇಳುತ್ತಿರುತ್ತೇವೆ. ವೇದ, ಉಪನಿಷತ್ತುಗಳು, ಸತ್ಯ, ಸನಾತನ ಧರ್ಮವಿದ್ದು, ಅದರಲ್ಲಿರುವ ಮೌಲ್ಯವನ್ನು ಅವರಿಗೆ ತಿಳಿಸಬೇಕಾಗಿದೆ. ಯಾವುದು ಒಳಿತು, ಯಾವುದು ಕೆಟ್ಟದ್ದು ಎಂಬುದನ್ನು ಮಕ್ಕಳಿಗೆ ಮೊದಲು ತಿಳಿಸಬೇಕು. ನೈತಿಕ ಪಾಠಗಳನ್ನು ತಿಳಿಸುವ ಮೂಲಕ ಅವರನ್ನು ಎಚ್ಚರಿಸಬೇಕು ಎಂದರು.

ಮೈಸೂರಿನಲ್ಲಿ ಮತದಾನ ಪ್ರಮಾಣ ಸಾಕಷ್ಟು ಕಡಿಮೆ ಇದೆ. ಜನರು ಮತಗಟ್ಟೆಯತ್ತ ಹೋಗುತ್ತಿಲ್ಲ. ಶ್ರೀಮಂತರು, ಜನಪ್ರಿಯ ವ್ಯಕ್ತಿಗಳು ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಮೈಸೂರಿನ ಯಾದವಗಿರಿ, ಗೋಕುಲಂ, ಜಯಲಕ್ಷ್ಮಿಪುರಂ, ಸರಸ್ವತಿಪುರಂ ಇನ್ನಿತರೆ ಹೆಚ್ಚು ಶ್ರೀಮಂತರು, ತಿಳಿದಂತಹವರು ಇರುವ ಬಡಾವಣೆಗಳಲ್ಲಿ ಮತದಾನ ಪ್ರಮಾಣ ಬಾರೀ ಕಡಿಮೆಯಾಗಿದೆ. ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳಿದ್ದು, ನಗರದಲ್ಲಿಯೇ 3 ಕ್ಷೇತ್ರಗಳಿವೆ. ಆದರೆ ಮತದಾನ ಪ್ರಮಾಣ ಕಡಿಮೆಯಿದೆ. ಆದ್ದರಿಂದ ವೇದಿಕೆ ಮೂಲಕ ಮತದಾನ ಪ್ರಮಾಣ ಹೆಚ್ಚಳ ಮಾಡುವ ಪ್ರಯತ್ನ ಇದಾಗಿದೆ ಎಂದರು.

ಶಾಲಾ–ಕಾಲೇಜುಗಳಲ್ಲಿ ಧ್ಯಾನ ಮತ್ತು ನೈತಿಕ ಶಿಕ್ಷಣ

ಸಮಿತಿ ರಚಿಸಿ ವರದಿ ಪಡೆಯಲು ಸರ್ಕಾರ ಆದೇಶ

ಬೆಂಗಳೂರು, ಮಾ.18–ಶಾಲೆ, ಪಿಯು ಕಾಲೇಜುಗಳಲ್ಲಿ ಧ್ಯಾನ ಮತ್ತು ನೈತಿಕ ಶಿಕ್ಷಣ ವಿಚಾರವಾಗಿ ಡಾ. ಗುರುರಾಜ ಕರ್ಜಗಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ವರದಿ ಪಡೆಯಲು ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ರಾಜ್ಯದ ಎಲ್ಲ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಧ್ಯಾನ ಮತ್ತು ನೈತಿಕ ಶಿಕ್ಷಣ ನೀಡುವ ಕುರಿತು ತಜ್ಞರಿಂದ ಮಾಹಿತಿ ಪಡೆದು ಶಾಲಾ ಕಾಲೇಜುಗಳಲ್ಲಿ ನೈತಿಕ ಶಿಕ್ಷಣ ಜಾರಿಗೆ ಶಿಕ್ಷಣ ಇಲಾಖೆ ಮುಂದಾಗಿದೆ. ಸರ್ಕಾರದಿಂದ ಆರು ಶಿಕ್ಷಣ ತಜ್ಞರನ್ನು ಸಮಿತಿ ಒಳಗೊಂಡಿದ್ದು, ಸರ್ಕಾರಕ್ಕೆ ವರದಿ ನೀಡಲು ಸಮಿತಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ. ಮಕ್ಕಳಲ್ಲಿ ದೃಢತೆ, ಏಕಾಗ್ರತೆ, ಆರೋಗ್ಯ ವೃದ್ಧಿ, ದೈಹಿಕ ಮತ್ತು ಮಾನಸಿಕ ಒತ್ತಡ ಕಡಿಮೆಯಾಗಲು ಸಹಕಾರಿಯಾಗುವಂತೆ ಶಾಲೆಗಳಲ್ಲಿ ಪ್ರತಿದಿನ ಧ್ಯಾನ ಮಾಡಿಸುವುದು ಅಗತ್ಯವಾಗಿರುತ್ತದೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಕೆಲ ತಿಂಗಳ ಹಿಂದೆ ಸುತ್ತೋಲೆಯಲ್ಲಿ ತಿಳಿಸಿದ್ದರು.

ಧ್ಯಾನದ ಅಭ್ಯಾಸವು ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಸ್ಪಂದನೆ, ಒಳ್ಳೆಯ ಹವ್ಯಾಸ ಬೆಳೆಸಿಕೊಂಡು ಉತ್ತಮ ಪ್ರಜೆಯಾಗಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದರು. ರಾಜ್ಯದ ಕೆಲವು ಜಿಲ್ಲೆಗಳ ಶಾಲೆಗಳಲ್ಲಿ ಈಗಾಗಲೇ ಧ್ಯಾನವನ್ನು ಮಾಡಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿದಿನ 10 ನಿಮಿಷಗಳ ಕಾಲಧ್ಯಾನವನ್ನು ಮಾಡಿಸಲು ಅವಕಾಶ ಕಲ್ಪಿಸುವಂತೆ ಪ್ರಾಥಮಿಕ ಶಾಲಾ ಶಿಕ್ಷಣ ಸಂಘದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು ಕೋರಿರುತ್ತಾರೆ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿತ್ತು.

ಅಂಗನವಾಡಿ: ಅರ್ಜಿ ಆಹ್ವಾನ

ಮೈಸೂರು,ಮಾ.18– ಅಂಗನವಾಡಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇದ್ದ 07 ಅಂಗನವಾಡಿ ಕಾರ್ಯಕರ್ತೆ ಮತ್ತು 01 ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ 16 ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಏ.17 (ಸಂಜೆ 5:30) ಕಡೆಯ ದಿನಾಂಕವಾಗಿರುತ್ತದೆ ಎಂದು ಮೈಸೂರು ಗ್ರಾಮಾಂತರ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನದ ಅಪ ವ್ಯಾಖ್ಯಾನ, ಸ್ವಾಯತ್ತ ಸಂಸ್ಥೆಗಳ ದುರ್ಬಳಕೆ ವಿರುದ್ಧ ದನಿ ಎತ್ತಬೇಕು

● ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ● ಪತ್ರಕರ್ತರಿಗೆ ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿ ಪ್ರದಾನ



ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಶನಿವಾರ ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಡದಿಂದ ಪ್ರಶಸ್ತಿ ಪುರಸ್ಕೃತರು– ಜಿ.ಆರ್.ಸತ್ಯಲಿಂಗರಾಜು (ಮಹದೇವ ಪ್ರಕಾಶ್ ಪ್ರಶಸ್ತಿ), ನಾಗರಾಜ ಶೆಣೈ (ಶಿವಮೊಗ್ಗ ಮಿಂಚು ಶ್ರೀನಿವಾಸ ಪ್ರಶಸ್ತಿ), 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಚಾಮರಾಜನಗರ ವರದಿಗಾರ ಆರ್.ಎನ್.ಸಿದ್ದಲಿಂಗಸ್ವಾಮಿ (ಹೆಚ್.ಎಸ್.ರಂಗಸ್ವಾಮಿ ಪ್ರಶಸ್ತಿ), ಡಾ.ಉಳ್ಳಿಯಡ ಎಂ.ಪೂವಯ್ಯ (ಎಂ.ನಾಗೇಂದ್ರರಾವ್ ಪ್ರಶಸ್ತಿ), ಸಿರಾಜ್ ಬಿಸರಳ್ಳಿ (ಅಭಿಮಾನಿ ಪ್ರಕಾಶನ ಪ್ರಶಸ್ತಿ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಡದಿಂದ (ನಿಂತವರು)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಕೆಯುಡಬ್ಲ್ಯೂಜೆ ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಪತ್ರಿಕಾ ಛಾಯಾಗ್ರಾಹಕ ವೈದ್ಯ, ಕೆಯುಡಬ್ಲ್ಯೂಜೆ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ಉಪಾಧ್ಯಕ್ಷ ಪುಂಡಲೀಕ ಭೀ.ಬಾಳೋಜಿ, ಹಿರಿಯ ಪತ್ರಕರ್ತರಾದ ಜಿ.ಎನ್.ಮೋಹನ್, ರವಿಕುಮಾರ್ ಟೆಲೆಕ್ಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್, ಕೆಯುಡಬ್ಲ್ಯೂಜೆ ಅಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಭವಾನಿಸಿಂಗ್ ಠಾಕೂರ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕೆಯುಡಬ್ಲ್ಯೂಜೆ ಖಜಾಂಚಿ ವಾಸುದೇವ ಹೊಳ್ಳ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.18(ಪಿಎಂ)– ಪ್ರಸ್ತುತ ಭಾರತದ ಸಂವಿಧಾನದ ಅಪವ್ಯಾಖ್ಯಾನ ಮಾಡಲಾಗುತ್ತಿದ್ದು, ಮತ್ತೊಂದೆಡೆ ಸ್ವಾಯತ್ತ ಸಂಸ್ಥೆಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಇದರ ವಿರುದ್ಧ ಮಾಧ್ಯಮ ಮತ್ತು ಪತ್ರಕರ್ತರು ದನಿ ಎತ್ತಬೇಕು ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ಹೇಳಿದರು.

ಮೈಸೂರಿನ ರಾಮಾನುಜ ರಸ್ತೆಯ ರಾಜೇಂದ್ರ ಕಲಾಮಂದಿರದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ), ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ, ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕಳೆದ 4 ವರ್ಷಗಳ ಹಿಂದೆ ಕೆಲ ಪಟ್ಟಭದ್ರ ಹಿತಾಸಕ್ತಿಗಳು ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾಯಿಸಲು. ಇಂದಿನ ಸಮಸ್ಯೆ ಸವಾಲುಗಳಿಗೆ ಸಂವಿಧಾನ ಕಾರಣ ಎಂದು ಹೇಳಿಕೆ ನೀಡಿದ್ದವು. ಇದಾದ ಬಳಿಕ ದೆಹಲಿಯ ಜಂತರ್ ಮಂತರ್‌ನಲ್ಲಿ ಹಾಡಹಗಲೇ ಸಂವಿಧಾನ ಪ್ರತಿ ಸುಟ್ಟು ಹಾಕಲಾಗಿತ್ತು. ಆದರೆ ನಮ್ಮ ನಿಮ್ಮೆಲ್ಲರ ಪ್ರಯತ್ನದಿಂದ ಸಂವಿಧಾನ ಬಗೆಗಿನ ಅಪಸ್ವರ ಹಿಂದಕ್ಕೆ ಸರಿಯುತ್ತಿದೆ ಎಂದರು.

ಮೂಲತತ್ವ ತಿದ್ದುಪಡಿಗಿಲ್ಲ ಅವಕಾಶ: ಈಗ ನೇರವಾಗಿ ಸಂವಿಧಾನ ಬದಲಾಯಿಸುತ್ತೇವೆ ಎಂದೇಳುತ್ತಿಲ್ಲ ಬದಲಿಗೆ ಸಂವಿಧಾನದ ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಸಂವಿಧಾನ ಅಪ್ರಸ್ತುತವೆಂದು ಬಿಂಬಿಸಲಾಗುತ್ತಿದೆ ಭಾರತ ಸಂವಿಧಾನದ ಅನುಚ್ಛೇದ 368ರಲ್ಲಿ ಸಂವಿಧಾನ ತಿದ್ದುಪಡಿಗೆ ಸಂಸತ್ತಿಗೆ ಅಧಿಕಾರ ಕಲ್ಪಿಸಲಾಗಿದೆ ಈ ಅಧಿಕಾರ ಬಳಸಿ ಸಂಸತ್ತು ಸಂವಿಧಾನದಲ್ಲಿ ಏನು ಬೇಕಾದರೂ ತಿದ್ದುಪಡಿ ಮಾಡಬಹುದೇ ಎನ್ನುವ ಪ್ರಶ್ನೆ ಸುಪ್ರೀಂಕೋರ್ಟ್‌ನಲ್ಲಿ ಕೇಶವಾನಂದ ಭಾರತಿ ಸ್ವಾಮಿಗಳ ಪ್ರಕರಣದಲ್ಲಿ ಉದ್ಭವವಾಯಿತು. ಬಳಿಕ 1973ರಲ್ಲಿ ಸುಪ್ರೀಂಕೋರ್ಟ್, ಭಾರತದ ಸಂವಿಧಾನಕ್ಕೆ ಮೂಲತತ್ವಗಳಿದ್ದು, ಸಂಸತ್ತಿನಲ್ಲಿ ಯಾರಿಗೆ ಎಷ್ಟೇ ಬಹುಮತ ಇದ್ದರೂ ಮೂಲತತ್ವಗಳನ್ನು ತಿದ್ದುಪಡಿ ಮಾಡುವಂತಿಲ್ಲವೆಂದು ತೀರ್ಪು ನೀಡಿತು. ಹಾಗಾಗಿ ಸಂವಿಧಾನದ ಮೂಲತತ್ವಗಳಾದ ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯ, ಕಲ್ಯಾಣ ರಾಜ್ಯ, ಅಧಿಕಾರ ವಿಕೇಂದ್ರೀಕರಣವನ್ನು ಒಕ್ಕೂಟ ವ್ಯವಸ್ಥೆ ಮುಂದುವರೆಸಲು ಸಾಧ್ಯವಾಯಿತು ಎಂದು ವಿವರಿಸಿದರು.

ಕಳೆದ 5 ದಿನಗಳಿಂದ ಸಂಸತ್ ಕಲಾಪದಲ್ಲಿ ಜನತೆಯ ಸಮಸ್ಯೆಗಳ ಪರಿಹರಿಸುವ ಬಗ್ಗೆ ಚರ್ಚೆಯೇ ಆಗುತ್ತಿಲ್ಲ. ದೇಶದ ಜನತೆಗೆ ಅನ್ನ, ಶಿಕ್ಷಣ, ಉದ್ಯೋಗ ಕಲ್ಪಿಸಿಕೊಡುವ ಬಗ್ಗೆ ಚರ್ಚಿಸದೇ ದಿನ ಬೆಳಗಾದರೆ ಜಗಳ ಆಡಿಕೊಂಡು ಕಾಲ ಕಳೆಯುತ್ತಿದ್ದಾರೆ. ಯಾರಾದರೂ ಸಂಸದರು ಈ 5 ದಿನಗಳ ವೇತನ–ಭತ್ಯೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರಾ? ಎಂದು ಪ್ರಶ್ನಿಸಿದರು.

ಸ್ವಾಯತ್ತ ಸಂಸ್ಥೆಗಳ ದುರುಪಯೋಗ: ಸ್ವಾಯತ್ತ ಸಂಸ್ಥೆಗಳನ್ನು ದುರ್ಬಲಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಕಳೆದ 7 ವರ್ಷಗಳಲ್ಲಿ ಸಿಬಿಐ, ಇಡಿ, ಎನ್‌ಐಎ, ಐಟಿ ನಡೆಸಿದ ದಾಳಿಗಳ ಪೈಕಿ ಶೇ.95ರಷ್ಟು ದಾಳಿಗಳು ವಿಪಕ್ಷ ನಾಯಕರ ಮೇಲೆಯೇ ಆಗಿದೆ. ಅಂದರೆ ಆಳುವ ಪಕ್ಷದ ನಾಯಕರೆಲ್ಲರೂ ಸತ್ಯಹರಿಶ್ಚಂದ್ರರೇ? ಈ ಪೈಕಿ ಶೇ.85ರಷ್ಟು ದಾಳಿಗಳು ಚುನಾವಣೆ ಸಂದರ್ಭದಲ್ಲಿ ಆಗಿವೆ. ಇದರ ಉದ್ದೇಶ ವೇನು? ಎಂದು ಪಶ್ನಿಸಿದರಲ್ಲದೆ, ಈ ಸಂಸ್ಥೆಗಳ ಸ್ವಾಯತ್ತತೆ ಹಾಳುಗೆಡವಿ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

> **ಇಡಬ್ಲ್ಯೂಎಸ್ ಮೀಸಲಾತಿ ; ಸಾಮಾಜಿಕ ನ್ಯಾಯದ ಅಪವ್ಯಾಖ್ಯಾನ**
>
> ಎಲ್ಲಾ ಧರ್ಮ, ಜಾತಿಗಳಲ್ಲಿ ಬಡವರು, ಪ್ರತಿಭಾನ್ವಿತರು ಇದ್ದಾರೆ. ಇವರಿಗೆ ನೆರವಾಗಬೇಕು ಹಾಗೂ ಪ್ರೋತ್ಸಾಹಿಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅದಕ್ಕೆ ಸರಿಯಾದ ಮಾರ್ಗ ಮೀಸಲಾತಿಯೇ? ಹೆಚ್ಚು ಉದ್ಯೋಗ ಸೃಷ್ಟಿ ಮಾಡಬೇಕಲ್ಲವೇ? ಹೆಚ್ಚು ಅವಕಾಶ ಒದಗಿಸಬೇಕಲ್ಲವೇ? ಆ ಕೆಲಸ ಮಾಡದೇ ಶೇ.10ರಷ್ಟು ಮೀಸಲಾತಿಯನ್ನು ಇಡಬ್ಲ್ಯೂಎಸ್ ಹೆಸರಿನಲ್ಲಿ ನೀಡುವ ಮೂಲಕ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ಅಪವ್ಯಾಖ್ಯಾನ ಮಾಡಲಾಗಿದೆ.
>
> -ಹೆಚ್.ಎನ್.ನಾಗಮೋಹನ ದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಹಕ್ಕು ಕಳೆದುಕೊಳ್ಳುತ್ತಿದ್ದೇವೆ: ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಉಡುಪು ಧರಿಸುವ ಸ್ವಾತಂತ್ರ್ಯ, ಆಹಾರ ಸ್ವಾತಂತ್ರ್ಯ, ಪ್ರಯಾಣ ಸ್ವಾತಂತ್ರ್ಯ, ಎಲ್ಲಿ ಬೇಕಾದರೂ ವಾಸಿಸುವ ಹಾಗೂ ಯಾವ ವೃತ್ತಿ ಬೇಕಾದರೂ ಮಾಡುವ ಸ್ವಾತಂತ್ರ್ಯ ಇತ್ಯಾದಿ ಹಕ್ಕುಗಳನ್ನು ಸಂವಿಧಾನ ಕಲ್ಪಿಸಿದೆ. ಆದರೆ ಇಂದು ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಸರ್ಕಾರ ಬಗ್ಗೆ ಟೀಕೆ, ವಿಮರ್ಶೆ, ಪ್ರಶ್ನೆ ಮಾಡುವಂತಿಲ್ಲ. ಒಂದು ವೇಳೆ ಮಾಡಿದರೆ ದೇಶದ್ರೋಹ ಕಾಯ್ದೆಯಡಿ ವಿಚಾರಣೆಯೇ ಇಲ್ಲದೇ ಜೈಲಿಗೆ ಹಾಕುತ್ತಾರೆ. ಸಾಲದೆಂದು ಗೋಲಿಬಾರ್, ಎನ್‌ಕೌಂಟರ್‌ನಲ್ಲಿ ಜನರನ್ನು ಕೊಲ್ಲುತ್ತಿರುವ ಸಂದರ್ಭದಲ್ಲಿ ಇದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ನೀವು–ನಾವು ಕೆಲಸ ಮಾಡುತ್ತಿದ್ದೇವೆ. ಹಿಂದೆ ಮಾಧ್ಯಮಗಳಿಂದ ದೇಶಕ್ಕೆ ಅಪಾರ ಕೊಡುಗೆ ಸಿಕ್ಕಿದೆ. ಆದರೆ ಇಂದು ಪರಿಸ್ಥಿತಿ ಬೇರೆಯೇ ಆಗಿದೆ. ಬಹುರಾಷ್ಟ್ರೀಯ ಕಂಪನಿ, ರಾಜಕೀಯ ಪಕ್ಷಗಳು, ರಾಜಕಾರಣಿಗಳು ಮಾಧ್ಯಮಕ್ಕೆ ಪ್ರವೇಶ ಮಾಡಿದ್ದಾರೆ. ಜನತೆ ಏನು ಓದಬೇಕೆಂದು ಇವರು ತೀರ್ಮಾನಿಸುತ್ತಿದ್ದಾರೆ. ಪತ್ರಕರ್ತರ ವಸ್ತುನಿಷ್ಠ ವರದಿ ಮಾಡಿದರೂ ಇವರು ಪ್ರಕಟಣೆ ಮಾಡದೇ ಕೈಬಿಡಬಹುದು. ಇಲ್ಲವೇ ತಿರುಚಲೂಬಹುದು. ಮಾಧ್ಯಮ ಏಕಸ್ವಾಮ್ಯ ಆಗುತ್ತಿದೆ ಎಂದರು.

ಪ್ರತಿಭಾನ್ವಿತ ಪತ್ರಕರ್ತರ ಪ್ರತಿಭೆಯು ಸಮಾಜ ಪರಿವರ್ತನೆಗೆ ಬಳಕೆಯಾಗದೇ ಬಂಡವಾಳಶಾಹಿಗಳ ಲಾಭ ಹೆಚ್ಚಿಸಲು ಬಳಕೆಯಾಗುತ್ತಿದ್ದು, ಹಾಗಾಗಿ ಲೈಂಗಿಕ, ಅಪರಾಧ, ರೋಮಾಂಚನಕಾರಿ ವಿಷಯಗಳಿಗೆ ಆದ್ಯತೆ ದೊರೆಯುತ್ತಿದೆ. ಪರಿಣಾಮ ಜನತೆಗೆ ಅಗತ್ಯ ಸುದ್ದಿಗಳು ಸಿಗುತ್ತಿಲ್ಲ. ಇದು ಜೊತೆಯಲ್ಲಿ ಯೆಲ್ಲೋ ಜರ್ನಲಿಜಂ, ಪೇಯ್ಡ್ ನ್ಯೂಸ್ ಎಂಬ ಅನಿಷ್ಟಗಳು ಇಂದು ಪ್ರಾರಂಭವಾಗಿವೆ. ಇದರ ಬಗ್ಗೆ ಮೌನ ವಹಿಸದೇ ದನಿ ಎತ್ತಬೇಕಿದೆ. ಈಗಾಗಲೇ ದೇಶದಲ್ಲಿ ಮಾಧ್ಯಮ ನಿಯಂತ್ರಿಸಲು ಕಾನೂನು ಅಗತ್ಯವೆಂಬ ಕೂಗು ಎದ್ದಿದ್ದು, ಈ ರೀತಿ ಕಾನೂನು ಬಂದರೆ ಸದ್ಬಳಕೆಗಿಂತ ದುರ್ಬಳಕೆ ಹೆಚ್ಚಾಗುತ್ತದೆ. ಹಾಗಾಗಿ ಮಾಧ್ಯಮಕ್ಕೆ ಸ್ವಯಂ ನೀತಿ ಸಂಹಿತೆ ಸೂಕ್ತ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪತ್ರಕರ್ತರಾದ ಡಿ.ಉಮಾಪತಿ, ರವೀಂದ್ರಭಟ್ಟ ನಾಗಮಣಿ ಎಸ್.ರಾವ್, ಬಿ.ವಿ.ಮಲ್ಲಿಕಾರ್ಜುನಯ್ಯ, ಜಿ.ವೀರಣ್ಣ, ವಸಂತ ನಾಡಿಗೇರ, ಅರುಣಕುಮಾರ್ ಹಬ್ಬು, ಕೆ.ಎನ್.ರವಿ, ಚಂದ್ರಶೇಖರ ಸಿದ್ದಪ್ಪ ಜಿಗಜಿನ್ನಿ, ಮುಂಜಾನೆ ಸತ್ಯ, ಮೊಹಮ್ಮದ್ ಬಾಷಾ ಗೂಳ್ಯಂ, ಎಂ.ಜಿ.ಪ್ರಭಾಕರ್, ಶ್ರೀಶೈಲ ಗು.ಮಠದ, ಎನ್.ಬಸವ ರಾಜ್, ಜಿ.ಆರ್.ಸತ್ಯಲಿಂಗರಾಜು, ನಾಗರಾಜ ಶೆಣೈ, ಆರ್.ಎನ್.ಸಿದ್ದಲಿಂಗಸ್ವಾಮಿ, ಡಾ.ಉಳ್ಳಿಯಡ ಎಂ.ಪೂವಯ್ಯ, ಸಿರಾಜ್ ಬಿಸರಳ್ಳಿ, ಜಯತೀರ್ಥ ಪಾಟೀಲ್, ಎಸ್.ಜಿ.ತುಂಗರೇಣುಕ, ಡಿ.ಎನ್.ಶಾಂಭವಿ, ನಾರಾಯಣಹೆಗಡೆ ಅವರಿಗೆ ವಿವಿಧ ದತ್ತಿಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಬೆಂಗಳೂರು ವಿಜಯ ಕರ್ನಾಟಕಕ್ಕೆ ಅತ್ಯುತ್ತಮ ಪುಟ ವಿನ್ಯಾಸ ಪ್ರಶಸ್ತಿ ನೀಡಲಾಯಿತು. ಅಲ್ಲದೆ, ಪತ್ರಕರ್ತರಾದ ಜಯಲಕ್ಷ್ಮೀ ಸಂಪತ್ ಕುಮಾರ್, ಹೆಚ್.ಎನ್.ಆರತಿ, ಎಸ್.ಎಂ.ಜಂಬುಕೇಶ್ವರ, ಕೆ.ದೀಪಕ್ ಅವರಿಗೆ ವಿಶೇಷ ಪ್ರಶಸ್ತಿ ನೀಡಲಾಯಿತು.

ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ದಿಕ್ಸೂಚಿ ಭಾಷಣ ಮಾಡಿದರು. ಮೇಯರ್ ಶಿವಕುಮಾರ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಪತ್ರಕರ್ತ ಜಿ.ಎನ್.ಮೋಹನ್, ಕೆಯುಡಬ್ಲ್ಯೂಜೆ ಅಧ್ಯಕ್ಷ ಶಿವಾನಂದ ತಗಡೂರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮತ್ತಿತರರು ಹಾಜರಿದ್ದರು.

ಅರೆನಗ್ನ ನೃತ್ಯಕ್ಕೆ ಅನುಮತಿಸಿದರೆ ಮೈಸೂರಲ್ಲಿ ಪಾರ್ಥೆನಿಯಂ ಬೆಳೆಸಿದಂತೆ!

ಮೈಸೂರು,ಮಾ.18(ಪಿಎಂ)– 'ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಅರೆನಗ್ನ ನೃತ್ಯಕ್ಕೆ ಅನುಮತಿಸಿದರೆ ಪಾರ್ಥೆನಿಯಂ ಬೆಳೆಸಿದಂತೆ!' ಇದು ಮೂರು ದಶಕದ ಹಿಂದೆ ಮೈಸೂರು ಮಹಾನಗರ ಪಾಲಿಕೆಯು ಕ್ಯಾಬ್ರೆ ಡ್ಯಾನ್ಸ್ ಪ್ರಾರಂಭಿಸುವುದಕ್ಕೆ ನಿರಾಕರಿಸಿ ನೀಡಿದ್ದ ಒಂದು ಸಾಲಿನ ಆದೇಶ. ಇಂತಹ ಮಹತ್ವದ ಆದೇಶವನ್ನು ಅಂದು ಹೈಕೋರ್ಟ್ ಸಹ ಎತ್ತಿ ಹಿಡಿದಿತ್ತು.

ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್, ಮೂರು ದಶಕಗಳ ಹಿಂದಿನ ಸದರಿ ಸಂಗತಿಯನ್ನು ನೆನೆಸಿಕೊಂಡರು. 30 ವರ್ಷಗಳ ಹಿಂದೆ ಮೈಸೂರಿನಲ್ಲಿ ಒಬ್ಬ ಹೋಟೆಲ್ ಮಾಲೀಕರು ಇಲ್ಲಿನ ಪಾಲಿಕೆ ಆಯುಕ್ತರಿಗೆ ಅರ್ಜಿ ಸಲ್ಲಿಸಿ, ನಮ್ಮ ಹೋಟೆಲ್‌ನಲ್ಲಿ ಕ್ಯಾಬ್ರೆ ಡ್ಯಾನ್ಸ್ ಪ್ರಾರಂಭಿಸಬೇಕು. ಅದಕ್ಕಾಗಿ ಪರವಾನಗಿ ನೀಡಿ ಎಂದು ಕೋರಿದ್ದರು.

ಈ ಸಂಬಂಧ ಪಾಲಿಕೆ ಆಯುಕ್ತರು ಒಂದು ಸಾಲಿನ ಆದೇಶ ಬರೆದು, ಅರ್ಜಿ ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಹೋಟೆಲ್ ಮಾಲೀಕರು ಹೈಕೋರ್ಟ್ ಮೆಟ್ಟಿಲೇರಿದ್ದರು. 'ಕರ್ನಾಟಕದ ಸಾಂಸ್ಕೃತಿಕ ತೋಟವಾದ ಮೈಸೂರು ನಗರದಲ್ಲಿ ಅರೆನಗ್ನ ನೃತ್ಯಕ್ಕೆ ಅನುಮತಿ ನೀಡಿದರೆ, ಪಾರ್ಥೆನಿಯಂ ಬೆಳೆಸಿದಂತೆ. ಆದ ಕಾರಣ ಈ ಅರ್ಜಿ ವಜಾ ಮಾಡಲಾಗಿದೆ' ಎಂಬ ಪಾಲಿಕೆ ಆಯುಕ್ತರ ಆದೇಶ ಪ್ರತಿಯನ್ನು ಹೈಕೋರ್ಟ್ ನ್ಯಾಯಮೂರ್ತಿಗಳು ಓದುತ್ತಾರೆ.

ಬಳಿಕ ಹೈಕೋರ್ಟ್ ನ್ಯಾಯಮೂರ್ತಿಗಳು, ಈ ಪ್ರಕರಣ ಸಂಬಂಧ 25 ಪುಟಗಳು ತೀರ್ಪು ಬರೆದು ಅರ್ಜಿ ವಜಾಗೊಳಿಸಿರುವುದು ಸಂವಿಧಾನಾತ್ಮಕವಾಗಿ ಸೂಕ್ತವಾಗಿದೆ ಎಂದು ಪಾಲಿಕೆ ಆಯುಕ್ತರ ಆದೇಶ ಎತ್ತಿಹಿಡಿಯುತ್ತಾರೆ. ಅಂತಹ ಸಾಂಸ್ಕೃತಿಕ ತೋಟಕ್ಕೆ ನಾನಿಂದು ಬಂದಿದ್ದೇನೆ ಎಂದು ಹರ್ಷ ವ್ಯಕ್ತಪಡಿಸಿದರು.

'ನಾನು ನನ್ನ ಕವಿತೆ' ಕವನ ಸಂಕಲನ ಬಿಡುಗಡೆ



ಮೈಸೂರು, ಮಾ.18(ಎಸ್‌ಪಿಎನ್)– ಮೈಸೂರು ಜಗನ್ಮೋಹನ ಅರಮನೆಯಲ್ಲಿ ಪದ್ಮಶ್ರೀ ಜೈನ ಮಹಿಳಾ ಸಮಾಜ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಕವಿಯತ್ರಿ ಲತಾ ಸುದರ್ಶನ್ ರಚಿತ 'ನಾನು ನನ್ನ ಕವಿತೆ' ಕವನ ಸಂಕಲನವನ್ನು ಮೇಯರ್ ಶಿವಕುಮಾರ್ ಹಾಗೂ ಹಿರಿಯ ಕವಯತ್ರಿ ಡಾ.ಲತಾ ರಾಜಶೇಖರ್ ಶನಿವಾರ ಬಿಡುಗಡೆಗೊಳಿಸಿದರು.

ಮೇಯರ್ ಶಿವಕುಮಾರ್ ಮಾತನಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಶೇ.50ರಷ್ಟು ಜಾರಿಗೊಂಡಿದ್ದು, ಮಹಿಳಾ ಜನಪ್ರತಿನಿಧಿಗಳು ಪಕ್ಷಭೇದ ಮರೆತು ಒಂದಾದರೆ, ಅಧಿಕಾರದಿಂದ ಪುರುಷರನ್ನು ದೂರವಿಡುವ ಸನ್ನಿವೇಶ ಬರಬಹುದು. ನಗರ ಪಾಲಿಕೆಯಲ್ಲಿ 36 ಮಂದಿ ಮಹಿಳಾ ಸದಸ್ಯರಿದ್ದಾರೆ. ಇವರೆಲ್ಲಾ ಒಂದಾದರೆ, ಎಲ್ಲವೂ ಸಾಧ್ಯವಿದೆ. ಅಲ್ಲದೆ, ಬೇರೆ ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಮುಖ್ಯವಾಹಿನಿಗೆ ಬರುತ್ತಿರುವುದು ಉತ್ತಮ ಸಂಗತಿ ಎಂದರು.

ನಂತರ ಹಿರಿಯ ಕವಯತ್ರಿ ಡಾ.ಲತಾರಾಜಶೇಖರ್ ಮಾತನಾಡಿ, ಈ ವೇದಿಕೆಯಲ್ಲಿ ಕವಯತ್ರಿ ಲತಾ ಸುದರ್ಶನ ರಚಿತ 'ನಾನು ನನ್ನ ಕವಿತೆ' ಬಿಡುಗಡೆಗೊಂಡಿದೆ. ಈ ಪುಸ್ತಕದಲ್ಲಿ ಲೇಖಕರ ಅನುಭವ, ಪ್ರೀತಿ–ಪ್ರೇಮ, ಪ್ರಕೃತಿ ವರ್ಣನೆ ಸೇರಿದಂತೆ ಜೀವನದ ಎಲ್ಲಾ ಸಿಹಿ–ಕಹಿಗಳನ್ನು ಆಧರಿಸಿದ ಕವಿತೆಗಳು ಮೂಡಿಬಂದಿವೆ. ಇದನ್ನು ಪ್ರತಿಯೊಬ್ಬ ಪುರುಷರು, ಮಹಿಳಾ ಓದುಗರು ಖರೀದಿಸಿ, ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು. ವೇದಿಕೆಯಲ್ಲಿ ಬೆಂಗಳೂರಿನ ವಕೀಲೆ ನಾಗಶ್ರೀ ಮುಪ್ಪಾನೆ, ನೆಕ್ಟರ್ ಫ್ರೆಶ್ ಸಂಸ್ಥೆಯ ಛಾಯ ನಂಜಪ್ಪ ರಾಜಪ್ಪ, ಪದ್ಮ ಧನ್ಯಕುಮಾರ್, ವಾಗೀಶ್ವರಿ ಪ್ರಕಾಶ್, ಡಾ.ಸ್ನೇಹಶ್ರೀ, ಕುಮುದಾ ನಾಗಭೂಷಣ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ನಿಸರ್ಗ, ವಿಸ್ಮಯ ಪ್ರಾರ್ಥಿಸಿದರು.

ಮಹಿಳೆ ಅಬಲೆಯೂ ಅಲ್ಲ, ಬಲೆಯೂ ಅಲ್ಲ ಸಬಲೆ

ಹಿರಿಯ ಸಾಹಿತಿ ಸಿಪಿಕೆ ಅಭಿಮತ



ಮೈಸೂರು, ಮಾ.18(ಎಸ್‌ಪಿಎನ್)– ಪ್ರಸ್ತುತ ಮಹಿಳೆ ಹಿಂದಿನ ಹಾಗೆ ಅಬಲೆಯಲ್ಲ, ಬಲೆಯೂ ಅಲ್ಲ. ಬದಲಾಗಿ ಸಬಲೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅಭಿಪ್ರಾಯಪಟ್ಟರು. ಮೈಸೂರು ಸರಸ್ವತಿಪುರಂ ಮಹಿಳಾ ಕಾಲೇಜು ವಿದ್ಯಾರ್ಥಿನಿಯರ ವಸತಿ ನಿಲಯ ಆವರಣದಲ್ಲಿ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ನಡೆದ ವಿಶ್ವ ಮಹಿಳಾ ದಿನಾಚರಣೆ ಮತ್ತು ವಿವಿಧ ಕ್ಷೇತ್ರದ ಸಾಧಕಿಯರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಹಿಳೆಯರಲ್ಲಿ ಕಾಂತಿ–ಕ್ರಾಂತಿ ಎರಡೂ ಲಕ್ಷಣಗಳಿವೆ. 12ನೇ ಶತಮಾನದ ವಚನಕಾರ ಸಿದ್ದರಾಮ ಅವರು ತಮ್ಮ ವಚನದಲ್ಲಿ ಮಹಿಳೆ ಕುರಿತು ಹೀಗೆ ಉಲ್ಲೇಖಿಸಿದ್ದಾರೆ. 'ಹೆಣ್ಣು, ಹೆಣ್ಣಲ್ಲ. ರಾಕ್ಷಸಿಯಲ್ಲ. ಹೆಣ್ಣು ಸಾಕ್ಷಾತ್ ಕಪಿಲ ಸಿದ್ದ ಮಲ್ಲಿಕಾರ್ಜುನ ಎಂದು ಬರೆದಿದ್ದಾರೆ. ಅಂದರೆ ಹೆಣ್ಣು ದೇವತೆಗೆ ಸಮಾನ ಎಂದು ನಮ್ಮ ಪೂರ್ವಜರು ಭಾವಿಸಿದ್ದರು ಎಂದು ತಿಳಿಸಿದರು.

ವಿಶೇಷಚೇತನ ಶಾಲೆಯ ಶಿಕ್ಷಕಿಯರಿಗೆ ಸನ್ಮಾನ: ಪಂಪ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಜೆಎಸ್‌ಎಸ್ ವಿಶೇಷಚೇತನ ಮಕ್ಕಳ ಶಾಲೆ ಮತ್ತು ಸಹನ ಸಮನ್ವಯ ಶಿಕ್ಷಣ ಸಂಸ್ಥೆಯ ಶಿಕ್ಷಕರಾದ ಜಿ.ಸರ್ವಮಂಗಳ, ಚನ್ನವ್ವ ಐ ಬೂದಿಹಾಳ್, ಕೆ.ಎಸ್.ತೇಜೋವತಿ, ಮಂಜುಳಾ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ತೋಂಟ ದಾರ್ಯ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಎಂ.ಜಿ.ಆರ್.ಅರಸ್, ಡಾ.ರತ್ನ ಹಾಲಪ್ಪಗೌಡ, ಮಮತಾ ಸುರೇಶ್ ಉಪಸ್ಥಿತರಿದ್ದರು.

ನಿಂತಲ್ಲೇ ನಿಂತ 'ಚಲಿಸುವ ಸರ್ಕಾರ' ವಾಹನ

ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಆರೋಪ

ಮೈಸೂರು,ಮಾ.18(ಪಿಎಂ)– ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಯೋಜನೆಗಳನ್ನು ಪರಿಚಯಿಸುವ ಜೊತೆಗೆ ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸುವ ಉದ್ದೇಶದೊಂದಿಗೆ ಶಾಸಕ ಎಸ್.ಎ.ರಾಮದಾಸ್ ಪರಿಕಲ್ಪನೆಯಲ್ಲಿ ಆರಂಭವಾದ 'ಚಲಿಸುವ ಸರ್ಕಾರ' ಶೀರ್ಷಿಕೆಯ ವಾಹನ ನಿಂತಲ್ಲೇ ನಿಂತಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಆರೋಪಿಸಿದ್ದಾರೆ.



ಇತ್ತೀಚೆಗೆ ಮೈಸೂರಿನ ಲಲಿತ ಮಹಲ್ ಮೈದಾನದಲ್ಲಿ ಮುಖ್ಯಮಂತ್ರಿಯವರಿಂದ ಚಾಲನೆ ಪಡೆದ 'ಚಲಿಸುವ ಸರ್ಕಾರ' ಶೀರ್ಷಿಕೆಯಡಿ ವಾಹನ ನಿಂತ ಜಾಗದಲ್ಲೇ ನಿಂತಿದ್ದು, ಇದೊಂದು ಸುಳ್ಳು ಭರವಸೆಯ ವಾಹನವಾಗಿದೆ. ಚುನಾವಣೆ ಬಂತೆಂದರೆ ಮಾದರಿ ಕ್ಷೇತ್ರದ ಜಪ ಮಾಡುವ ಕೆಆರ್ ಕ್ಷೇತ್ರದ ಶಾಸಕ ರಾಮದಾಸ್ ಅವರ ಸುಳ್ಳು ಭರವಸೆಯ ಇನ್ನೊಂದು ಉದಾಹರಣೆ 'ಚಲಿಸುವ ಸರ್ಕಾರ' ವಾಹನವಾಗಿದೆ ಎಂದು ಟೀಕಿಸಿದ್ದಾರೆ.

ಚಲಿಸುವ ಸರ್ಕಾರ ವಾಹನದ ಮೂಲಕ ಮನೆ ಮನೆಗೆ ಭೇಟಿ ನೀಡಿ ಕ್ಷೇತ್ರದ ಜನತೆಗೆ ಸರ್ಕಾರಿ ಸೌಲಭ್ಯ ಕಲ್ಪಿಸುತ್ತೇವೆ ಎಂದು ಶಾಸಕರು ಹೇಳಿದ್ದರು. ಆದರೆ ವಾಹನ ನಿಂತಲ್ಲೇ ನಿಂತಿದೆ. ಎಲ್ಲಾ ಮಂತ್ರಿಗಳನ್ನು ಕರೆಸಿ ಕ್ಷೇತ್ರದ ಅಭಿವೃದ್ಧಿ ಮಾಡುತ್ತೇನೆಂದು 5 ವರ್ಷ ಮನೆಯಲ್ಲಿ ಮಲಗಿದ್ದರು. ಬಿಜೆಪಿ ಸರ್ಕಾರವಿದ್ದೂ ಒಂದು ದಿನವೂ ಸದನದಲ್ಲಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಮಾತನಾಡದ ಶಾಸಕರು, ತಮ್ಮ ನಾಟಕೀಯ ನಡೆಯಿಂದ ಜನರ ಆಕ್ರೋಶಕ್ಕೆ ಗುರಿಯಾಗಿದ್ದಾರೆ ಎಂದು ದೂರಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.18– ಮಾ. 19ರ ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 5:30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ.



ರಾಮಾನುಜ ರಸ್ತೆ 01 ರಿಂದ 09ನೇ ಕ್ರಾಸ್ ವರೆಗೆ, ಹೊಸಬಂಡಿಕೇರಿ, ಜೆ.ಎಸ್.ಎಸ್. ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ ಚಾಮುಂಡಿಬೆಟ್ಟ ಮತ್ತು ಪಾದ, ಗುಂಡುರಾವ್ ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್ ಗೇಟ್, ತಾವರೆಕೆರೆ, ಜಾಕಿ ಕ್ವಾಟ್ರಸ್, ರೇಸ್ ಕೋರ್ಸ್ ಹಿಂಭಾಗ, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತ–ಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು, ತಾಲೂಕು ಕಚೇರಿ, ಡಿ. ದೇವರಾಜ ಅರಸು ರಸ್ತೆ, ಬಿ.ಎನ್. ರಸ್ತೆ, ಚಾಮುಂಡಿಬೆಟ್ಟ, ಸಿದ್ದಾರ್ಥನಗರ, ಆಲನಹಳ್ಳಿ ಸುತ್ತ–ಮುತ್ತಲಿನ ಪ್ರದೇಶಗಳು, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತ–ಮುತ್ತಲಿನ ಪ್ರದೇಶಗಳು, ಶ್ರೀ ಹರ್ಷ ರಸ್ತೆ ಸಯ್ಯಾಜಿರಾವ್ ರಸ್ತೆ ಇರ್ವಿನ್ ರಸ್ತೆ ಸುತ್ತ–ಮುತ್ತಲಿನ ಪ್ರದೇಶಗಳು, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರನ್ನು ಸ್ವಾವಲಂಬಿಗಳಾಗಿಸಲು ನಾನಾ ಯೋಜನೆಗಳ ಅನುಷ್ಠಾನ

ವಿವಿಧ ಯೋಜನೆಯ ಫಲಾನುಭವಿಗಳ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿವರಣೆ

● ಕಾಫಿ ಬೆಳೆಗಾರರ ಹಿಂದಿನ ವಿದ್ಯುತ್ ಬಾಕಿ ಬಗ್ಗೆ ಚಿಂತೆ ಬೇಡ ● 100 ಕೋಟಿ ರೂ. ವಿಶೇಷ ಬಜೆಟ್ ● ಅಂತಾರಾಷ್ಟ್ರೀಯ ಮ್ಯಾಪ್‌ನಲ್ಲಿ ಕೊಡಗು ● 132 ಕೋಟಿ ಬೆಳೆ ಪರಿಹಾರ

ಮಡಿಕೇರಿ,ಮಾ.18– ರೈತರು ಆರ್ಥಿಕ ಸ್ವಾವಲಂಬಿಗಳಾಗಿ ರೂಪುಗೊಂಡಾಗ ಮಾತ್ರವೇ ನಾಡು ಸುಭಿಕ್ಷಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ, ರೈತ ಸಮೂಹಕ್ಕೆ ಶಕ್ತಿ ತುಂಬುವ ಕಾರ್ಯಕ್ಕೆ ರಾಜ್ಯ ಸರ್ಕಾರ ಹೆಚ್ಚಿನ ಒತ್ತು ನೀಡಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ನಗರದ ಗಾಂಧಿ ಮೈದಾನದಲ್ಲಿ ಕೊಡಗು ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಂದ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟಿಸಿ, ನಡೆಯಬೇಕಿರುವ ಕಾಮಗಾರಿಗಳಿಗೆ ಚಾಲನೆ ನೀಡಿ, ಬೃಹತ್ ಆಕರ್ಷಕ ಕಪ್‌ಗೆ ಕಾಫಿಯನ್ನು ಸುರಿಯುವ ಮೂಲಕ 'ಫಲಾನುಭವಿಗಳ ಸಮ್ಮೇಳನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರದ ಮೋದಿ ನೇತೃತ್ವದ ಸರ್ಕಾರ ಸಾಧ್ಯವಿಲ್ಲದ್ದನ್ನು ಸಹ ತಮ್ಮ ಇಚ್ಛಾಶಕ್ತಿಯಿಂದ ಮಾಡಿ ತೋರಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಗ್ಗೂಡಿ ಕಿಸಾನ್ ಸಮ್ಮಾನ್ ಯೋಜನೆಯಡಿ 16 ಸಾವಿರ ಕೋಟಿ ರೂ.ಗಳ ನೆರವನ್ನು ಕೃಷಿಕ ಸಮೂಹಕ್ಕೆ ಒದಗಿಸಿದೆ. ಇದರಿಂದ ರಾಜ್ಯದ 53.43 ಲಕ್ಷ ರೈತರು, ಜಿಲ್ಲೆಯಲ್ಲಿ 50,263 ಮಂದಿ ಕೃಷಿಕರಿಗೆ ತಲಾ 10 ಸಾವಿರ ಸಹಾಯವಾಗಿದೆ ಎಂದರು.

'ರೈತ ವಿದ್ಯಾನಿಧಿ'ಯನ್ನು ರೂಪಿಸಿ, ಇದಕ್ಕಾಗಿ 12 ಕೋಟಿ ರೂ.ಗಳನ್ನು ಮೀಸಲಿಡುವ ಮೂಲಕ ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಒದಗಿಸುವ ಕಾರ್ಯವನ್ನು ತಾನು ಮುಖ್ಯಮಂತ್ರಿಯಾಗಿ ಬಂದ ತಕ್ಷಣವೇ ಮಾಡಿದ್ದೇನೆ. ಕೊಡಗಿನಲ್ಲಿ ಅತೀ ಸಣ್ಣ ರೈತರ ಸಂಖ್ಯೆ ಅಧಿಕವಾಗಿದ್ದು, ಇವರ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.



ರೈತ ಸಮುದಾಯಕ್ಕೆ 3 ಲಕ್ಷದವರೆಗಿನ ಸಾಲದ ಮೊತ್ತವನ್ನು ನಮ್ಮ ಸರ್ಕಾರ 5 ಲಕ್ಷಕ್ಕೆ ಹೆಚ್ಚಿಸಿದೆ. 'ಜೀವನ ಜ್ಯೋತಿ' ಕಾರ್ಯಕ್ರಮದ ಮೂಲಕ ಯಾವುದೇ ರೈತ ಮೃತಪಟ್ಟರೆ ಆತನ ಕುಟುಂಬಕ್ಕೆ 2 ಲಕ್ಷ ನೆರವು ದೊರಕುವಂತೆ ಮಾಡಿರುವುದಲ್ಲದೆ, ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಿರುವುದಾಗಿ ಮಾಹಿತಿ ನೀಡಿದರು.

ಹಿಂದಿನ ಬಾಕಿ ಪರಿಗಣಿಸದಿರಿ: ಜಿಲ್ಲೆಯ ಕಾಫಿ ಬೆಳೆಗಾರರ ಬೇಡಿಕೆ ಮತ್ತು ಅವರ ಸಂಕಷ್ಟಗಳನ್ನು ಮನಗಂಡು ಅವರು ಕೃಷಿಗೆ ಬಳಸುವ 10 ಹೆಚ್.ಪಿ.ವರೆಗಿನ ಮೋಟಾರ್‌ಗೆ ಉಚಿತ ವಿದ್ಯುತ್ ನೀಡಲು ಕ್ರಮ ಕೈಗೊಳ್ಳಲಾಗಿದೆ. ಬೆಳೆಗಾರರ ಹಿಂದಿನ ವಿದ್ಯುತ್ ಬಿಲ್ ಬಾಕಿಯನ್ನು ಪರಿಗಣಿಸದೆ ತಕ್ಷಣವೇ ಯೋಜನೆಯ ಸೌಲಭ್ಯವನ್ನು ಒದಗಿಸುವಂತೆ ಅವರು ಅಧಿಕಾರಿಗಳಿಗೆ ಇದೇ ಸಂದರ್ಭ ಸೂಚನೆ ನೀಡಿದರು.

100 ಕೋಟಿ ವಿಶೇಷ ಬಜೆಟ್: ಕೊಡಗಿಗೆ ಈ ಬಾರಿಯ ಬಜೆಟ್‌ನಲ್ಲಿ ಇತರೆ ಅನುದಾನಗಳೊಂದಿಗೆ 100 ಕೋಟಿಯ ವಿಶೇಷ ಅನುದಾನವನ್ನು ಘೋಷಿಸಿರುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು, ಕೊಡಗಿನ ಕೊಡವ ಸಮುದಾಯದ ಅಭಿವೃದ್ಧಿಗೆ ಕಳೆದ ಬಾರಿ ಘೋಷಿಸಿರುವ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಈ ಬಾರಿಯೂ ಇದನ್ನು ಮುಂದುವರಿಸುವುದಾಗಿ ಸ್ಪಷ್ಟಪಡಿಸಿದರು.

ಅಂತಾರಾಷ್ಟ್ರೀಯ ಮ್ಯಾಪ್‌ನಲ್ಲಿ ಕೊಡಗು: ಪ್ರಕೃತಿಯ ನೆಲೆಬೀಡಾಗಿರುವ ಸುಂದರ ಕೊಡಗಿನಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ, ಮೈಸೂರು ಸರ್ಕ್ಯೂಟ್‌ನಡಿ ಕೊಡಗನ್ನು ಸೇರಿಸುವುದರೊಂದಿಗೆ 'ಕೊಡಗು' ಜಿಲ್ಲೆಯನ್ನು ಅಂತಾರಾಷ್ಟ್ರೀಯ ಪ್ರವಾಸೋದ್ಯಮ ನಕಾಶೆಯಲ್ಲಿ ಸೇರಿಸುವ ಕಾರ್ಯ ಮಾಡಲಾಗಿದೆ. ಕೊಡಗಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸರಕಾರ ಬದ್ಧವಾಗಿದ್ದು, ಕೊಡಗನ್ನು ಸ್ಕಾಟ್‌ಲ್ಯಾಂಡ್ ಮಾದರಿಯಾಗಿ ಮಾರ್ಪಡಿಸಲು ಎಲ್ಲಾ ರೀತಿಯ ನೆರವು ಒದಗಿಸಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

132 ಕೋಟಿ ಬೆಳೆ ಪರಿಹಾರ: ಅತಿವೃಷ್ಟಿಯಿಂದ ಕೊಡಗಿನಲ್ಲಿ ಬೆಳೆ ನಷ್ಟವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ 132 ಕೋಟಿ ರೂ.ಗಳನ್ನು ಪರಿಹಾರವಾಗಿ ಒದಗಿಸಿದೆ. ಈ ಹಿಂದಿನ ಸರ್ಕಾರಗಳು ಅತಿವೃಷ್ಟಿಯಿಂದ ಕೃಷಿಗೆ ಹಾನಿಯಾದಾಗ ಕೃಷಿಕರಿಗೆ ಭಿಕ್ಷೆಯ ರೂಪದಲ್ಲಿ ಪರಿಹಾರ ಒದಗಿಸುತ್ತಿದ್ದವು. ಆದರೆ, ಕೇಂದ್ರದ ಮೋದಿ ನೇತೃತ್ವದ ಸರ್ಕಾರ ಮತ್ತು ರಾಜ್ಯದ ಬಿಜೆಪಿ ಸರ್ಕಾರ ಜಿಲ್ಲೆಯ ಕೃಷಿಕರಿಗೆ ವಿವಿಧ ಹಂತಗಳಲ್ಲಿ ಪರಿಹಾರವನ್ನು ಒದಗಿಸಿ ಅವರ ನೆರವಿಗೆ ಧಾವಿಸಿದೆಯೆಂದು ಹೇಳಿದರು. ಮುಖ್ಯಮಂತ್ರಿ ಬೊಮ್ಮಾಯಿ ವಿವಿಧ ಇಲಾಖೆಯ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯಗಳನ್ನು ಇದೇ ಸಂದರ್ಭ ಹಸ್ತಾಂತರಿಸಿದರು.

ವೇದಿಕೆಯಲ್ಲಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಶಾಸಕರುಗಳಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಎಂಎಲ್‌ಸಿಗಳಾದ ಸುಜಾ ಕುಶಾಲಪ್ಪ ಪ್ರತಾಪಸಿಂಹ ನಾಯಕ್, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಎಸ್.ಪಿ.ರಾಮರಾಜನ್, ಸಿಇಓ ಆಕಾಶ್, ಅಪರ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ, ಸಿ.ಸಿ.ಎಫ್ ನಿರಂಜನ್ ಮೂರ್ತಿ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

> **'ಗ್ಯಾರಂಟಿ ಕಾರ್ಡ್' ಅಲ್ಲ ಬೋಗಸ್ ಕಾರ್ಡ್**
>
> ಚುನಾವಣೆ ಹಿನ್ನೆಲೆಯಲ್ಲಿ ವಿರೋಧ ಪಕ್ಷ ನೀಡುತ್ತಿರುವ 'ಗ್ಯಾರಂಟಿ ಕಾರ್ಡ್' ಎನ್ನುವುದು ಬೋಗಸ್ ಕಾರ್ಡ್ ಇಲ್ಲವೆ ವಿಸಿಟಿಂಗ್ ಕಾರ್ಡ್, ಉಪಯೋಗವಿಲ್ಲದಿದ್ದರೆ ಒಗೆಯುವ ಕಾರ್ಡ್. ಕೆಲವರನ್ನು ಕೆಲವು ಬಾರಿ ಮೋಸ ಮಾಡಬಹುದು. ಆದರೆ, ಎಲ್ಲರನ್ನು ಎಲ್ಲಾ ಬಾರಿಯೂ ಮೋಸಗೊಳಿಸಲಾಗದು. ಜನರಿಗೆ ಸುಳ್ಳು ಹೇಳಿ ಯಾಮಾರಿಸುವ ಕಾರ್ಯದ ಭಾಗ ಈ ಗ್ಯಾರಂಟಿ ಕಾರ್ಡ್. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳುವ ಅವಕಾಶವನ್ನು ಒದಗಿಸುವುದು ಅವಶ್ಯ. ಬಿಜೆಪಿ ಸರ್ಕಾರ ಜನರ ಉತ್ತಮ ಬದುಕಿಗೆ ಕಾರ್ಯಕ್ರಮಗಳನ್ನು ರೂಪಿಸಿ, ಅದನ್ನು ಅನುಷ್ಠಾನಗೊಳಿಸುವ ಮಹತ್ವದ ಕಾರ್ಯ ನಡೆಸಿದೆ.
>
> - ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು

> **ಅಭ್ಯರ್ಥಿಗಳ ಸುಳಿವು**
>
> ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯವಾಗಿದೆ. ಈಗ ಮತ್ತಷ್ಟು ಕಾರ್ಯಗಳನ್ನು ಇಂದು ಉದ್ಘಾಟಿಸಲಾಗಿದೆ. ಉಳಿದ ಹತ್ತು ಹಲವು ಕಾರ್ಯಕ್ರಮಗಳ ಶಿಲಾನ್ಯಾಸ ಮಾಡಲಾಗಿದ್ದು, ಇಲ್ಲಿನ ಜನತೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಶಾಸಕರುಗಳಾದ ಅಪ್ಪಚ್ಚು ರಂಜನ್ ಮತ್ತು ಕೆ.ಜಿ. ಬೋಪಯ್ಯ ಅವರನ್ನು ಆಶೀರ್ವದಿಸಿದಲ್ಲಿ ಈ ಎಲ್ಲಾ ಅಭಿವೃದ್ಧಿ ಕೆಲಸಗಳು ಮುಂದುವರೆಯಲಿವೆ ಎನ್ನುವ ಮೂಲಕ, ಮುಂದಿನ ಚುನಾವಣೆಯಲ್ಲಿ ಅಪ್ಪಚ್ಚು ರಂಜನ್ ಮತ್ತು ಕೆ.ಜಿ. ಬೋಪಯ್ಯ ಅವರೇ ಕಣಕ್ಕಿಳಿಯುವ ಸುಳಿವನ್ನು ಸಿ.ಎಂ. ಬೊಮ್ಮಾಯಿ ನೀಡಿದರು.

ಮೈಸೂರು ಮಿತ್ರ ಭಾನುವಾರ 19 ಮಾರ್ಚ್ 2023







'ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ 2023'ಕ್ಕೆ ಚಾಲನೆ

ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಗೆ ತಕ್ಷಣ ಆದೇಶ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

- ಕೊಡವ ಸಾಂಪ್ರದಾಯಿಕ ಉಡುಪು ಧರಿಸಿದ ಸಿಎಂ
- ಕೊಡವ ಭಾಷೆಯಲ್ಲಿ ಮಾತು ಆರಂಭಿಸಿದ ಬೊಮ್ಮಾಯಿ
- ಹಾಕಿ ಹಬ್ಬಕ್ಕೆ ಒಂದು ಕೋಟಿ ಕೊಟ್ಟಿದ್ದೇನೆ

ಮಡಿಕೇರಿ,ಮಾ.18– ಕೊಡವ ಅಭಿವೃದ್ಧಿ ನಿಗಮ ಸ್ಥಾಪಿಸಲು ಈ ಕೂಡಲೇ ಆದೇಶ ಹೊರಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ. ನಾಪೋಕ್ಲು ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 23ನೇ ವರ್ಷದ ಕೊಡವ ಕುಟುಂಬಗಳ ನಡುವಿನ ಕೌಟುಂಬಿಕ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ 2023ಕ್ಕೆ' ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೊಡವ ಸಾಂಪ್ರದಾಯಿಕ ಉಡುಪು ತೊಟ್ಟು ವಿಧ್ಯುಕ್ತ ಚಾಲನೆ ನೀಡಿದರು.

ಕೊಡವ ಭಾಷೆಯಲ್ಲಿ ಮಾತು ಪ್ರಾರಂಭಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಶಿಸಿ ಹೋಗುತ್ತಿರುವ ಕುಟುಂಬಗಳ ನಡುವಿನ ಸಂಬಂಧ ಮತ್ತೆ ಬೆಸೆಯಲು ಕೌಟುಂಬಿಕ ಹಾಕಿ ಸಹಕಾರಿಯಾಗಿದೆ ಎಂದರು.

ಕುಟುಂಬಗಳಲ್ಲಿ ಸದಸ್ಯರ ಸಂಬಂಧ ಉತ್ತಮವಾಗಿರಬೇಕು. ಅದು ಭಾರತದ ಸಮಾಜಕ್ಕೆ ಅತ್ಯಂತ ಅವಶ್ಯ. ಇದು ಭಾರತೀಯ ನಾಗರಿಕತೆ, ನಿಜವಾದ ಸಂಸ್ಕೃತಿಗೆ ಸೂಕ್ತ ಉದಾಹರಣೆ. ಕೊಡವ ಕೌಟುಂಬಿಕ ಹಾಕಿ ಇದಕ್ಕೆ ನಿದರ್ಶನವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಾಕಿ ಕ್ರೀಡೆಯ ಮೂಲಕ ಕೊಡವರು ತಮ್ಮಲ್ಲಿನ ಉತ್ತಮ ಕೌಟುಂಬಿಕ ಸಂಬಂಧಗಳಿಗೆ ಮಾದರಿಯಾಗಿದ್ದಾರೆ. ಕೆ.ಜಿ.ಬೋಪಯ್ಯ ಅವರು ಹಾಕಿ ಕ್ರೀಡೆಗೆ ಸೂಕ್ತ ಅನುದಾನ ತರುವಲ್ಲಿ ಶ್ರಮಿಸಿದ್ದಾರೆ ಎಂದು ಶ್ಲಾಘಿಸಿದರು. ತಮ್ಮ ಬಳಿ ಬೋಪಯ್ಯ ಅವರ ನಿಯೋಗ ಬಂದಾಗ ಹಾಕಿ ಹಬ್ಬಕ್ಕೆ 1 ಕೋಟಿ ಅನುದಾನ ಕೇಳಿದ್ದರು. ತಕ್ಷಣವೇ ಅವರ ಬೇಡಿಕೆಯಂತೆ 1 ಕೋಟಿ ಕೊಟ್ಟಿದ್ದೇನೆ. ನಾಪೋಕ್ಲು ಜನರಲ್ ತಿಮ್ಮಯ್ಯ ಕ್ರೀಡಾಂಗಣಕ್ಕೆ ನನ್ನ ತಂದೆ ಬೊಮ್ಮಾಯಿ ಸಚಿವರಾಗಿದ್ದಾಗ



ಅನುದಾನ ನೀಡಿದ್ದರು ಎಂದು ಸ್ಮರಿಸಿದರು. ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಗೆ ನಾನು ಈ ಕೂಡಲೇ ಆದೇಶ ಹೊರಡಿಸುತ್ತೇನೆ ಎಂದು ಇದೇ ಸಂದರ್ಭ ಸಿಎಂ ಬೊಮ್ಮಾಯಿ ಘೋಷಿಸಿದರು.

ಗೌರವ ಸಮರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಪ್ಪಚೆಟ್ಟೋಳಂಡ ಕುಟುಂಬದ ವತಿಯಿಂದ ಗೌರವಿಸಲಾಯಿತು. ಮುಖ್ಯಮಂತ್ರಿಗಳಿಗೆ ಬೆಳ್ಳಿಯ ಹಾಕಿ ಸ್ಟಿಕ್ ಮತ್ತು ಒಡಿಕತ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಕೆ.ಜಿ. ಬೋಪಯ್ಯ, ಎಂ.ಪಿ. ಅಪ್ಪಚ್ಚು ರಂಜನ್, ಎಂ.ಎಲ್.ಸಿ. ಸುಜಾ ಕುಶಾಲಪ್ಪ, ಅಪ್ಪಚೆಟ್ಟೋಳಂಡ ಹಾಕಿ ಕಪ್‌ನ ಸಂಚಾಲಕ ಮನು ಮುತ್ತಪ್ಪ, ಪದ್ಮಶ್ರೀ ಮಾಜಿ ಒಲಂಪಿಯನ್ ಎಂ.ಪಿ.ಗಣೇಶ್, ಪದ್ಮಶ್ರೀ ರಾಣಿ ಮಾಚಯ್ಯ, ಹಾಕಿ ಇಂಡಿಯಾದ ಆಯ್ಕೆ ಸಮಿತಿ ಪ್ರಮುಖರಾದ ಮಾಜಿ ಅಂತಾರಾಷ್ಟ್ರೀಯ ಹಾಕಿಪಟು ಅಂಜಪರವಂಡ ಬಿ.ಸುಬ್ಬಯ್ಯ, ಪಾಂಡಂಡ ಬೋಪಣ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇತಿಹಾಸ ಬರೆದ ಸಿಎಂ : ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಮಾ. 18ರಿಂದ ಏಪ್ರಿಲ್ 9 ರವರೆಗೆ ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ ಆಯೋಜಿತವಾಗಿದೆ ಒಟ್ಟು 336 ಕೊಡವ ಕುಟುಂಬ ತಂಡಗಳು ಕೌಟುಂಬಿಕ ಹಾಕಿ ಹಬ್ಬದಲ್ಲಿ ಸೆಣಸಾಡಲಿವೆ. ಕೊಡವ ಕೌಟುಂಬಿಕ ಹಾಕಿ ಹಬ್ಬದ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ರಾಜ್ಯದ ಮುಖ್ಯಮಂತ್ರಿಗಳು ಹಾಕಿ ಕ್ರೀಡಾಕೂಟವನ್ನು ಉದ್ಘಾಟಿಸಿದ್ದಾರೆ. ಆ ಮೂಲಕ ಮುಖ್ಯಮಂತ್ರಿಗಳು ಹೊಸ ಇತಿಹಾಸ ಸೃಷ್ಟಿಸಿದ್ದು, ಕ್ರೀಡಾಭಿಮಾನಿಗಳಲ್ಲಿ ಸಂತಸ ತಂದಿದೆ.

ಕೊಡವ ಕುಟುಂಬಗಳ ಆಕರ್ಷಕ ಮೆರವಣಿಗೆ

ನಾಪೋಕ್ಲು: ಅಪ್ಪಚೆಟ್ಟೋಳಂಡ ಕುಟುಂಬ ಆಯೋಜಿಸಿರುವ 23ನೇ ಕೊಡವ ಕೌಟುಂಬಿಕ ಹಾಕಿ ಪಂದ್ಯಾಟಕ್ಕೆ ಗಾಳಿಯಲ್ಲಿ ಗುಂಡು ಹಾರಿಸಿ ಸಾಂಪ್ರಾದಾಯಿಕ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಕೊಡವರು ಸಾಂಪ್ರದಾಯಿಕ ಧಿರಿಸಿನಲ್ಲಿ ಭಾಗಿಯಾಗಿದ್ದರು. ಪಟ್ಟಣದಲ್ಲಿ ಸಾಗಿದ ಮೆರವಣಿಗೆ ಕ್ರೀಡಾಂಗಣದವರೆಗೂ ಕಳೆನೀಡಿತು. ಸಭಾ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಮಾತನಾಡಿ, ಕೊಡವ ಕೌಟುಂಬಿಕ ಹಾಕಿ ಉದ್ಘಾಟನೆಗೆ ಮುಖ್ಯಮಂತ್ರಿ ಬಂದಿರುವುದು ಸ್ವಾಗತಾರ್ಹ. ಕೊಡಗಿನ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಮುಖ್ಯಮಂತ್ರಿ ಮುಂದಾಗಬೇಕು ಎಂದರು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ, ಕೌಟುಂಬಿಕ ಹಾಕಿ ಹಬ್ಬದ ಜನಕ ತಂದೆ ಪಾಂಡಂಡ ಕುಟ್ಟಪ್ಪ ಸ್ಮರಣಾರ್ಥ ಬೆಳ್ಳಿಯ ರೋಲಿಂಗ್ ಟ್ರೋಫಿ ನೀಡುವುದಾಗಿ ಘೋಷಿಸಿದರು. ಬಳಿಕ ಬೆಳ್ಳಿಯ ರೋಲಿಂಗ್ ಟ್ರೋಫಿಯನ್ನು ಅಪ್ಪಚೆಟ್ಟೋಳಂಡ ಹಾಕಿ ಪಂದ್ಯಾವಳಿ ಸಂಚಾಲಕ ಮನು ಮುತ್ತಪ್ಪ ಅವರಿಗೆ ಹಸ್ತಾಂತರಿಸಿದರು.

ಸಭಾ ಕಾರ್ಯಕ್ರಮದಲ್ಲಿ ಪದ್ಮಶ್ರೀ ಐಮುಡಿಯಂಡ ರಾಣಿ ಮಾಚಯ್ಯ,



ಎ.ಎಸ್.ಪೊನ್ನಣ್ಣ, ಬೆಂಗಳೂರು ಕೊಡವ ಸಮಾಜದ ಮಾಜಿ ಅಧ್ಯಕ್ಷ ಮುಕ್ಕಾಟೀರ ನಾಣಯ್ಯ, ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ, ಅಕಾಡೆಮಿಯ ಪ್ರಮುಖರಾದ ಮಾಳೇಟಿರ ಶ್ರೀನಿವಾಸ್, ಮಾದಂಡ ಪೂವಯ್ಯ, ಕುಕ್ಕೇರ ಜಯ ಚಿಣ್ಣಪ್ಪ, ಬಡಕಡ ದೀನಾ ಪೂವಯ್ಯ, ಚೆಯ್ಯಂಡ ಸತ್ಯ, ವಸಂತ್ ಮುತ್ತಪ್ಪ ಅಪ್ಪಚೆಟ್ಟೋಳಂಡ ಕುಟುಂಬದ ಪಟ್ಟೇದಾರ ಈರಪ್ಪ ಸೇರಿದಂತೆ ಹಲವು ಭಾಗಿಯಾಗಿದ್ದರು.

ಪ್ರದರ್ಶನ ಪಂದ್ಯಗಳು: ಕೊಡವ ಹಾಕಿ ಅಕಾಡೆಮಿ ಮತ್ತು ಅಪ್ಪಚೆಟ್ಟೋಳಂಡ ಹಾಕಿ ಉತ್ಸವದ ಧ್ವಜಾರೋಹಣ ನೆರವೇರಿದ ಬಳಿಕ 37ನೇ ಕೂರ್ಗ್ ಫೀಲ್ಡ್ ರೆಜಿಮೆಂಟ್ ತಂಡ ಮತ್ತು ಕೊಡವ ಅಕಾಡೆಮಿ ಇಲೆವೆನ್ ತಂಡಗಳ ನಡುವೆ ಪ್ರದರ್ಶನ ಪಂದ್ಯ ನಡೆಯಿತು.

ಬೆಳ್ಳಿಯ ಸ್ಟಿಕ್‌ನಲ್ಲಿ ಚೆಂಡನ್ನು ತಳ್ಳುವುದರ ಮೂಲಕ ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಪ್ರದರ್ಶನ ಪಂದ್ಯಕ್ಕೆ ಚಾಲನೆ ನೀಡಿದರು. ಇಂಡಿಯಾ ಜೂನಿಯರ್ ಇಲೆವೆನ್ ಮತ್ತು ಕರ್ನಾಟಕ ಇಲೆವೆನ್ ತಂಡಗಳ ನಡುವೆ ನಡೆದ ಮತ್ತೊಂದು ಪ್ರದರ್ಶನ ಪಂದ್ಯ ಹಾಕಿ ಪ್ರಿಯರನ್ನು ರಂಜಿಸಿತು.

ಸಾಂಸ್ಕೃತಿಕ ಕಾರ್ಯಕ್ರಮ: ಹಾಕಿ ಉತ್ಸವದ ಉದ್ಘಾಟನೆಗೂ ಮುನ್ನ ಮಂಡ್ಯದ ಡೊಳ್ಳುಕುಣಿತ, ನಾಗರಹೊಳೆಯ ಹಾಡಿ ನೃತ್ಯ,ಮಂಡ್ಯದ ಕಂಸಾಳೆ ನೃತ್ಯ, ಪೇರೂರಿನ ತಂಡದ ಬೊಳಕಾಟ್ ನೃತ್ಯ ಪ್ರದರ್ಶನ ಜರುಗಿತು.



ಶೀಘ್ರ ಕೊಡಗಿನ ಏಲಕ್ಕಿ ಹಾರ ಮಾರುಕಟ್ಟೆಗೆ

ಮಡಿಕೇರಿ, ಮಾ.18– ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ ವತಿಯಿಂದ ಕೊಡಗಿನ ಏಲಕ್ಕಿ ಬೆಳೆಗಾರರಿಂದಲೇ ಖರೀದಿಸಿದ ಅಪ್ಪಟ ಏಲಕ್ಕಿಯಿಂದ ಘಮಘಮಿಸುವ ಆಕರ್ಷಕ ಏಲಕ್ಕಿ ಹಾರ ತಯಾರಿಸಿ ಶೀಘ್ರ ಮಾರುಕಟ್ಟೆಗೆ ಬಿಡಲಾಗುವುದು ಎಂದು ಸಂಘದ ಅಧ್ಯಕ್ಷ ಸೂದನ ಎಸ್.ಈರಪ್ಪ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೊಡಗಿನ ಏಲಕ್ಕಿ ವಿಶ್ವ ಪ್ರಸಿದ್ಧವಾಗಿದ್ದು, ಸಭೆ–ಸಮಾರಂಭ ಮತ್ತಿತರ ಕಾರ್ಯಕ್ರಮಗಳಲ್ಲಿ ಏಲಕ್ಕಿ ಹಾರವನ್ನು ಬಳಸುವುದರಿಂದ ಬೆಳೆಗಾರರಿಗೂ ಸಹಕಾರಿಯಾಗಲಿದೆ. ಏಲಕ್ಕಿ ಹಾರವನ್ನು ಹೂವಿನ ಹಾರದಂತೆ ಎಸೆಯುವ ಅಗತ್ಯವಿಲ್ಲ, ಇದು ಸಂಗ್ರಹ ಯೋಗ್ಯವಾಗಿದೆ. ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೂ ಏಲಕ್ಕಿ ಹಾರವನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಕೊಡಗಿನ ಬೆಳೆಗಾರರರು ಬೆಳೆದ ಗುಣಮಟ್ಟದ ಏಲಕ್ಕಿಯಿಂದ ಉತ್ತಮ ಮತ್ತು ಆಕರ್ಷಕ ಏಲಕ್ಕಿ ಹಾರವನ್ನು ತಯಾರಿಸಲಾಗುವುದು. ಸ್ಥಳೀಯ ಹಾರ ತಯಾರಕರನ್ನು ಗುರುತಿಸಿ ಅಗತ್ಯವಿದ್ದರೆ ಸಂಘದಿಂದಲೇ ತರಬೇತಿ ನೀಡಲಾಗುವುದು. ವಿವಿಧ ಗಾತ್ರದ ಹಾರ ತಯಾರಿಸಿ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಏಲಕ್ಕಿ ಬೆಳೆಗಾರರಿಗೆ ಪ್ರೋತ್ಸಾಹ ಮತ್ತು ಫಸಲಿಗೆ ಉತ್ತಮ ದರ ಸಿಗಬೇಕು, ವ್ಯಾಪಾರದಲ್ಲಿ ಗ್ರಾಹಕರಿಗೆ ವಂಚನೆಯಾಗಬಾರದು ಎನ್ನುವ ಉದ್ದೇಶದಿಂದ ಈ ರೀತಿಯ ವಿನೂತನ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಸೂದನ ಈರಪ್ಪ ಸ್ಪಷ್ಟಪಡಿಸಿದ್ದಾರೆ.

ಮಾದಪ್ಪ ನಮ್ಮ ಆರಾಧ್ಯ ದೈವ, ಮನಸ್ಸಿಗೆ ನೆಮ್ಮದಿ

ಮಾದಪ್ಪನ ಬೃಹತ್ ಪ್ರತಿಮೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವ ಸೋಮಣ್ಣ ಸಂತಸ





ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ನಿರ್ಮಾಣಗೊಂಡಿರುವ 108 ಅಡಿ ಎತ್ತರದ ಮಾದಪ್ಪನ ಬೃಹತ್ ಪ್ರತಿಮೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆಗೊಳಿಸಿದರು.

ಚಾಮರಾಜನಗರ, ಮಾ.18– 2016ರಲ್ಲಿ ಪ್ರಾರಂಭವಾದ ಮಾದಪ್ಪನ ಬೃಹತ್ ಪ್ರತಿಮೆ ನಿರ್ಮಾಣದ ಕೆಲಸವನ್ನು ಪೂರ್ಣಗೊಳಿಸಿ ಇಂದು ಮುಖ್ಯಮಂತ್ರಿಗಳು ಲೋಕಾರ್ಪಣೆಗೊಳಿಸಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ವಿ. ಸೋಮಣ್ಣ ತಿಳಿಸಿದ್ದಾರೆ.

ಮಹದೇಶ್ವರಸ್ವಾಮಿ ಬೆಟ್ಟದ ದೀಪದಗಿರಿ ಒಡ್ಡುವಿನಲ್ಲಿ ನಡೆದ ಮಹದೇಶ್ವರ ಸ್ವಾಮಿಯ ಬೃಹತ್ ಪ್ರತಿಮೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿ, ನನ್ನ ಜೀವನದಲ್ಲಿ ಇಂದು ಅವಿಸ್ಮರಣೀಯ ದಿನ. ಮಲೆ ಮಹದೇಶ್ವರ ನಮ್ಮ ಆರಾಧ್ಯ ದೈವ. ಮನಸ್ಸಿಗೆ ನೆಮ್ಮದಿ ಕೊಡುವ ಕಾರ್ಯಕ್ರಮ. ಇಂದು ಸಿಎಂ ಉದ್ಘಾಟನೆ ಮಾಡಿದ್ದಾರೆ ಎಂದರು.

ಸರ್ಕಾರ, ಪ್ರಾಧಿಕಾರ ಒಟ್ಟಿಗೆ ಸೇರಿ ಕೆಲಸ ಮಾಡಿದೆ. ಬರುವ ಭಕ್ತರ ಸಂಖ್ಯೆ ಮುಂದಿನ ದಿನಗಳಲ್ಲಿ ಇನ್ನೂ ನೂರು ಪಟ್ಟು ಹೆಚ್ಚಾಗಲಿ. 20 ತಿಂಗಳಿಂದ ಮುಖ್ಯಮಂತ್ರಿಗಳು ಯಾವುದೇ ವಿಶ್ರಾಂತಿ ಪಡೆಯದೆ ರಾಜ್ಯ ಸುತ್ತುತ್ತಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯ ಜನರ ಕನಸು ನನಸಾಗಿದೆ: ನಂತರ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಮಾದಪ್ಪನ ಬೃಹತ್ ಪ್ರತಿಮೆಯ ನೋಡುವ ಜಿಲ್ಲೆಯ ಜನರ ಕನಸು ಇಂದು ನನಸಾಗಿದೆ ಬೆಟ್ಟದ ಸಾಲಿನಲ್ಲಿ ಯಾವುದೇ ಮೂಲೆಯಿಂದಲೂ ಮಹದೇಶ್ವರರ ದರ್ಶನ ಪಡೆಯುವ ಅವಕಾಶ ಮಾದಪ್ಪನ ಭಕ್ತರಿಗೆ ಲಭ್ಯವಾಗಿದೆ ಎಂದರು.

> "ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಸಂಬಂಧ ಜಿಲ್ಲಾಧಿಕಾರಿ ಪ್ರಸ್ತಾವನೆ ಸಿದ್ಧಪಡಿಸುತ್ತಿದ್ದಾರೆ. ಈ ಬಗ್ಗೆ ಶೀಘ್ರವೇ ಕ್ರಮವಹಿಸಲಾಗುವುದು. ಅಲ್ಲದೇ ಅರಿಶಿಣ ಬೆಲೆ ಕುಸಿತವಾಗಿರುವ ಬಗ್ಗೆ ಗಮನಕ್ಕೆ ಬಂದಿದ್ದು, ಈ ಬಗ್ಗೆ ಕೇಂದ್ರಕ್ಕೆ ವರದಿ ನೀಡಲಾಗುವುದು.
> –ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಬೆಟ್ಟದ ಆನೆತಲೆದಿಂಬ ಬಳಿ ಬಂದ ಕೂಡಲೇ ಮಹದೇಶ್ವರ ಸ್ವಾಮಿ ದರ್ಶನವಾಗುತ್ತದೆ. ಮಹದೇಶ್ವರ ಜನಮಾನಸದಲ್ಲಿ ಅಚ್ಚಳಿಯದ ಸದಾ ಶಾಶ್ವತವಾಗಿರುವ ಮಹಾನ್ ತಪಸ್ವಿ. ಮಾದಪ್ಪನ ಭಕ್ತರು ನೂರಾರು ಕಿ.ಮೀನಿಂದ ಬರಿಗಾಲಿನಲ್ಲಿ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಬರುತ್ತಾರೆ. ಮಾದಪ್ಪನ ಪವಾಡಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಇಲ್ಲ ಎಂದರು.

ಕತ್ತಲ ರಾಜ್ಯವನ್ನು ಬೆಳಕು ಮಾಡಿದ ಕೀರ್ತಿ ಮಾದಪ್ಪನಿಗೆ ಸಲ್ಲುತ್ತದೆ. ಬೆಟ್ಟ–ಗುಡ್ಡಗಳು, ಕಾಡು–ಮೇಡಗಳಲ್ಲಿ ಸಂಚಾರ ಮಾಡಿದರು. ಇದಕ್ಕೆ ಸಾಂಕೇತಿಕವಾಗಿ ಬೆಟ್ಟದ ಮೇಲೆ ಇನ್ನೊಂದು ಬೆಟ್ಟ ನಿರ್ಮಾಣವಾಗಿ ಅದರ ಮೇಲೆ ಹುಲಿಯನ್ನೇರಿರುವ ಮಾದಪ್ಪ ಇದ್ದಾರೆ. ಇದರ ಉದ್ಘಾಟನೆಯಾಗಿದೆ ಎಂದರು.

ಬಳಿಕ ಶಾಸಕ ಆರ್. ನರೇಂದ್ರ ಮಾತನಾಡಿ, 2016ರಲ್ಲಿ ಮಾಜಿ ಸಚಿವ ದಿ. ಎಚ್.ಎಸ್. ಮಹದೇವಪ್ರಸಾದ್ ಅವರು ಶಂಕು ಸ್ಥಾಪನೆ ಮಾಡಿದ್ದರು. ಇಂದು ಪ್ರತಿಮೆ ಉದ್ಘಾಟನೆ ಆಗುತ್ತಿರುವುದು ಸಂತಸ ತಂದಿದೆ ಎಂದು ತಿಳಿಸಿದರು.

ಬಿಎಸ್‌ವೈ ಗೈರು: ಮಹದೇಶ್ವರ ಸ್ವಾಮಿ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಗೈರಾಗಿದ್ದು, ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ಅವರು ಬೇರೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಹೀಗಾಗಿ ಇಲ್ಲಿಗೆ ಬಂದಿಲ್ಲ ಎಂದು ತಿಳಿಸಿದರು.

ಸಾವಿರಾರು ಭಕ್ತರ ಸಮ್ಮುಖದಲ್ಲಿ ದಿವ್ಯ ರಥೋತ್ಸವ



ಗುಂಡ್ಲುಪೇಟೆ, ಮಾ.18– ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹಿಮವದ್ ವೇಣುಗೋಪಾಲಸ್ವಾಮಿಯ ದಿವ್ಯ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಶ್ರೀ ರುಕ್ಮಿಣಿ ಸತ್ಯಭಾಮ ಸಹಿತನಾಗಿ ಕೊಳಲು ನುಡಿಸುತ್ತಿರುವ ಭಂಗಿಯಲ್ಲಿ ನಿಂತಿರುವ ವೇಣುಗೋಪಾಲನಿಗೆ ವಿವಿಧ ಬಗೆಯ ಹೂವುಗಳಿಂದ ವಿಶೇಷ ಅಲಂಕಾರವನ್ನು ಮಾಡಲಾಗಿತ್ತು. ಬೆಳಗಿನಿಂದಲೇ ಹಲವಾರು ವಿಶೇಷ ಪೂಜೆಗಳನ್ನು ನೆರವೇರಿಸಿದ ನಂತರ ಮಧ್ಯಾಹ್ನ 12.10ಕ್ಕೆ ಉತ್ಸವ ಮೂರ್ತಿಯನ್ನು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಮಾಡಿಸಿ ರಥದಲ್ಲಿ ಕುಳ್ಳಿರಿಸಲಾಯಿತು.

ದೇವಾಲಯದ ಪ್ರಧಾನ ಅರ್ಚಕ ಗೋಪಾಲಕೃಷ್ಣಭಟ್ (ಗೋಪಿ) ಅವರ ನೇತೃತ್ವದಲ್ಲಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ರಥದ ಚಕ್ರಕ್ಕೆ ತೆಂಗಿನಕಾಯಿ ಒಡೆಯುವುದರೊಂದಿಗೆ ಹಾಗೂ ಮುಜರಾಯಿ ಅಧಿಕಾರಿ ತಹಸೀಲ್ದಾರ್ ಮಲ್ಲಿಕಾರ್ಜುನ ತೇರಿಗೆ ಪೂಜೆ ಸಲ್ಲಿಸುವ ಮೂಲಕ ದಿವ್ಯ ರಥೋತ್ಸವಕ್ಕೆ ಚಾಲನೆ ನೀಡಿದರು.

ಬೆಟ್ಟದ ತಪ್ಪಲಿನಲ್ಲಿನ ಗ್ರಾಮಸ್ಥರು ಅರಣ್ಯದಲ್ಲಿ ಸಿಗುವ ಅಂಬಿನಿಂದ ತಯಾರಿಸಿದ ಹಗ್ಗವನ್ನು ಕಟ್ಟಿದ ರಥವನ್ನು ಎಳೆಯಲಾರಂಭಿಸಿದರು. ತಾಲೂಕಿನಲ್ಲಿ ಅಲ್ಲದೆ ಬೇರೆ ಬೇರೆ ಜಿಲ್ಲೆಗಳಿಂದಲೂ ಆಗಮಿಸಿದ್ದ ಸಾವಿರಾರು ಭಕ್ತರು ಗೋವಿಂದಾ ಗೋವಿಂದಾ ಎಂಬ ಘೋಷಗಳನ್ನು ಕೂಗುತ್ತಾ ರಥಕ್ಕೆ ಹಣ್ಣು ಧವನಗಳನ್ನು ಎಸೆದು ಪುನೀತರಾದರು. ದೇವಾಲಯವನ್ನು ಒಂದು ಸುತ್ತು ಹಾಕಿದ ರಥ ಸ್ವಸ್ಥಾನದಲ್ಲಿ ನಿಂತಿತು.

ಬಂಡೀಪುರ ರಾಷ್ಟ್ರೀಯ ಉದ್ಯಾನದ ಹುಲಿ ಯೋಜನೆಯ ಗೋಪಾಲಸ್ವಾಮಿ ಬೆಟ್ಟ ವಲಯದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿರುವ ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು ಸಾರಿಗೆ ಸಂಸ್ಥೆಯು ಬೆಟ್ಟಕ್ಕೆ ಹೋಗಿ ಬರಲು ಭಕ್ತರಿಗೆ ಸಾಕಷ್ಟು ಬಸ್ಸುಗಳನ್ನು ವ್ಯವಸ್ಥೆ ಮಾಡಿತ್ತು. ಅಲ್ಲಲ್ಲಿ ಭಕ್ತರು ಹಾಗೂ ಪ್ರವಾಸಿಗರಿಗೆ ದಾನಿಗಳಿಂದ ಪ್ರಸಾದ ಹಾಗೂ ಪಟ್ಟಣದ ಪೊಲೀಸರು ಮಜ್ಜಿಗೆ ವಿತರಣೆ ಮಾಡಿದರು. ಪೊಲೀಸ್, ಅರಣ್ಯ, ಕಂದಾಯ, ಆರೋಗ್ಯ ಇಲಾಖೆಯ ಅಧಿಕಾರಿಗಳು ಜಾತ್ರೆಗೆ ಸೂಕ್ತ ವ್ಯವಸ್ಥೆಗಳನ್ನು ಮಾಡಿದ್ದರು.

ಅರಣ್ಯ ಇಲಾಖೆಯ ಅಧಿಕಾರಿಗಳು, ಪೊಲೀಸ್ ಹಾಗೂ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಹಾಜರಿದ್ದು ರಥೋತ್ಸವ ಸುಗಮವಾಗಿ ನಡೆಯುವಂತೆ ಎಚ್ಚರಿಕೆ ವಹಿಸಿದ್ದರು. ಕೆಎಸ್ಆರ್‌ಟಿಸಿ ವತಿಯಿಂದ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿತ್ತು. ಈ ವೇಳೆ ಬಂಡೀಪುರ ಸಿ.ಎಫ್ ರಮೇಶ್ ಕುಮಾರ್, ದೇವಾಲಯ ಅರ್ಚಕ ಲಕ್ಷ್ಮೀಪತಿ ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ಧ್ರುವನಾರಾಯಣ ಒಬ್ಬ ಆದರ್ಶ ರಾಜಕಾರಣಿ

ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಶ್ರದ್ಧಾಂಜಲಿ



ಚಾಮರಾಜನಗರ, ಮಾ.18– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಒಬ್ಬ ಆದರ್ಶ ರಾಜಕಾರಣಿಯಾಗಿದ್ದರು ಎಂದು ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಬಣ್ಣಿಸಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಆಯೋಜಿಸಿದ್ದ ಧ್ರುವನಾರಾಯಣ್ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಧ್ರುವನಾರಾಯಣ್ ಅವರು ಎಂದೂ ಮರೆಯಲಿಕ್ಕೆ ಸಾಧ್ಯವಾಗದ ವ್ಯಕ್ತಿ. ಅವರು ಸಣ್ಣ ವಯಸ್ಸಿನಲ್ಲಿ ಇಂತಹ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಒಬ್ಬ, ಸರಳ, ಸಜ್ಜನಿಕೆ, ಒಬ್ಬ ಪ್ರಾಮಾಣಿಕ, ಒಬ್ಬ ಅಜಾತ ಶತ್ರು, ಮಾನವೀಯ ಗುಣಗಳನ್ನು ಹೊಂದಿರುವಂತ ವ್ಯಕ್ತಿ. ನಂಬಿಕೆ, ವಿಶ್ವಾಸ, ಎಲ್ಲವನ್ನೂ ಕ್ರೋಢೀಕರಿಸಿದ ವ್ಯಕ್ತಿತ್ವ ಅವರಲ್ಲಿತ್ತು ಎಂದರು.

ನಂತರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಧ್ರುವನಾರಾಯಣ್ ಅವರು ಅಭಿವೃದ್ಧಿ ಹರಿಕಾರರಾಗಿದ್ದು, ಈ ಚುನಾವಣೆಯಲ್ಲಿ ಅವರು ಗೆದ್ದಿದ್ದಾರೆ. ಉಪ ಮುಖ್ಯಮಂತ್ರಿಯಾಗುವ ಅವಕಾಶ ಅವರಿಗಿತ್ತು ಎಂದರು.

ಬಳಿಕ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಧ್ರುವನಾರಾಯಣ್ ಅವರ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದ್ದು ನಾವು ಅನಾಥರಾಗಿದ್ದೇವೆ ಎಂದರು.

ಸಭೆಯಲ್ಲಿ ಶಾಸಕ ಆರ್.ನರೇಂದ್ರ ಜಿಪಂ ಮಾಜಿ ಸದಸ್ಯ ಕೆ.ಪಿ. ಸದಾಶಿವಮೂರ್ತಿ, ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್. ಬಾಲರಾಜ್, ಜಿ.ಎನ್. ನಂಜುಂಡಸ್ವಾಮಿ, ಕಳಲೆ ಕೇಶವಮೂರ್ತಿ, ಜಿಪಂ ಮಾಜಿ ಉಪಾಧ್ಯಕ್ಷ ಎಸ್. ಬಸವರಾಜು, ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ್, ಶ್ರೀಕಂಠು, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಮುನ್ನ, ಯುವ ಮುಖಂಡ ಗಣೇಶ್‌ಪ್ರಸಾದ್, ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು, ಕೆಪಿಸಿಸಿ ಮಹಿಳಾ ಘಟಕ ಅಧ್ಯಕ್ಷೆ ಪುಷ್ಪ ಅಮರ್‌ನಾಥ, ಜಿಲ್ಲಾಧ್ಯಕ್ಷರಾದ ಲತಾಜತ್ತಿ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಸಂಸದ ಎಂ.ಶಿವಣ್ಣ, ಅಂತಾರಾಷ್ಟ್ರೀಯ ಬೌದ್ಧಭಿಕ್ಕು ಸಂಘದ ಪ್ರಧಾನ ಕಾರ್ಯದರ್ಶಿ ಬಂತೆ ಬೋಧಿದತ್ತ ತೇರಾ, ಬವಸರಾಜು ಬಂತೇಜಿ, ರಾಜ್ಯ ಎಸ್‌ಟಿ ಘಟಕ ಪ್ರಧಾನ ಕಾರ್ಯದರ್ಶಿ ಪು. ಶ್ರೀನಿವಾಸನಾಯಕ, ಕೆಪಿಸಿಸಿ ಕಾರ್ಯದರ್ಶಿ ಶ್ರೀಕಂಠ, ಪತ್ರಕರ್ತ ದೀಪಕ್, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಮಾಜಿ ಸದಸ್ಯರಾದ ಎಸ್.ಸೋಮನಾಯಕ, ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆರೆಹಳ್ಳಿ ನವೀನ್, ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್. ಮಹದೇವು, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ವಕೀಲರಾದ ಅರುಣ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್‌ಅಸ್ಗರ್, ತೋಟೇಶ್ ಇತರರು ಹಾಜರಿದ್ದರು.

ನಾನಾ ಕಾರಣಗಳಿಂದ ರಾಜಕಾರಣದಿಂದ ದೂರ ಉಳಿದಿದ್ದೆ, ಈಗ ಅಭಿಮಾನಿಗಳ ನಿರ್ಧಾರಕ್ಕೆ ಬದ್ಧ

ಅಭಿಮಾನಿಗಳ ಬಳಗದ ಸಭೆಯಲ್ಲಿ ದಿ.ಮಾಜಿ ಶಾಸಕ ಎಸ್.ಪುಟ್ಟಸ್ವಾಮಿ ಪುತ್ರ ಹೇಳಿಕೆ



ಚಾಮರಾಜನಗರ, ಮಾ.18– ನಗರದ ಶಿವಕುಮಾರಸ್ವಾಮಿ ಭವನದಲ್ಲಿ ದಿ.ಮಾಜಿ ಶಾಸಕ ಎಸ್.ಪುಟ್ಟಸ್ವಾಮಿ ಅಭಿಮಾನಿಗಳ ಬಳಗದ ವತಿಯಿಂದ ಸಭೆ ನಡೆಯಿತು.

ಸಭೆ ಉದ್ಘಾಟಿಸಿದ ಮಾಜಿ ಶಾಸಕ ಎಸ್. ಪುಟ್ಟಸ್ವಾಮಿ ಅವರ ಪುತ್ರ ಡಾ. ಬಿ.ಪಿ.ನಟರಾಜಮೂರ್ತಿ ಮಾತನಾಡಿ, ನಾನಾ ಕಾರಣದಿಂದ ರಾಜಕೀಯದಿಂದ ದೂರ ಉಳಿದಿದ್ದೆ. ಇದರಿಂದ ನಮ್ಮ ತಂದೆಯ ಅಭಿಮಾನಿಗಳಿಗೆ ತೊಂದರೆಯಾಗಿದೆ. ಅದಕ್ಕಾಗಿ ಈ ಮೂಲಕ ಕ್ಷಮೆ ಯಾಚಿಸುತ್ತೇನೆ. ನಮ್ಮ ಕುಟುಂಬದ ಅಭಿಮಾನಿಗಳಿಗೆ, ಕಾರ್ಯಕರ್ತರಿಗೆ ಕೆಲಸಗಳನ್ನು ಮಾಡಿಸಿಕೊಡಲು ಆಗಲಿಲ್ಲ ಎಂದು ಮನನೊಂದು ದೂರ ಉಳಿದಿದ್ದೇ. ಮುಂದಿನ ದಿನಗಳಲ್ಲಿ ಅಭಿಮಾನಿಗಳು ತೆಗೆದು ಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧನಾಗಿರುತ್ತೇನೆ ಎಂದರು.

ಸಭೆಯಲ್ಲಿ ಮಾತನಾಡಿದ ಅಭಿಮಾನಿಗಳು, ಮುಖಂಡರು ಪುಟ್ಟಸ್ವಾಮಿ ಎಂದರೆ ವ್ಯಕ್ತಿಯಲ್ಲ. ಅದೊಂದು ಶಕ್ತಿಯಾಗಿತ್ತು, ತಾಲೂಕಿನಲ್ಲಿ ಕಾಂಗ್ರೆಸ್ ಗಟ್ಟಿಯಾಗಲು ಪುಟ್ಟಸ್ವಾಮಿಯವರ ಶ್ರಮ ಅಪಾರ, ಕಾಂಗ್ರೆಸ್ ಎಂದರೇ ಪುಟ್ಟಸ್ವಾಮಿ. ಪುಟ್ಟಸ್ವಾಮಿ ಎಂದರೆ ಕಾಂಗ್ರೆಸ್ ಎಂಬಂತಿತ್ತು ಎಂದರು.

ಯುಗಾದಿ ನಂತರ ರಾಜಕೀಯ ಇತಿಹಾಸ, ಹಿನ್ನೆಲೆ ಹೊಂದಿರುವ ಪುಟ್ಟಸ್ವಾಮಿ ಅವರ ಪುತ್ರ ಬಿ.ನಟರಾಜ ಮೂರ್ತಿಗೆ ಈ ಬಾರಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಬೆಂಗಳೂರಿಗೆ ನಿಯೋಗ ಹೋಗಿ ಕಾಂಗ್ರೆಸ್ ವರಿಷ್ಠರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಕೊತ್ತಲವಾಡಿ ಸೋಮಲಿಂಗಪ್ಪ ಮಾತನಾಡಿ, ಪುಟ್ಟಸ್ವಾಮಿಯವರ ಕುಟುಂಬ ಇಷ್ಟು ದಿನ ಸಕ್ರಿಯ ರಾಜಕಾರಣದಿಂದ ದೂರ ಇದ್ದು ಅಭಿಮಾನಿಗಳನ್ನು ಅತಂತ್ರ ಮಾಡಿತ್ತು. ಬಿ.ಪಿ.ಮಂಜುಳಾ ಅವರಿಗೆ ಟಿಕೆಟ್ ನೀಡಿ ಸೋತಾಗ ಸೋಲು ಗೆಲುವುಗಳನ್ನು ಸಮನಾಗಿ ಸ್ವೀಕರಿಸಿ. ಸಕ್ರೀಯ ರಾಜಕಾರಣದಲ್ಲಿ ಇರಬೇಕಾಗಿತ್ತು, ದೂರ ಉಳಿದದ್ದು ತಪ್ಪು ಎಂದರು.

ಶ್ರೀನಿವಾಸ್‌ಪ್ರಸಾದ್ ಮಾತನಾಡಿ, ಪುಟ್ಟಸ್ವಾಮಿ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ತಳಮಟ್ಟದಿಂದ ಸಂಘಟಿಸಿದ್ದರು. ಮೊದಲ ಬಾರಿಗೆ ಸೈಕಲ್ ಗುರುತಿನಲ್ಲಿ ಆಯ್ಕೆಯಾಗಿ ಶಾಸಕರಾಗಿದ್ದರು, ಎಸ್.ಪುಟ್ಟಸ್ವಾಮಿಯವರ ಹೆಸರೇ ಒಂದು ರಾಜಕೀಯ ಶಕ್ತಿಯಾಗಿದೆ ಎಂದರು.

ನಾಗಬಸವಣ್ಣ ಪಿ, ಸುಂದ್ರಪ್ಪ ಯು.ಎಂ. ಪ್ರಭುಸ್ವಾಮಿ, ಗುರುಪಾದಪ್ಪ, ವಿ.ಶ್ರೀನಿವಾಸ ಪ್ರಸಾದ್, ವೀರೇಶ್, ಕೊಂಗಳಪ್ಪ, ನಾರಾಯಣನಾಯಕ, ಪರಶಿವಮೂರ್ತಿ, ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಅಂಕಶೆಟ್ಟಿ ವಕೀಲ ಶಿವಾನಂದಸ್ವಾಮಿ, ಕಾಡ ಹಳ್ಳಿಮಹದೇವಪ್ಪ, ಕೊಂಗಳಪ್ಪ ನಾಗರಾಜು, ಕಾಂತರಾಜು ಮಾತನಾಡಿದರು. ಗುರುಸ್ವಾಮಿ, ಜಯಶಂಕರ್, ಉಮ್ಮತ್ತೂರು ಬಸವರಾಜು ಬಿಸಲವಾಡಿ ಉಮೇಶ್ ಇತರರಿದ್ದರು.

ಮೈಸೂರು ಮಿತ್ರ

ಮಾ.25ರಂದು ಮತ್ತೆ ಮೋದಿ ರಾಜ್ಯಕ್ಕೆ: ಬೆಂಗಳೂರಿನಲ್ಲಿ ಮೆಗಾ ರೋಡ್‌ಶೋ



ಬೆಂಗಳೂರು, ಮಾ.18– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ರಾಜ್ಯದಲ್ಲಿ ಪ್ರಚಾರ ಬಿರುಸುಗೊಳಿಸಿದ್ದಾರೆ. ಮಾರ್ಚ್25 ರಂದು ಮತ್ತೊಮ್ಮೆ ರಾಜ್ಯಕ್ಕೆ ಮೋದಿ ಭೇಟಿ ನೀಡಲಿದ್ದು, ಬೆಂಗಳೂರಿನಲ್ಲಿ ರೋಡ್ ಶೋ ಮಾಡುವ ಮೂಲಕ ಮೋಡಿ ಮಾಡಲಿದ್ದಾರೆ.

28 ವಿಧಾನಸಭಾ ಕ್ಷೇತ್ರಗಳಿರುವ ಬೆಂಗಳೂರಿನ ಮೇಲೆ ಬಿಜೆಪಿ ಕಣ್ಣಿಟ್ಟಿದ್ದು, 20 ಕ್ಷೇತ್ರಗಳಲ್ಲಿ ಗೆಲ್ಲಬೇಕೆಂಬ ಗುರಿ ಹೊಂದಿದೆ. ಈ ನಿಟ್ಟಿನಲ್ಲಿ ಮೋದಿಯವರು ಬೆಂಗಳೂರಿಗೆ ವಿಶೇಷ ಆದ್ಯತೆ ಕೊಟ್ಟಿದ್ದಾರೆ. 25 ರಂದು ಬೆಂಗಳೂರಿಗೆ ಬರುತ್ತಿರುವ ಅವರು, ಅಂದು ನೂತನ ಮೆಟ್ರೋ ಮಾರ್ಗ (ವೈಟ್ ಫೀಲ್ಡ್, ಕೆ.ಆರ್ ಪುರದವರೆಗಿನ ಮಾರ್ಗ) ಲೋಕಾರ್ಪಣೆಗೊಳಿಸಲಿದ್ದಾರೆ. ಅದೇ ಸಂದರ್ಭದಲ್ಲಿ ಮೆಗಾ ರೋಡ್ ಶೋ ನಡೆಸಿ ರಾಜಧಾನಿಯ ಮತದಾರರನ್ನ ಸೆಳೆಯುವ ಕಸರತ್ತು ನಡೆಸಲಿದ್ದಾರೆ. ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಶನಿವಾರ ವೈಟ್‌ಫೀಲ್ಡ್ ಮೆಟ್ರೋ ಸ್ಟೇಷನ್‌ಗೆ ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದ್ದಾರೆ.

ಒಂದನೇ ಪುಟದಿಂದ

ಲೋಕಾರ್ಪಣೆ

ಅವಲಂಬಿತವಾಗಿರುತ್ತದೆ. ಇಡೀ ಪ್ರದೇಶದಲ್ಲಿ ಎಷ್ಟೇ ದೂರದಲ್ಲಿ ನಿಂತು ಮಹದೇಶ್ವರನ ದರ್ಶನ ಮಾಡುವಂತಹ ದೊಡ್ಡ ಪ್ರತಿಮೆ ನಿರ್ಮಾಣ ಮಾಡಿ ಈ ಕ್ಷೇತ್ರದ ಹಿರಿಮೆ ಹಾಗೂ ಮಹತ್ವವನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡಲಾಗಿದೆ ಎಂದು ತಿಳಿಸಿದರು.

ಮಲೆ ಮಹದೇಶ್ವರಸ್ವಾಮಿ ಬೆಟ್ಟ ಪೌರಾಣಿಕ ಮತ್ತು ಐತಿಹಾಸಿಕವಾಗಿ ಬಹಳ ಮಹತ್ವದ ಕ್ಷೇತ್ರವಾಗಿದೆ. ಮಾದಪ್ಪನ ಪವಾಡಗಳು ಇಂದು ಜನರ ಮನದಾಳದಲ್ಲಿ ಉಳಿದಿದ್ದು, ಇಡೀ ದಕ್ಷಿಣ ಕರ್ನಾಟಕದಲ್ಲಿ ಜಾತಿ, ಮತ, ಪಂಥ ಯಾವುದೇ ಬೇಧವಿಲ್ಲದೆ ಶ್ರದ್ಧೆ, ಭಕ್ತಿಯಿಂದ ಮಹದೇಶ್ವರನ್ನು ಪೂಜಿಸುತ್ತಾರೆ. ವಿಶೇಷವಾಗಿ ಗ್ರಾಮೀಣ ಜನರು ಮಾದಪ್ಪನ ಪೂಜೆ ಮಾಡಿ, ನಂತರ ತಮ್ಮ ಕಾಯಕ ಮಾಡುತ್ತಾರೆ. ಪ್ರತಿ ವರ್ಷ ಎರಡರಿಂದ ಮೂರು ಲಕ್ಷ ಜನ ಕಾಲ್ನಡಿಗೆಯಲ್ಲಿ ಬಂದು ತಮ್ಮ ಭಕ್ತಿ ಸಮರ್ಪಣೆ ಮಾಡುತ್ತಿದ್ದಾರೆ. ಇವತ್ತು ನೂರಾರು ಕೋಟಿಯ ಅಭಿವೃದ್ಧಿ ಕೆಲಸಕ್ಕೆ ಚಾಲನೆ ನೀಡಲಾಗಿದೆ. ಇಲ್ಲಿಗೆ ಬರುವ ಭಕ್ತರ ವಾಸ್ತವ್ಯಕ್ಕೆ ಉತ್ತಮವಾದ ವಸತಿ, ಊಟ, ಬಸ್ ವ್ಯವಸ್ಥೆ ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಪ್ರಾಧಿಕಾರದಿಂದ ಮಾಡಲಾಗಿದೆ ಎಂದು ತಿಳಿಸಿದರು.

ಎರಡು ದಿನದಲ್ಲಿ ಪರಿಹಾರ

ಮಾಡಲಾಗಿದೆ. ಇದಕ್ಕೆ ಯಾರ್ಯಾರು ಕೆಲಸ ಮಾಡಿದ್ದಾರೆ ಅವರಿಗೆ ಮಹದೇಶ್ವರ ಒಳಿತು ಮಾಡಲಿ. ಉಳಿದ ಕೆಲಸಗಳ ಪೂರ್ಣಗೊಳಿಸಲು ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಸಹಕಾರ ನೀಡುತ್ತದೆ ಎಂದು ತಿಳಿಸಿದರು.

ಸೋಮಣ್ಣನ ಹಾಡಿ ಹೊಗಳಿದ ಸಿಎಂ: ಸೋಮಣ್ಣ ಅವರು ಉಸ್ತುವಾರಿ ಸಚಿವರಾದ ನಂತರ ಹಲವು ಕೆಲಸಗಳು ನೆನೆಗುದಿಗೆ ಬಿದ್ದಿದ್ದವು. ಇದಕ್ಕೆ ಹಲವು ಸಮಸ್ಯೆಗಳಿದ್ದವು. ಈ ವೇಳೆ ಅವರು ಎಲ್ಲರೊಂದಿಗೆ ಮಾತನಾಡಿ, ಎಲ್ಲರ ವಿಶ್ವಾಸ ಪಡೆದುಕೊಂಡು ಎಲ್ಲ ಕೆಲಸಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡಿ ಮುಗಿಸಿದ್ದಾರೆ. ಇವರಿಗೆ ಬೆಂಬಲವನ್ನು ನೀಡಿದ ಶಾಸಕರಾದ ಆರ್. ನರೇಂದ್ರ ಅವರು ಕೂಡ ಈ ಭಾಗದ ಅಭಿವೃದ್ಧಿಗೆ ಪೂರಕವಾದ ಕೆಲಸ ಮಾಡಿದ್ದಾರೆ. ಅವರಿಗೆ ಮಾದಪ್ಪನ ಆಶೀರ್ವಾದ ಸದಾ ಇರಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕರಾದ ಆರ್. ನರೇಂದ್ರ, ಎನ್. ಮಹೇಶ್, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಲೂರು ಮಠದ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಪ್ರಾಧಿಕಾರದ ಕಾರ್ಯದರ್ಶಿ ಕಾತ್ಯಾಯಿನಿ ದೇವಿ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಸೇರಿದಂತೆ ಇತರರಿದ್ದರು.

ರಸ್ತೆ ಸಮಸ್ಯೆಗೆ ಶೀಘ್ರವೇ ಪರಿಹಾರ

ಇಂತಹ ರಸ್ತೆ ಉದ್ಘಾಟನೆ ಮಾಡಲು ಮೋದಿ ಬರಬೇಕಿತ್ತಾ ಎಂಬ ಟೀಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ಎಂಟು ಸಾವಿರ ಕೋಟಿ ಖರ್ಚು ಮಾಡಿ ರಸ್ತೆ ಮಾಡಿದ್ದೇವೆ. ಈ ರಸ್ತೆಯಿಂದ ಮೈಸೂರನ್ನು ಇಡೀ ರಾಷ್ಟ್ರಕ್ಕೆ ಸಂಪರ್ಕಗೊಳಿಸಲಾಗುತ್ತಿದೆ. ಇದಕ್ಕೆ ಎಲ್ಲರೂ ಹೆಮ್ಮೆ ಪಡಬೇಕು. ಇಂತಹ ಮಹತ್ವದ ಕೆಲಸಕ್ಕಲ್ಲದೇ ಮತ್ಯಾವುದಕ್ಕೆ ಪ್ರಧಾನಿ ಅವರನ್ನು ಆಹ್ವಾನಿಸಬೇಕು ಎಂದು ಪ್ರಶ್ನಿಸಿದರು.

ಎನ್‌ಎಚ್‌ಎಂ (ರಾಷ್ಟ್ರೀಯ ಆರೋಗ್ಯ ಯೋಜನೆ) ನೌಕರರ ಮುಷ್ಕರದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, ನೌಕರರಿಗೆ ಸೇವಾ ಷರತ್ತುಗಳಿರುತ್ತವೆ. ಅವರಿಗೆ ವೇತನ ಹೆಚ್ಚಳ ಮಾಡಬೇಕು ಎಂಬುದು ನಮ್ಮ ಉದ್ದೇಶ. ಅಧಿಕಾರಿಗಳಿಗೆ ತಿಳಿಸಿದ್ದೇನೆ. ಒಂದೆರಡು ದಿನದಲ್ಲಿ ಸಭೆ ಮಾಡಿ ತೀರ್ಮಾನ ಮಾಡುತ್ತೇವೆ ಎಂದರು.

ಮೈಸೂರಲ್ಲಿ ಜೆಡಿಎಸ್ ಮಹಾ ಶಕ್ತಿ ಪ್ರದರ್ಶನ

ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ಈ ತೀರ್ಮಾನ ಕೈಗೊಂಡಿದ್ದೇವೆ. ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, ಮೈಸೂರಿನಲ್ಲಿ ಮಾ.26ರಂದು ಪಂಚರತ್ನ ರಥಯಾತ್ರೆಯ ಸಮಾರೋಪ ನಡೆಯಲಿದೆ. ಈ ಸಮಾವೇಶಕ್ಕೆ ಹತ್ತು ಲಕ್ಷ ಕಾರ್ಯಕರ್ತರನ್ನು ಸೇರಿಸಿ ನಮ್ಮ ಶಕ್ತಿ ಪ್ರದರ್ಶನ ನಡೆಸಲಿದ್ದೇವೆ. ಪಕ್ಷವನ್ನು ಅಧಿಕಾರಕ್ಕೆ ತಂದರೆ, ಜನರಿಗೆ ಏನು ಕೊಡುತ್ತೇವೆ ಎಂಬ ಭರವಸೆಯನ್ನು ಅಂದು ಪ್ರಕಟಿಸಲಾಗುವುದು ಎಂದರು. ಕರ್ನಾಟಕದ ಇತಿಹಾಸದಲ್ಲೇ ಹಿಂದೆಂದೂ ನಡೆಯದಂತಹ ರಾಜಕೀಯ ಶಕ್ತಿ ಪ್ರದರ್ಶನ ಐತಿಹಾಸಿಕ ಸಮಾವೇಶ ಇದಾಗಲಿದೆ. ಈಗಾಗಲೇ ಸಮಾವೇಶದ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ. ಈ ಸಮಾವೇಶಕ್ಕೆ ಹಳೇ ಮೈಸೂರು ಭಾಗದವರಷ್ಟೇ ಅಲ್ಲ, ಇಡೀ ಕರ್ನಾಟಕದಾದ್ಯಂತ ಇರುವ ಪಕ್ಷದ ಕಾರ್ಯಕರ್ತರು ಆಗಮಿಸಲಿದ್ದಾರೆ.

ಸಮಾವೇಶಕ್ಕೆ ದೇವೇಗೌಡರೇ ಮುಖ್ಯ ರತ್ನ, ವೈದ್ಯರ ಸಲಹೆ ಮೇರೆಗೆ ಉದ್ದೇಶಿತ ಬೆಂಗಳೂರು–ಮೈಸೂರು ರೋಡ್ ಶೋ ರದ್ದು ಮಾಡಿದ್ದೇವೆ. ಆದರೆ, ಅವರು ಅಂದು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವುದಿದ್ದರೆ, ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಏನು ಮಾಡುತ್ತದೆ ಎಂಬುದನ್ನು ಬಹಿರಂಗ ಪಡಿಸಲಿದ್ದಾರೆ.

ಬಿಜೆಪಿ–ಕಾಂಗ್ರೆಸ್‌ನಂತೆ ನಾವು ಯಾರನ್ನೋ ಸೇರಿದು ಪ್ರದರ್ಶನ ಮಾಡುವ ಅನಿವಾರ್ಯತೆ ನಮಗಿಲ್ಲ. ಕಾರ್ಯಕರ್ತರೇ ನಮಗೆ ಶಕ್ತಿ. ಈಗಾಗಲೇ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷದ ಸಂಘಟನೆ ಮಾಡಿದ್ದು, ಜತೆ ಜತೆಯಲ್ಲಿ ಮತದಾರರ ಮನಗೆಲ್ಲುವ ಕಾರ್ಯ ಮಾಡಿದ್ದೇವೆ ಎಂದು ಹೇಳಿದರು. ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಆಂತರಿಕ ಕಲಹ ಎಲ್ಲೆ ಮೀರಿದೆ. ಅಧಿಕಾರಕ್ಕಾಗಿ ಆ ಪಕ್ಷದ ನಾಯಕರು ಬಡಿದಾಡುತ್ತಿದ್ದಾರೆ. ನಮ್ಮಲ್ಲಿ ಇಂತಹ ಯಾವುದೇ ಗೊಂದಲಗಳಿಲ್ಲ. ಇಲ್ಲಿಯೇ ತಿಳಿಯುತ್ತದೆ. ಯಾರಿಗೆ ಸರ್ಕಾರ ಅವಕಾಶ ದೊರೆಯುತ್ತದೆ ಎಂಬುದನ್ನು ಚುನಾವಣಾ ಪೂರ್ವದಲ್ಲೇ ಸೂಕ್ಷ್ಮವಾಗಿ ಗಮನಿಸಬಹುದಾಗಿದೆ ಎಂದರು.

ಸಮುದಾಯದ ಜಯಮೃತ್ಯುಂಜಯ ಸ್ವಾಮೀಜಿ

ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಕೋಲಾರದಲ್ಲಿ ಸ್ಪರ್ಧಿಸದಂತೆ ರಾಹುಲ್ ಗಾಂಧಿ ಸಲಹೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಹೆಚ್‌ಡಿಕೆ, ನಾನು ಸಿದ್ದರಾಮಯ್ಯ ಅವರು ಎಲ್ಲಿ ನಿಲ್ಲುತ್ತಾರೆ ಎಂಬುದರ ಬಗ್ಗೆ ಲಘುವಾಗಿ ಮಾತಾಡಲ್ಲ. ರಾಷ್ಟ್ರೀಯ ಪಕ್ಷದ ಮುಖಂಡರು, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದವರು. ಕಳೆದ ಐದಾರು ತಿಂಗಳಿಂದ ಈ ರೀತಿ ಹೊರಗಡೆ ಜನ ಚರ್ಚೆ ಮಾಡುವುದು ಬೇಕಾಗಿರಲಿಲ್ಲ. ರಾಷ್ಟ್ರೀಯ ಪಕ್ಷದಲ್ಲಿ ಈ ಮಟ್ಟದಲ್ಲಿ ನಡೆದಿರುವ ಬೆಳವಣಿಗೆಯಿಂದ ಜನರಲ್ಲಿ ಈ ರೀತಿ ತೀರ್ಮಾನಗಳು ಬಾಲಿಶ ವಿಷಯವಾಗಿಯೇ, ಇಲ್ಲ ಅವರ ಶಕ್ತಿ ಕುಗ್ಗಿದೆಯೋ ಎಂದು ಜನ ಮಾತಾಡುತ್ತಾರೆ. ಈ ರೀತಿ ಆಗಬಾರದಿತ್ತು ಎಂಬುದು ನನ್ನ ಅಭಿಪ್ರಾಯ ಎಂದರು. ಕೋಲಾರದಲ್ಲಿ ಸಿದ್ದರಾಮಯ್ಯ ನಿಂತರು ನಮಗೆ ಸಮಸ್ಯೆ ಇಲ್ಲ. ಮತದಾರರು ಜೆಡಿಎಸ್ ಪರ ಇದ್ದಾರೆ. ಯಾರು ಅಭ್ಯರ್ಥಿ ನಿಲ್ಲುತ್ತಾರೆ ಎಂಬುದು ಮುಖ್ಯ ಅಲ್ಲ, ನಮ್ಮ ಅಭ್ಯರ್ಥಿ ಅಲ್ಲಿ ಗೆಲ್ಲುತ್ತಾರೆ. ಶ್ರೀನಾಥ್ ಕಳೆದ ಏಳೆಂಟು ತಿಂಗಳಿಂದ ಕೆಲಸ ಆರಂಭ ಮಾಡಿದ್ದಾರೆ.

ಸಿದ್ದರಾಮಯ್ಯರಿಗೆ ರಾಹುಲ್‌ಗಾಂಧಿ ಸಲಹೆ

ಶಿವಕುಮಾರ್, ನೀವು ಸೇರಿದಂತೆ ಕೆಲವು ನಾಯಕರು ಹೊಸ ಪ್ರಯೋಗಗಳಿಗೆ ಅವಕಾಶ ಕೊಡಬೇಡಿ. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ವಿಧಾನಸಭೆ ಪ್ರವೇಶ ಮಾಡುವ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತನ್ನಿ ಎಂದು ಖಡಕ್ ನಿರ್ದೇಶನ ನೀಡಿದ್ದಾರೆ.

ರಾಹುಲ್ ಅವರ ಮಾತಿಗೆ ಯಾರು ಕೂಡಾ ಚಕಾರ ಎತ್ತಿಲ್ಲ ಆದರೆ, ಸಿದ್ದರಾಮಯ್ಯ ಬಣಕ್ಕೆ ಇದರಿಂದ ಭಾರೀ ಮುಜುಗರ ಉಂಟಾಗಿದೆಯಂತೆ. ರಾಜ್ಯ ಚುನಾವಣಾ ಸಮಿತಿ ಸಭೆ ಸೇರುವವರೆಗೂ ಯಾವುದೇ ಪ್ರಸ್ತಾಪವಿಲ್ಲದೆ, ಅಭ್ಯರ್ಥಿಗಳ ಆಯ್ಕೆಯ ಅಂತಿಮ ಸಂದರ್ಭದಲ್ಲಿ ರಾಹುಲ್ ಗಾಂಧಿ ಇಂತಹ ನಿಲುವು ತಳೆಯಲು ಯಾರ ಚಿತಾವಣೆ ಇದೆ ಎಂಬ ಮಾತುಗಳು ಕೇಳಿ ಬಂದಿವೆ. ಸಿದ್ದರಾಮಯ್ಯ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿಯಲ್ಲಿ ಪರಾಭವಗೊಂಡು ಬಾದಾಮಿಗೆ ಹೋಗಿ ಅಲ್ಲಿ ಅಲ್ಪ ಅಂತರದಿಂದ ಜಯಗಳಿಸಿದ್ದರು. ತಮಗೆ ರಾಜಕೀಯ ಪುನರ್ಜನ್ಮ ನೀಡಿದ ಬಾದಾಮಿ ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯಗಳ ಮಹಾಪೂರವನ್ನೇ ಹರಿಸಿದ್ದರೂ ಸ್ಥಳೀಯ ಮುಖಂಡರು ಇವರ ವಿರುದ್ಧ ತೊಡೆ ತಟ್ಟಿ ನಿಂತಿದ್ದರು.

ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಹಂಬಲಿಸುತ್ತಿರುವ ಸಿದ್ದರಾಮಯ್ಯ ಅವರು, ಸುರಕ್ಷಿತ ಕ್ಷೇತ್ರಕ್ಕಾಗಿ ಕೆಲವು ಕ್ಷೇತ್ರಗಳಲ್ಲಿ ಮೇಲಿಂದ ಮೇಲೆ ಸಮೀಕ್ಷೆ ನಡೆಸಿ ವರದಿ ಪಡೆದು ಕೋಲಾರದಲ್ಲಿ ಸ್ಪರ್ಧೆಗಿಳಿಯುವ ತೀರ್ಮಾನ ಕೈಗೊಂಡಿದ್ದರು.

ಈ ಮೊದಲು ವರುಣಾದಲ್ಲೇ ನಿಲ್ಲಬೇಕು ಎಂದಿದ್ದರೂ ತಮ್ಮ ಪುತ್ರನಿಂದ ಕ್ಷೇತ್ರ ಕಸಿಯಬಾರದು ಎಂದೂ ನಂತರ ಚಾಮರಾಜಪೇಟೆ, ಕೋಲಾರ, ಕೊಪ್ಪಳ, ಕಡೂರು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಚಿಂತನೆ ಮಾಡಿದ್ದರು. ಸಿದ್ದರಾಮಯ್ಯ ಅವರ ಆಸೆಗೆ ರಾಹುಲ್ ತಡೆ ಹಾಕಿದ್ದಾರೆ. ಆದರೂ ಅವರು ಮತ್ತೊಂದು ಪರ್ಯಾಯ ಕ್ಷೇತ್ರದತ್ತ ಗಮನಹರಿಸುವುದನ್ನು ಬಿಟ್ಟಿಲ್ಲ ಎಂಬ ಮಾತುಗಳೂ ಕೇಳಿ ಬರುತ್ತಿವೆ.

ವಿಧಾನಸಭಾ ಚುನಾವಣೆಗೆ ದಿನಗಣನೆ; ಜಿಲ್ಲಾಡಳಿತ ಹೈ ಅಲರ್ಟ್

- ಅಕ್ರಮಗಳಿಗೆ ಆಸ್ಪದವಾಗದಂತೆ ಪೊಲೀಸ್ ಚೆಕ್‌ಪೋಸ್ಟ್ ಸ್ಥಾಪನೆ
- ಮೈಸೂರು ಜಿಲ್ಲೆ ಪ್ರವೇಶಿಸುವ ಎಲ್ಲಾ ವಾಹನಗಳ ಮೇಲೆ ನಿಗಾ
- ಮೊದಲ ದಿನವೇ ಹೆಚ್.ಡಿ.ಕೋಟೆ, ಹುಣಸೂರಲ್ಲಿ ತಲಾ 1 ಕೆಜಿ ಗಾಂಜಾ ವಶ

ಮೈಸೂರು, ಮಾ.18(ಎಂಟಿವೈ)– ವಿಧಾನಸಭಾ ಚುನಾವಣೆ ಸಮೀಪಿಸುತ್ತಿದೆ. ಚುನಾವಣಾ ಅಕ್ರಮ ತಡೆಗಟ್ಟಲು ಮೈಸೂರು ಜಿಲ್ಲಾಡಳಿತ ಈಗಾಗಲೇ ಅಲರ್ಟ್ ಆಗಿದ್ದು, ಜಿಲ್ಲೆಯಲ್ಲಿ 40ಕ್ಕೂ ಅಧಿಕ ಚೆಕ್‌ಪೋಸ್ಟ್ ಸ್ಥಾಪಿಸಿ, ಮೈಸೂರು ಪ್ರವೇಶಿಸುವ ಹಾಗೂ ನಿರ್ಗಮಿಸುವ ಎಲ್ಲಾ ವಾಹನಗಳ ತಪಾಸಣಾ ಕಾರ್ಯ ಆರಂಭಿಸಲಾಗಿದೆ. ಮೊದಲ ದಿನವೇ ಎರಡು ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ.



ಚುನಾವಣಾ ಆಯೋಗ ಸಿದ್ಧತಾ ಕಾರ್ಯ ಆರಂಭಿಸಿದೆ ಮುಂದಿನ 10 ದಿನದೊಳಗೆ ಚುನಾವಣಾ ನೀತಿ ಸಂಹಿತೆ ಜಾರಿಗೊಳ್ಳುವ ಸಾಧ್ಯತೆ ಇದೆ. ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಅಕ್ರಮ ತಡೆಗೆ ಪೊಲೀಸರು ಫೀಲ್ಡ್‌ಗೆ ಇಳಿದಿದ್ದಾರೆ. ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸ್ ವ್ಯಾಪ್ತಿಯೊಳಗೆ ತಪಾಸಣಾ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ. ಈ ಮಧ್ಯೆ ಎರಡು ಕೆಜಿ ಗಾಂಜಾ ಪತ್ತೆಯಾಗಿದೆ.

ನಗರ ವ್ಯಾಪ್ತಿಯಲ್ಲಿ: ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಿ ತಪಾಸಣಾ ಕಾರ್ಯ ಆರಂಭಿಸಲಾಗಿದೆ. ಮೈಸೂರು–ಬನ್ನೂರು ರಸ್ತೆಯ ಭುಗತಗಳ್ಳಿ, ತಿ.ನರಸೀಪುರ ರಸ್ತೆಯ ಚಿಕ್ಕಳ್ಳಿ, ಮೈಸೂರು ಬೆಂಗಳೂರು ರಸ್ತೆ ಸಿದ್ದಲಿಂಗಪುರ ಬಳಿ, ಬೋಗಾದಿ ರಸ್ತೆ, ಹುಣಸೂರು ರಸ್ತೆ, ಹೆಚ್.ಡಿ.ಕೋಟೆ ರಸ್ತೆಯಲ್ಲಿರುವ ಚೆಕ್‌ಪೋಸ್ಟ್‌ನಲ್ಲಿ ಕಳೆದ ರಾತ್ರಿಯಿಂದಲೇ ಚುನಾವಣಾ ತಪಾಸಣಾ ಪ್ರಕ್ರಿಯೆ ಆರಂಭಿಸಲಾಗಿದೆ. ಚುನಾವಣಾ ಕರ್ತವ್ಯಕ್ಕೆ ಕೆಲವು ಪ್ರೊಬೆಷನರಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ ಆಯಾ ಠಾಣಾ ವ್ಯಾಪ್ತಿಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ದಿನದ 24 ಗಂಟೆಯೂ ತಪಾಸಣಾ ಕಾರ್ಯ ನಡೆಯುತ್ತಿದೆ. ಇದಕ್ಕಾಗಿ ಯುವ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ತಾಲೂಕು ವ್ಯಾಪ್ತಿ: ಪೊಲೀಸ್ ವರಿಷ್ಠಾಧಿಕಾರಿ ವ್ಯಾಪ್ತಿಯಲ್ಲಿ ವಿವಿಧ ತಾಲೂಕುಗಳಲ್ಲಿ 30ಕ್ಕೂ ಹೆಚ್ಚು ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದ್ದು, ಶುಕ್ರವಾರದಿಂದಲೇ ವಾಹನ ತಪಾಸಣಾ ಕಾರ್ಯ ಆರಂಭಿಸಲಾಗಿದೆ. ಅಂತರ ರಾಜ್ಯ ಹಾಗೂ ನೆರೆ ಜಿಲ್ಲೆಗಳಿಂದ ಮೈಸೂರು ಜಿಲ್ಲೆಯನ್ನು ಪ್ರವೇಶಿಸುವ ವಾಹನಗಳ ಮೇಲೆ ನಿಗಾ ಇಡಲಾಗಿದೆ. ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ತಿ.ನರಸೀಪುರ, ನಂಜನಗೂಡು, ಸಾಲಿಗ್ರಾಮ ತಾಲೂಕು ಸೇರಿದಂತೆ ವಿವಿಧೆಡೆ ಚೆಕ್‌ಪೋಸ್ಟ್ ತೆರೆಯಲಾಗಿದೆ. ಎರಡು ಪಾಳಿಯಲ್ಲಿ ದಿನದ 24 ಗಂಟೆಯೂ ಸಿಬ್ಬಂದಿ ತಪಾಸಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಚುನಾವಣಾ ಪೂರ್ವ ಸಿದ್ಧತೆಯ ತಪಾಸಣಾ ಕಾರ್ಯ ಆರಂಭವಾದ ಮೊದಲ ದಿನವೇ ಜಿಲ್ಲಾ ಪೊಲೀಸರು ಕೇರಳದಿಂದ ಹೆಚ್.ಡಿ.ಕೊಟೆಗೆ ಹಾಗೂ ಹುಣಸೂರು ಬಳಿ ತಲಾ ಒಂದು ಕೆಜಿ ಗಾಂಜಾ ವಶಪಡಿಸಿಕೊಂಡಿದ್ದು, ಎರಡೂ ಪ್ರಕರಣದಲ್ಲೂ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗಿದೆ.

ನೀತಿ ಸಂಹಿತೆ ಜಾರಿ ಬಳಿಕ ಮತ್ತಷ್ಟು ಚುರುಕು: ಚುನಾವಣಾ ದಿನಾಂಕ ಘೋಷಣೆಯಾದ ಬಳಿಕ ತಪಾಸಣಾ ಕಾರ್ಯ ಮತ್ತಷ್ಟು ಚುರುಕುಗೊಳ್ಳಲಿದೆ. ಅಲ್ಲದೆ, ಪ್ರತಿಯೊಂದು ವಾಹನ ತಪಾಸಣೆಯ ವೇಳೆ ವಿಡಿಯೋ ಚಿತ್ರೀಕರಣ ಮಾಡಲಾಗುತ್ತದೆ. ಪ್ರಸ್ತುತ ಎರಡು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲೆಂಬ ಕಾರಣದಿಂದ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗುತ್ತದೆ.

ಯಾವುದರ ಮೇಲೆ ಕಣ್ಣು: ಚುನಾವಣೆ ವೇಳೆ ಮತದಾರರಿಗೆ ಹಂಚಲು ಕೊಂಡೊಯ್ಯುವ ವಿವಿಧ ವಸ್ತುಗಳು, ಮದ್ಯ, ಹಣ ಸಾಗಾಟದ ಮೇಲೆ ಹದ್ದಿನ ಕಣ್ಣಿಡಲಾಗುತ್ತಿದೆ. ದಾಖಲೆ ಇಲ್ಲದೆ ದೊಡ್ಡ ಪ್ರಮಾಣದಲ್ಲಿ ಯಾವುದೇ ವಸ್ತುಗಳ ಸಾಗಾಟಕ್ಕೆ ಬ್ರೇಕ್ ಬೀಳಲಿದೆ. ಅನುಮಾನಾಸ್ಪದ ವಾಹನಗಳನ್ನು ತೀವ್ರ ತಪಾಸಣೆ ನಡೆಸಲಾಗುತ್ತದೆ ಅಲ್ಲದೆ, ಸರಕು ಸಾಗಾಣಿಕೆ ವಾಹನದ ಮೇಲೂ ಪೊಲೀಸರು ನಿಗಾ ವಹಿಸಲಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 30 ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಆರಂಭಿಸಲಾಗಿದೆ. ನೆರೆ ರಾಜ್ಯದಿಂದ ಬರುವ ವಾಹನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ. ಇದರ ಜೊತೆಗೆ ಜಿಲ್ಲಾ ವ್ಯಾಪ್ತಿಯಲ್ಲಿ ಮತದಾರರಿಗೆ ಆಸೆ, ಆಮಿಷವೊಡ್ಡಲು ಯಾವುದೇ ವಸ್ತುಗಳ ಸಾಗಾಟ ಮಾಡುವವರನ್ನು ಪತ್ತೆ ಹಚ್ಚಲು ತಪಾಸಣೆ ಚುರುಕುಗೊಳಿಸಲಾಗಿದೆ. ತಪಾಸಣೆಯ ಮೊದಲ ದಿನವೇ ಎರಡು ಪ್ರತ್ಯೇಕ ಸ್ಥಳದಲ್ಲಿ ಎರಡು ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ನೀತಿ ಸಂಹಿತೆ ಜಾರಿಗೊಂಡ ಬಳಿಕ ತಪಾಸಣಾ ಕಾರ್ಯ ಮತ್ತಷ್ಟು ಚುರುಕುಗೊಳ್ಳಲಿದೆ.

– ಸೀಮಾ ಲಾಟ್ಕರ್, ಎಸ್ಪಿ

ಬ್ರಾಹ್ಮಣರಿಗೆ ಜೀವಿತಾವಧಿ ಜಾತಿ ಪ್ರಮಾಣ ಪತ್ರಕ್ಕೆ ಆಗ್ರಹಿಸಿ ಅಂಚೆ ಚಳುವಳಿ

ಮೈಸೂರು, ಮಾ.18(ಜಿಎ)–ಬ್ರಾಹ್ಮಣ ಸಮುದಾಯಕ್ಕೆ ಜೀವಿತಾವಧಿ ಜಾತಿ ಪ್ರಮಾಣ ಪತ್ರ ನೀಡಬೇಕೆಂದು ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಅಂಚೆ ಚಳವಳಿ ಮೂಲಕ ಕಂದಾಯ ಇಲಾಖೆಗೆ ಆಗ್ರಹಿಸಲಾಗಿದೆ.



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ಅಂಚೆ ಪೆಟ್ಟಿಗೆ ಬಳಿ ಮೈಸೂರು ಬ್ರಾಹ್ಮಣ ಯುವ ವೇದಿಕೆ ಆಯೋಜಿಸಿದ್ದ ಅಂಚೆ ಚಳುವಳಿಯಲ್ಲಿ ಭಾಗವಹಿಸಿದ್ದ ಬ್ರಾಹ್ಮಣ ಸಮುದಾಯದವರು ಕರ್ನಾಟಕದಲ್ಲಿ ಬ್ರಾಹ್ಮಣರಿಗೆ ಜೀವಿತಾವಧಿ ಜಾತಿ ಪ್ರಮಾಣ ಪತ್ರ ನೀಡಬೇಕು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ಮಾನದಂಡವನ್ನು ತಿದ್ದುಪಡಿ ಮಾಡಬೇಕೆಂದು ಪತ್ರ ಬರೆದು ಕಂದಾಯ ಇಲಾಖೆ ವಿಳಾಸಕ್ಕೆ ಕಳುಹಿಸಿದರು.

ಈ ವೇಳೆ ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಜಾತಿಯವರಿಗೆ ಶೇ.10 ಮೀಸಲಾತಿ ಅಡಿಯಲ್ಲಿ ಸರಿ ಸಮಾರು 144 ಜಾತಿಗಳನ್ನು ಗುರುತಿಸಿದ್ದು ಅದರಲ್ಲಿ ಬ್ರಾಹ್ಮಣ ಜನಾಂಗವೂ ಸಹ ಒಂದು, ಆದರೆ ಕರ್ನಾಟಕದಲ್ಲಿ ಶೇ.10 ಮೀಸಲಾತಿ ಯೋಜನೆ ಬ್ರಾಹ್ಮಣ ಜನಾಂಗಕ್ಕೆ ತಲುಪದಿರುವುದು ನೋವಿನ ಸಂಗತಿ. ಇದರಿಂದ ಬ್ರಾಹ್ಮಣ ಸಮುದಾಯದ ಯುವಕರಿಗೆ ಶಿಕ್ಷಣ, ಉದ್ಯೋಗ, ಮತ್ತು ಹಿರಿಯರಿಗೆ ಆರೋಗ್ಯ ಸೇರಿದಂತೆ ಅರ್ಚಕರು, ಪುರೋಹಿತರು, ಅಡುಗೆಯವರು ಸ್ವಂತ ಉದ್ಯಮಿಗಳು ಎಲ್ಲರಿಗೂ ತೊಂದರೆಯಾಗುತ್ತಿದೆ ಎಂದರು.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಜಾತಿಯವರಿಗೆ ನೀಡುವ ಜಾತಿ ಪ್ರಮಾಣ ಪತ್ರದ ಮಾದರಿಯಲ್ಲೇ ಬ್ರಾಹ್ಮಣ ಜನಾಂಗದವರಿಗೂ ಸಹ ಜೀವಿತಾವಧಿ ಜಾತಿ ಪ್ರಮಾಣ ಪತ್ರ ನೀಡಬೇಕಿದೆ. ಎಲ್ಲರಂತೆ ತೆರಿಗೆ ಕಟ್ಟುವ ಬ್ರಾಹ್ಮಣರು ಶಿಕ್ಷಣ ಆರೋಗ್ಯ, ಉದ್ಯೋಗ ಸೇರಿದಂತೆ ಸರ್ಕಾರಿ ಸವಲತ್ತು ಅನುದಾನ ವಿವಿಧ ಯೋಜನೆಗಳ ಪ್ರೋತ್ಸಾಹಧನದ ನೆರವು ಪಡೆಯಲು ನೆರವಾಗುತ್ತದೆ. ಕರ್ನಾಟಕ ಸರ್ಕಾರ ಕಂದಾಯ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ ಕಾರ್ಯೋನ್ಮುಖರಾಗಬೇಕಿದೆ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಸದಸ್ಯ ಎಂ.ಆರ್. ಬಾಲಕೃಷ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಗೌರವಾಧ್ಯಕ್ಷ ಮುಳ್ಳೂರು ಗುರುಪ್ರಸಾದ್, ಅಧ್ಯಕ್ಷ ಹೆಚ್.ಎನ್. ಶ್ರೀಧರಮೂರ್ತಿ, ಪ್ರಧಾನ ಕಾರ್ಯದರ್ಶಿ ವಿಕ್ರಮ್ ಅಯ್ಯಂಗಾರ್, ಕಡಕೊಳ ಜಗದೀಶ್, ವಿಜಯ್ ಕುಮಾರ್, ಪ್ರದೀಪ್ ಭಾರದ್ವಾಜ್, ಪ್ರಶಾಂತ್, ಮಿರ್ಲೆ ಫಣೀಶ್, ಶ್ರೀಕಾಂತ್ ಕಶ್ಯಪ್, ಸುಚೀಂದ್ರ, ಪುನೀತ್, ವಿಕಾಸ್ ಶಾಸ್ತ್ರಿ, ಹೊಯ್ಸಳ ಕರ್ನಾಟಕ ಸಂಘದ ರಂಗನಾಥ್, ಚಕ್ರಪಾಣಿ, ವಿಜಯನಗರ ಬ್ರಾಹ್ಮಣ ಸಂಘದ ಗುರುಪ್ರಸಾದ್ ಮತ್ತಿತರರಿದ್ದರು.

ಅಪಘಾತದಲ್ಲಿ ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿಯ ಅಂಗಾಂಗ ದಾನ

ಐವರ ಬಾಳಿಗೆ ಬೆಳಕಾದ ಅನಿಲ್ ಕುಮಾರ್

ಮೈಸೂರು, ಮಾ.18(ಎಂಟಿವೈ)– ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿಯೊಬ್ಬರ ಅಂಗಾಂಗ ದಾನದ ಮೂಲಕ ಐವರ ಬಾಳಿನಲ್ಲಿ ಬೆಳಕು ಕಂಡಿದೆ.



ಮೈಸೂರಿನ ನಜರ್‌ಬಾದ್ ನಿವಾಸಿ ಎಂ.ಅನಿಲ್ ಕುಮಾರ್(38) ಎಂಬುವವರಿಗೆ ಮೈಸೂರು–ಹೆಚ್.ಡಿ.ಕೋಟೆ ರಸ್ತೆಯ ಪರಸಯ್ಯನಹುಂಡಿ ಬಳಿ ನಡೆದ ರಸ್ತೆ ಅಪಘಾತದಲ್ಲಿ ತಲೆಗೆ ಗಂಭೀರ ಗಾಯವಾಗಿತ್ತು. ಕಾಮಾಕ್ಷಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತಾದರೂ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿರಲಿಲ್ಲ. ಅಲ್ಲದೆ, ಮೆದುಳು ಸರಿಯಾಗಿ ಕೆಲಸ ಮಾಡದೇ ಇರುವುದು ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಪೋಷಕರು ಮಾ.14ರಂದು ಅಪೋಲೊ ಬಿಜಿಎಸ್ ಆಸ್ಪತ್ರೆಗೆ ಅವರನ್ನು ಕರೆತಂದು ಚಿಕಿತ್ಸೆ ಮುಂದುವರೆಸಲಾಗಿತ್ತು.

ಆದರೆ, ಮಾ.17 ರಂದು ಅನಿಲ್‌ಕುಮಾರ್ ಅವರ ಮೆದುಳು ಸಂಪೂರ್ಣವಾಗಿ ನಿಷ್ಕ್ರಿಯಗೊಂಡಿತ್ತು. ಈ ವೇಳೆ ವೈದ್ಯರ ಸಲಹೆ ಮೇರೆಗೆ ಅನಿಲ್ ಕುಮಾರ್ ಪೋಷಕರು ಅಂಗಾಂಗ ದಾನಕ್ಕೆ ಸಮ್ಮತಿ ಸೂಚಿಸಿದ್ದಾರೆ. ನಂತರ ವೈದ್ಯರು ಅಂಗಾಂಗ ಕಸಿಗಾಗಿ ಕಾಯುತ್ತಿರುವ ರೋಗಿಗಳ ಪಟ್ಟಿ ಸಿದ್ಧಪಡಿಸಿ, ಅನಿಲ್ ಅವರಿಂದ ಎರಡು ಮೂತ್ರಪಿಂಡ, ಯಕೃತ್ತು, ಮತ್ತು ಕಾರ್ನಿಯಾಗಳು ಬೇರ್ಪಡಿಸಿ, ಅಗತ್ಯವಿರುವವರಿಗೆ ನೀಡಲು ವ್ಯವಸ್ಥೆ ಮಾಡಿದರು. ಅಂಗಾಂಗ ದಾನ ಮಾಡಲು ಸಮ್ಮತಿಸಿದ ಮೃತರ ಪೋಷಕರಿಗೆ ಅಪೋಲೋ ಬಿಜಿಎಸ್ ಆಸ್ಪತ್ರೆ ಯೂನಿಟ್ ಹೆಡ್ ಎನ್.ಜಿ.ಭರತೀಶ್ ರೆಡ್ಡಿ ಧನ್ಯವಾದ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು, ಮಾ.18– ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ (ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸುಗಳು)ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸಿನ ವಿದ್ಯಾರ್ಥಿಗಳಿಗೆ 2022–23ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಮಾ.27 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಹರೀಶ್‌ಗೌಡರಿಂದ ಧ್ರುವನಾರಾಯಣ್‌ಗೆ ಶ್ರದ್ಧಾಂಜಲಿ



ಮೈಸೂರು, ಮಾ.18(ಜಿಎ)– ಇತ್ತೀಚೆಗೆ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ಅವರಿಗೆ ಕಾಂಗ್ರೆಸ್ ಮುಖಂಡರಾದ ಕೆ ಹರೀಶ್ ಗೌಡ ಮತ್ತು ಅವರ ಅಭಿಮಾನಿಗಳ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಲೀಲಾ ಚೆನ್ನಯ್ಯ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಕೆ.ಹರೀಶ್‌ಗೌಡ, ಪಕ್ಷದ ನಗರಾಧ್ಯಕ್ಷ ಆರ್. ಮೂರ್ತಿ, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಪುರುಷೋತ್ತಮ್, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ನಿವೃತ್ತ ಪ್ರಾಧ್ಯಾಪಕ ಮಹೇಶ್ ಚಂದ್ರಗುರು, ಪ್ರೊ.ನಂಜರಾಜೇ ಅರಸ್, ನಗರಪಾಲಿಕೆ ಸದಸ್ಯರುಗಳು, ಮಾಜಿ ಕಾರ್ಪೊರೇಟರ್‌ಗಳು, ಮುಖಂಡರು ಮತ್ತು ಕಾರ್ಯಕರ್ತರುಗಳು ಶ್ರದ್ಧಾಂಜಲಿ ಸಲ್ಲಿಸಿದರು.

ಈ ವೇಳೆ ನಿವೃತ್ತ ಪ್ರಾಧ್ಯಾಪಕ ಮಹೇಶ್ ಚಂದ್ರಗುರು ಮಾತನಾಡಿ, ಧ್ರುವನಾರಾಯಣ್ ವಿದ್ಯಾರ್ಥಿ ದೆಸೆಯಲ್ಲೇ ಎನ್‌ಎಸ್‌ಯುಐ ಘಟಕದ ಮೂಲಕ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಪ್ರಾರಂಭ ಮಾಡಿದರು. ಒಂದು ಮತದಿಂದ ಗೆಲ್ಲುವ ಮೂಲಕ ಒಂದು ಮತಕ್ಕೆ ಎಷ್ಟು ಮೌಲ್ಯ ಇದೆ ಎಂಬುದನ್ನು ಜಗತ್ತಿಗೆ ತೋರಿಸಿ, ಅಭಿವೃದ್ಧಿಗಾಗಿಯೇ ತಮ್ಮ ಬದುಕನ್ನು ಸಮರ್ಪಿಸಿಕೊಂಡಿದ್ದ ಅಪರೂಪದ ರಾಜಕಾರಣಿ ಎಂದು ಸ್ಮರಿಸಿದರು.


ಕೆ.ಹರೀಶ್ ಗೌಡ ಮಾತನಾಡಿ, ಧ್ರುವನಾರಾಯಣ್ ಅವರು ಕೇವಲ ದಲಿತ ನಾಯಕರಲ್ಲ. ಎಲ್ಲಾ ವರ್ಗದವರ ನಾಯಕರಾಗಿದ್ದವರು, ಅವರ ನಿಧನದ ನೋವನ್ನು ಅರಗಿಸಿಕೊಳ್ಳಲು ಸಾಧ್ಯವಿಲ್ಲ. ಬಹಳ ಎತ್ತರದ ಅಧಿಕಾರಗಳನ್ನು ಪಡೆಯುವ ಹಂತದಲ್ಲಿದ್ದಾಗ ನಾವು ಅವರನ್ನು ಕಳೆದುಕೊಂಡಿದ್ದು, ಅವರ ಪುತ್ರ ದರ್ಶನ್‌ನಲ್ಲಿ ಅವರ ಗುಣಗಳನ್ನು ಕಾಣುತ್ತಿದ್ದೇವೆ. ಅವರ ಅಭಿಮಾನಿಗಳು ಇಟ್ಟುಕೊಂಡಿದ್ದ ಆಸೆಯನ್ನು ಅವರ ಪುತ್ರ ಈಡೇರಿಸಲಿ ಎಂದು ಆಶಿಸುತ್ತೇನೆ ಎಂದರು.

ಆರ್.ಧ್ರುವನಾರಾಯಣ್ ಅವರ ಹೆಸರು ಮುಂದೆ ಅಜರಾಮರವಾಗಿರಬೇಕು ಎಂಬುದು ನಮ್ಮೆಲ್ಲರ ಆಸೆಯಾಗಿದ್ದು, ಕನಿಷ್ಠ 3 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರ ಹೆಸರಿನಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸುವ ಕೆಲಸವನ್ನು ನಾವು ಮಾಡುತ್ತೇವೆ ಎಂದು ತಿಳಿಸಿದರು.

ಜನಸಾಮಾನ್ಯರು ಸೈನ್ಸ್ ಗ್ಯಾಲರಿ ಪ್ರಯೋಜನ ಪಡೆಯಿರಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ

ಬೆಂಗಳೂರು, ಮಾ. 18 (ಕೆಎಂಶಿ)– ಜನಸಾಮಾನ್ಯರು ಸೈನ್ಸ್ ಗ್ಯಾಲರಿ ಪ್ರವೇಶಿಸಿ ವಿಜ್ಞಾನದ ಜ್ಞಾನ ಪಡೆದು ಹೊರಹೋಗುವಂತಾಗಬೇಕು. ಇದಕ್ಕೆ ರಾಜ್ಯ ಸರ್ಕಾರ ಎಲ್ಲಾ ಸಹಕಾರ, ಬೆಂಬಲ ನೀಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಇಂದು ಬೆಂಗಳೂರು ಸೈನ್ಸ್ ಗ್ಯಾಲರಿ ಉದ್ಘಾಟಿಸಿ ಮಾತನಾಡಿದ ಅವರು, ವಿಜ್ಞಾನ ಮತ್ತು ಆಧ್ಯಾತ್ಮ ಒಂದೇ ನಾಣ್ಯದ ಎರಡು ಮುಖಗಳು. ತತ್ವಶಾಸ್ತ್ರ,ಆಧ್ಯಾತ್ಮ ಎಲ್ಲದರಲ್ಲೂ ವಿಜ್ಞಾನದ ಅಂಶಗಳು ಹೆಚ್ಚಾಗಿದೆ.

ವಿಜ್ಞಾನದಲ್ಲಿ ಸಂಶೋಧನೆಗೆ ಇನ್ನೂ ಸಾಕಷ್ಟು ಅವಕಾಶಗಳಿವೆ. ಮಾನವನ ಮೆದುಳು ಇನ್ನೂ 75% ನಷ್ಟು ವಿಸ್ತೃತವಾಗಬೇಕಿದೆ. ಕೇವಲ 25% ಮೆದುಳನ್ನು ಬಳಸಿಕೊಂಡು ಮನುಷ್ಯ ಇಷ್ಟೆಲ್ಲಾ ಅದ್ಭುತ ಸೃಷ್ಟಿ ಮಾಡಿದ್ದಾನೆ. 100% ಮೆದುಳನ್ನು ಮನುಷ್ಯ ಉಪಯೋಗಿಸಿದರೆ ಏನೆಲ್ಲಾ ಸೃಷ್ಟಿಸಬಹುದು ಎಂದರು.

ಸೈನ್ಸ್ ಗ್ಯಾಲರಿ ಕೂಡ ಅದೇ ನಿಟ್ಟಿನಲ್ಲಿ ಕೆಲಸ ಮಾಡಬೇಕು. ವ್ಯಕ್ತಿಯ ವೈಯಕ್ತಿಕ ವಿಕಸನಕ್ಕೆ ಸಹಾಯವಾಗಬೇಕು. ಆರ್‌ಎನ್‌ಡಿ ಇಕೋ ಸಿಸ್ಟಮ್, ಏರೋಸ್ಪೇಸ್ ಎಲ್ಲದರಲ್ಲೂ ಕೂಡ ರಾಜ್ಯ ಮುಂಚೂಣಿಯಲ್ಲಿದೆ. ಆರ್‌ಎನ್‌ಡಿ ನೀತಿ ರೂಪಿಸಿದ ಮೊದಲ ರಾಜ್ಯ ಕರ್ನಾಟಕ. ರಾಜ್ಯ, ದೇಶ, ವಿಶ್ವದೆಲ್ಲೆಡೆ ಸೈನ್ಸ್ ಗ್ಯಾಲರಿಯ ಅನುಕೂಲವಾಗಲಿ ಎಂದರು.

ಸಾರ್ವಜನಿಕರ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಬೇಕು: ಜಿ.ಟಿ.ದೇವೇಗೌಡ

ಮೈಸೂರು,ಮಾ.18– ಜನರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳು ನಿಮ್ಮ ಗ್ರಾಮಕ್ಕೆ ಬಂದಿದ್ದು ತಮ್ಮ ಸಮಸ್ಯೆಗಳನ್ನು ತಿಳಿಸಿ ಪರಿಹರಿಸಿಕೊಳ್ಳಿ. ಹಾಗೆಯೇ ಸಾರ್ವಜನಿಕರ ಸಮಸ್ಯೆಗಳನ್ನು ಅಧಿಕಾರಿಗಳು ಶೀಘ್ರವಾಗಿ ಪರಿಹರಿಸಬೇಕು ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ತಿಳಿಸಿದರು.



ಜಿಲ್ಲಾಡಳಿತ ವತಿಯಿಂದ ಇಲವಾಲ ಹೋಬಳಿಯ ಕಲ್ಲೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಅಧಿಕಾರಿಗಳು ಶೀಘ್ರವಾಗಿ ಪರಿಹರಿಸಬೇಕು. ವಾರಕ್ಕೆ ಒಂದು ದಿನ ಹೊಸಕೋಟೆ ಆಸ್ಪತ್ರೆಯಲ್ಲಿರುವ ವೈದ್ಯರು ಕಲ್ಲೂರು ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಬೇಕು. ಶಾಲಾ ಕಾಲೇಜು ಸಮಯದಲ್ಲಿ ಬಸ್ ಸಮಸ್ಯೆ ಇದ್ದು, ನಿಗದಿತ ಸಮಯಕ್ಕೆ ಬಸ್ ಸೌಲಭ್ಯ ಕಲ್ಪಿಸಲು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಸೂಚಿಸಿದರು.

ಆನಂದೂರಿನಲ್ಲಿ ಕಸ ವಿಲೇವಾರಿಗೆ ವಿದ್ಯುತ್ ವಿತರಣೆ, ಕೆಲವು ಬಡ ಜನರಿಗೆ ಮನೆ ಕಟ್ಟಲು ಗ್ರ್ಯಾಂಟ್ ವ್ಯವಸ್ಥೆ, ರೈತರ ಜಮೀನಿನ ಸಮಸ್ಯೆಗಳು ಸೇರಿದಂತೆ ಮೊದಲಾದ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ತಹಶೀಲ್ದಾರ್ ಗಿರೀಶ್ ಮಾತನಾಡಿ, 18 ವರ್ಷ ತುಂಬಿದವರು ಕೂಡಲೇ ವೋಟರ್ ಐಡಿ ಕಾರ್ಡ್ ಮಾಡಿಸಿಕೊಳ್ಳಿ ಹಾಗೂ ವೋಟರ್ ಐಡಿ ತಿದ್ದುಪಡಿಯಿದ್ದಲ್ಲಿ ಗ್ರಾಮ ಒನ್ ಕೇಂದ್ರಕ್ಕೆ ಭೇಟಿ ನೀಡಿ ಸರಿಪಡಿಸಿಕೊಳ್ಳಬಹುದು. ಇನ್ನಿತರೆ ವೋಟರ್ ಐಡಿ ಕಾರ್ಡಿಗೆ ಸಂಬಂಧಿಸಿದ ಮಾಹಿತಿ ಬೇಕಾದಲ್ಲಿ ವೋಟರ್ ಹೆಲ್ಪ್‌ಲೈನ್ ಆದ ಟೋಲ್ ಫ್ರೀ ನಂಬರ್ 1950ಕ್ಕೆ ಕರೆ ಮಾಡಿ ಮಾಹಿತಿ ಪಡೆಯಿರಿ ಎಂದರು.

ಇತ್ತೀಚಿನ ದಿನಗಳಲ್ಲಿ ಹಳ್ಳಿಯ ಜನರು ನಗರ ಜೀವನಕ್ಕೆ ಮಾರುಹೋಗುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಹಳ್ಳಿಯ ಜೀವನವೇ ಸುಖಕರ ಹಾಗೂ ನೆಮ್ಮದಿಯುತವಾಗಿಯೂ ಇದೆ. ಪ್ರತಿಯೊಬ್ಬ ಮನುಷ್ಯನು ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕು. ಮಾನವೀಯತೆ ಇಲ್ಲದ ಬದುಕು ವ್ಯರ್ಥ ಎಂದು ಹೇಳಿದರು.

ಮಕ್ಕಳಿಗೆ ಅತಿಯಾದ ಪ್ರೀತಿ ತೋರಿಸದೆ ಅವರನ್ನು ಸುಶಿಕ್ಷಿತ ನಾಗರಿಕರನ್ನಾಗಿ ಮಾಡುವ ಹೊಣೆ ಪೋಷಕರದ್ದಾಗಿರುತ್ತದೆ. ಸಾಮಾಜಿಕ ಜಾಲತಾಣಗಳನ್ನು ಧನಾತ್ಮಕವಾಗಿ ಬಳಸಬೇಕು. ಮಕ್ಕಳಿಗೆ ಮೊಬೈಲ್ ನೀಡಬೇಡಿ. ಸರ್ಕಾರದ ವಿವಿಧ ಸೌಲಭ್ಯಗಳ ಕುರಿತ ಮಾಹಿತಿ ಪಡೆಯಲು ಹಾಗೂ ಅರ್ಜಿ ಸಲ್ಲಿಸಲು ಯಾವುದೇ ಮಧ್ಯವರ್ತಿಯ ಬಳಿ ಹೋಗದೆ ಗ್ರಾಮ ಒನ್ ಕೇಂದ್ರಗಳಿಗೆ ಭೇಟಿ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ, ಭೂ ಒತ್ತುವರಿ ಸಮಸ್ಯೆ, ಬೀದಿ ದೀಪದ ಸಮಸ್ಯೆ, ಸಾಗುವಳಿ ಚೀಟಿ ನೀಡುವ ಬಗ್ಗೆ, ಜಮೀನು ದುರಸ್ತಿ, ಆಶ್ರಯ ಯೋಜನೆಯಡಿ ಮನೆ ನೀಡುವಂತೆ ಮನವಿ, ಮನೆ ಖಾತೆ ಮಾಡಿಕೊಡುವಂತೆ ಮನವಿ, ಜಮೀನಿಗೆ ಹೋಗುವ ದಾರಿ ಬಿಡಿಸುವಂತೆ ಸಾರ್ವಜನಿಕರು ಮನವಿ ಅರ್ಜಿಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಕವಿತಾ ರಾಜಾರಾಮ್, ಭೂ ಮಾಪನ ಇಲಾಖೆಯ ಉಪ ನಿರ್ದೇಶಕರಾದ ಮೇಘನಾ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗಿರೀಶ್, ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಗ್ರಾಮದ ಜನರು ಭಾಗವಹಿಸಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
19-03-2023



ಆತ್ಮಹತ್ಯೆ

ಸಮಸ್ಯೆಗೆ ಪರಿಹಾರವಲ್ಲ

ಸಿ.ಎಸ್.ರಾಘವೇಂದ್ರ
ಸಹಾಯಕ ಪ್ರಾಧ್ಯಾಪಕರು
ಹಿಂದೂಸ್ಥಾನ್ ಕಾಲೇಜು
ಮೊ.9036389640



ಒಂದೇ ಒಂದು ಕ್ಷಣ ಆತ ತನ್ನ ತಾಯಿ ಬಗ್ಗೆ ಯೋಚಿಸಿದ್ದರೆ ಈ ರೀತಿ ಮಾಡಿಕೊಳ್ತಾ ಇರಲಿಲ್ಲ.... ಒಬ್ಬನೇ ಮಗ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ದುಃಖಿಸುತ್ತಿದ್ದ ತಾಯಿಯನ್ನು ನೋಡಿ ಜನರಾಡುತ್ತಿದ್ದ ಮಾತಿದು.

ಪ್ರಸ್ತುತ ದಿನಗಳಲ್ಲಿ ಮುಖ್ಯವಾಗಿ ಯುವ ಜನಾಂಗಕ್ಕೆ ಸಣ್ಣ ಸಮಸ್ಯೆ ಎದುರಾದರೂ ಅವರ ಮುಂದೆ ಇರುವ ದೊಡ್ಡ ಆಯ್ಕೆ – **ಆತ್ಮಹತ್ಯೆ**. ಇತ್ತೀಚೆಗಂತೂ ಆತ್ಮಹತ್ಯೆ ಅನ್ನೋದು ಫ್ಯಾಷನ್ ಆಗಿರುವುದುಂಟಾ ಎಂಬ ಅನುಮಾನ ಬರುವಷ್ಟರ ಮಟ್ಟಿಗೆ ಸಣ್ಣಪುಟ್ಟ ಜಗಳಗಳಿಗೆ, ಮನಸ್ತಾಪಗಳಿಗೆ, ಹತಾಶೆಗಳಿಗೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗಾದರೆ ಸಾವೊಂದೇ ಅಂತಿಮ ಪರಿಹಾರನಾ ಎಂದು ಆಲೋಚಿಸಿದರೆ ಖಂಡಿತವಾಗಿಯೂ ಇಲ್ಲ. ಆತ್ಮಹತ್ಯೆ ಮಾಡಿಕೊಂಡವರ ಕುಟುಂಬ, ಹೆತ್ತವರ ನೋವು, ಸತ್ತು ಸಾಧಿಸಿದ್ದಾದರೂ ಏನು ಎಂಬ ಪ್ರಶ್ನೆಗಳೇ ತಲೆದೋರುತ್ತವೆಯೇ ಹೊರತು ಪರಿಹಾರ ದೊರೆಯಲಾರದು.

ಬದುಕು ಒಂದು ಸುಂದರ ಸ್ವಪ್ನ ಅದನ್ನು ಅನುಭವಿಸಬೇಕು. ಹುಟ್ಟು ಸಾವು ಯಾವುದು ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ಆಗಿದ್ದ ಮೇಲೆ ನಾವೇ ಆ ಸಾವನ್ನು ಕೈಬೀಸಿ ಕರೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ. ಯಾರಿಗೆ ನೋವಿಲ್ಲ, ಯಾರಿಗೆ ಸಮಸ್ಯೆ ಇಲ್ಲ, ನೋವು, ಸಮಸ್ಯೆಗಳಿಲ್ಲದ ಮನುಷ್ಯರೇ ಇಲ್ಲ. ಆನೆಗೆ ಆನೆ ಭಾರ, ಇರುವೆಗೆ ಇರುವೆ ಭಾರ ಎಂಬ ನಾಣ್ನುಡಿಯಂತೆ ಅವರವರ ಸಮಸ್ಯೆಗಳು ಅವರವರಿಗೆ ಹೆಚ್ಚು ಎಂದೆನಿಸುತ್ತದೆ. ಆದರೆ ಸಮಸ್ಯೆಗಳು ಹೆಚ್ಚು ಎಂದು ಎಲ್ಲರೂ ಆತ್ಮಹತ್ಯೆಯ ದಾರಿಯನ್ನು ಹಿಡಿಯಲು ಸಾಧ್ಯವೇ, ಆತ್ಮಹತ್ಯೆ ಸಮಸ್ಯೆಗಳಿಗೆಲ್ಲಾ ಪರಿಹಾರವೇ ಎಂದೇಕೆ ಯೋಚಿಸುವುದಿಲ್ಲ. ಇಷ್ಟಕ್ಕೂ ಆತ್ಮಹತ್ಯೆ ಮಾಡಿಕೊಂಡವರು ಆತ್ಮಹತ್ಯೆಗೆ ಕೊಟ್ಟಿರುವ ಕಾರಣಗಳಾದರೂ ಏನು?

1. ಪ್ರೀತಿ
2. ಸಾಲ
3. ಭಯ

■ **ಮೊದಲ ಕಾರಣ–ಪ್ರೀತಿ:** ಹೆಚ್ಚು ಆತ್ಮಹತ್ಯೆಯ ಪ್ರಕರಣಗಳಲ್ಲಿ ಕಂಡ ಅಂಶ ಪ್ರೀತಿ. ಅವಳು ನನಗೆ ಸಿಗಲಿಲ್ಲ, ಅವಳಿಗೆ ಬೇರೆ ಮದುವೆ ಆಯಿತು, ನನ್ನ ಹುಡುಗ ಮೋಸ ಮಾಡಿದ, ನನ್ನ ಹುಡುಗಿ ಮೋಸ ಮಾಡಿದಳು ಎಂದೆಲ್ಲಾ ಕಾರಣಗಳನ್ನು ನೀಡಿ ಆತ್ಮಹತ್ಯೆ ಮಾಡಿಕೊಂಡವರು ಇತ್ತೀಚೆಗೆ ಹೆಚ್ಚಾಗುತ್ತಿದ್ದಾರೆ. ಇಲ್ಲಿ ಅರ್ಥವಾಗದ ಒಂದು ವಿಷಯ ಅಂದರೆ ಇವರುಗಳಿಗೆ ಹದಿನೆಂಟು, ಇಪ್ಪತ್ತು ವರ್ಷ ಇವರನ್ನು ಸಾಕಿ ಬೆಳೆಸಿದ, ತಮ್ಮ ನೋವುಗಳೇನೆ ಇದ್ದರೂ ಅದನ್ನು ತೋರ್ಪಡಿಸದೆ ಮಕ್ಕಳ ಬದುಕಿಗೆ ನೆಲೆಯನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟಿರುವ ತಂದೆ–ತಾಯಂದಿರ ಪ್ರೀತಿ ಯಾಕೆ ಅರ್ಥವಾಗಲಾರದು. ಅದು ಕೂಡ ಪ್ರೀತಿನೇ ತಾನೇ. ಯಾಕೆ ಈ ಪ್ರೀತಿ ಅವರಿಗೆ ಅರ್ಥವಾಗಲಾರದು. ಹಾಗಿದ್ದರೆ ಪ್ರೀತಿಸೋದು ತಪ್ಪಾ ಎಂದು ಯಾರಾದರೂ ಪ್ರಶ್ನಿಸಿದರೆ ಇಲ್ಲ ಖಂಡಿತವಾಗಿಯೂ ಇಲ್ಲ. ಪ್ರೀತಿಸೋದು ತಪ್ಪಲ್ಲ, ಆದರೆ ಆ ಪ್ರೀತಿ ನಿಷ್ಕಲ್ಮಶವಾಗಿದ್ದರೆ ಮನೆಯವರನ್ನು ಒಪ್ಪಿಸಿ ಮದುವೆಯಾಗಬಹುದಲ್ಲ. ನಿಮ್ಮ ಪ್ರೀತಿ ಮೇಲೆ ನಿಮಗೆ ನಂಬಿಕೆ ಇಲ್ಲ ಅಂದ ಮೇಲೆ ನಿಮ್ಮ ಹೆತ್ತವರಿಗೆ ನಂಬಿಕೆ ಹೇಗೆ ಬರಲು ಸಾಧ್ಯ. ಇನ್ನೂ ಕೆಲವರಿಗೆ ನಾನು ಸತ್ತರೆ ನನ್ನ ಪ್ರೀತಿ ಅವನಿಗೆ, ಅವಳಿಗೆ ಅರ್ಥವಾಗುತ್ತದೆ ಅನ್ನುವ ಹುಚ್ಚು ಇರುತ್ತದೆ. ಇದಕ್ಕಿಂತ ದೊಡ್ಡ ಮತಿಭ್ರಮೆ ಮತ್ತೊಂದು ಇರಲಾರದು. ನಿಜವಾದ ಪ್ರೀತಿ ಯಾವತ್ತೂ ಯಾರಿಗೂ ಕೇಡನ್ನು ಬಯಸುವುದಿಲ್ಲ. ಪ್ರೀತಿ ಹೆಸರಲ್ಲಿ ಯಾರಾದರೂ ಜೀವವನ್ನು ಕಳೆದುಕೊಂಡರೆ ಖಂಡಿತವಾಗಿಯೂ ಅದು ಅವರ ತಪ್ಪಷ್ಟೇ ಆಗಿರುತ್ತದೆ.

■ **ಎರಡನೇ ಅತಿ ಮುಖ್ಯ ಕಾರಣ–ಸಾಲ:** ನಿಜ, ನಾವು ನಮಗಾಗಿ ಬದುಕಿದರೆ, ಹಾಸಿಗೆ ಇದ್ದಷ್ಟು ಕಾಲು ಚಾಚೂ ಗಾದೆಯನ್ನರಿತು ಬಾಳಿದರೆ ನಮ್ಮ ಇತಿಮಿತಿ ನಮಗೆ ತಿಳಿದಿರುತ್ತದೆ. ಅದನ್ನು ಬಿಟ್ಟು ಅವರ ಹಾಗೆ ನಾವು ಇರಬೇಕು, ಅವರ ಸರಿಸಮಕ್ಕೆ ನಾವು ಇರಬೇಕು ಎಂದೆಲ್ಲಾ ಯೋಚಿಸಿ ಸಾಲವನ್ನು ಮಾಡಿ ಕೊನೆಗೆ ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡರೆ ಸಾಲ ತೀರಿ ಹೋಗುತ್ತದೆಯೇ. ಖಂಡಿತವಾಗಿ ಇಲ್ಲ. ಅವರ ಮನೆಯವರ ಮೇಲೆ ಆ ಸಾಲದ ಹೊರೆ ಬೀಳುತ್ತದೆ ಇದರರ್ಥ ಸಾಲ ಮಾಡಿಲ್ಲ, ಮಾಡಬಾರದು, ನಾವು ಬೆಳೆಯಬಾರದು ಅಂತ ಏನೂ ಅಲ್ಲ. ಆದರೆ ನಮ್ಮ ಇತಿಮಿತಿಯನ್ನು ನೋಡಿಕೊಂಡು ಅವಶ್ಯಕತೆಗೆ ತಕ್ಕಂತೆ ಬದುಕು ಸಾಗಿಸಿಕೊಂಡು ಹೋದರೆ ಉತ್ತಮ. ನಾನು ನನಗಾಗಿ ಬದುಕಿದರೆ ಹತ್ತು ಸಾವಿರದಲ್ಲಿ ಬದುಕಬಲ್ಲೆ! ಇನ್ನೊಬ್ಬರಿಗೆ ಹೋಲಿಸಿಕೊಂಡು ಅವರ ಹಾಗೆ ನಾನಿರಬೇಕು ಎಂದುಕೊಂಡರೆ ಹತ್ತು ಸಾವಿರ ಅಲ್ಲ ಒಂದು ಲಕ್ಷ ಬಂದರೂ ಅದು ಸಾಲದಾಗುತ್ತದೆ!

ಓಹ್ ಇದೆಲ್ಲಾ ಕೇಳೋಕೆ, ಓದೋಕೆ ಚೆಂದ ಪಾಲಿಸೋಕೆ ಕಷ್ಟ! ಎಂದು ಟೀಕಿಸುವವರೆಲ್ಲಾ ಹತ್ತು ವರ್ಷದ ಹಿಂದಕ್ಕೆ ಹೋಗಿ. ಆಗ ಮೊಬೈಲ್ ಬಳಕೆ ಈಗಿನಷ್ಟು ಇತ್ತೇ. ಮೊಬೈಲ್ ಇಲ್ಲದೇ ಬದುಕೇ ಇಲ್ಲ ಎಂಬುವಷ್ಟರ ಮಟ್ಟಿಗೆ ಇಂದು ತಲುಪಿದ್ದೇವೆ.

ಯೋಚಿಸಿ ಮೊಬೈಲ್ ಇಲ್ಲದಾಗ, ಅಂತರ್ಜಾಲ ಇಲ್ಲದಾಗ ವಿಷಯಗಳನ್ನು ಓದಿ, ಜ್ಞಾನ ಸಂಪಾದನೆ ಮಾಡಿರಲಿಲ್ಲವೇ? ಹಾಗೇನೇ ಅವಶ್ಯಕತೆ, ಅನಿವಾರ್ಯತೆ ಬದುಕಿನಲ್ಲಿ ಎಲ್ಲಾ ಕಾಲಘಟ್ಟದಲ್ಲಿ ಕೇಳಿಕೊಳ್ಳಬೇಕಾದ ಪ್ರಶ್ನೆಗಳು! ಸಾಲ ಅಗತ್ಯಕ್ಕೆ ಇದ್ದರೆ ಚೆಂದ, ಸಾಲವೇ ಅನಿವಾರ್ಯವೆಂದು ತೀರ್ಮಾನವಾದರೆ ಕಷ್ಟ!! ಗಾದೆ ಹೇಳೊಕೆ, ಕೇಳೊಕೆ ಮಾತ್ರ ಇರುವುದಲ್ಲ, ಅದನ್ನು ಪಾಲಿಸಿದರೆ ಗಾದೆಗಳು ಜೀವನಕ್ಕೊಂದು ದಾರಿದೀಪವಾಗುತ್ತದೆ.

■ **ಮೂರನೇ ಕಾರಣ–ಭಯ:** ಬಹಳಷ್ಟು ಆತ್ಮಹತ್ಯೆಯ ಪ್ರಕರಣಗಳಲ್ಲಿ ಕಂಡುಬರುವ ಅತೀ ಮುಖ್ಯ ಅಂಶ ಭಯ. ಅಂಕಗಳು ಕಡಿಮೆಯಾಯಿತೆಂದು ಅಪ್ಪ ನಾನು 95% ತೆಗೆದುಕೊಳ್ತಾ ಇದ್ದೆ. ಆದರೆ ಈ ಪರೀಕ್ಷೆಯಲ್ಲಿ ಹೆಚ್ಚು ಅಂಕ ತೆಗೆದುಕೊಳ್ಳಲಾಗಲಿಲ್ಲ, ಕ್ಷಮಿಸು ಎಂದು ಕಾಗದ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ ಹದಿಹರೆಯದ ಹುಡುಗಿ. ಸುದ್ದಿ ಓದಿ ಒಂದು ಕ್ಷಣ ಅಯ್ಯೋ ಇದಕ್ಕೆಲ್ಲಾ ಸಾವೊಂದು ಪರಿಹಾರನಾ ಅಂತ ಅನಿಸಿತು. ನಿಜ, ಅಂಕಗಳು ಬೇಕು, ಆದರೆ ಅಂಕಗಳೊಂದೇ ಜೀವನವಲ್ಲ. ಪರೀಕ್ಷೆಯಲ್ಲಿ ಕಡಿಮೆ ಅಂಕ ತೆಗೆದುಕೊಂಡವರು, ಅನುತ್ತೀರ್ಣರಾದವರೆಲ್ಲಾ ಉತ್ತಮ ಜೀವನವನ್ನು ನಡೆಸುತ್ತಿರುವ ಎಷ್ಟೋ ಉದಾಹರಣೆಗಳು ನಮ್ಮ ಕಣ್ಮುಂದೆ ಇರುವಾಗ ಆತ್ಮಹತ್ಯೆಯ ದಾರಿ ಹಿಡಿಯುವುದು ಎಷ್ಟರಮಟ್ಟಿಗೆ

ಸರಿ? ಅಂಕ ಕಡಿಮೆಯಾಗುವುದೆಂಬ ಭಯ, ಅನುತ್ತೀರ್ಣನಾದನೆಂಬ ಭಯ, ಕೆಲಸ ಸಿಗದೆಂಬ ಭಯ, ಸರ್ಕಾರಿ ಕೆಲಸ ಕೈ ಅಂಚಿನಲ್ಲಿ ಕಳೆದುಕೊಂಡೆನೆಂಬ ಭಯ, ನಾನು ಒಂಟಿ ನನಗ್ಯಾರು ಇಲ್ಲ ಎಂಬ ಭಯ, ಇರುವ ಕೆಲಸ ಕಳೆದುಕೊಂಡರೆ ಏನು ಮಾಡೋದು ಎಂಬ ಭಯ... ಹೀಗೆ ಪಟ್ಟಿ ಮಾಡುತ್ತಾ ಹೋದರೆ ಭಯದ ಕಾರಣಗಳ ದೊಡ್ಡ ಪುಸ್ತಕವೇ ತಯಾರಾಗಬಹುದು. ಭಯ ಮನುಷ್ಯನ ಮೊದಲ ಶತ್ರು ಎಲ್ಲೋ ಕೇಳಿದ ಮಾತೊಂದು ನೆನಪಿಗೆ ಬರುತ್ತಿದೆ. ಯಶಸ್ಸು ಎಲ್ಲಿದೆ, ಅದು ಭಯದ ಹಿಂದೆ ಅಡಗಿದೆ. ಭಯವನ್ನು ಹಿಂದೆ ಸರಿಸಿ ನಿಂತರೆ ಯಶಸ್ಸು ಮುಂದೆ ಬರುತ್ತದೆ. ಸಾಕಷ್ಟು ಸಮಯಗಳಲ್ಲಿ ಈ ಭಯವೇ ಆತ್ಮಹತ್ಯೆಗೆ ಕಾರಣವಾಗಿರುತ್ತದೆ. ಭಯವನ್ನು ಮೀರಿ ನಿಲ್ಲುವ... ಯಶಸ್ಸನ್ನು ಸಾಧಿಸುವ ಛಲ ಬರುತ್ತದೆ.

ಇವಿಷ್ಟೇ ಅಲ್ಲ ಇನ್ನೂ ಸಣ್ಣ, ಸಣ್ಣ ಕಾರಣಗಳನ್ನು ನೀಡಿ ಆತ್ಮಹತ್ಯೆಯನ್ನು ಮಾಡಿಕೊಂಡವರ ಸಂಖ್ಯೆ ಏನೂ ಕಡಿಮೆಯಿಲ್ಲ. ಜೀವನ ಏನೇ ಬಂದರೂ ಎದುರಿಸಲು ಇರುವಂತದ್ದು. ಹುಟ್ಟು ನಮ್ಮ ಕೈಯ್ಯಲ್ಲಿ ಇಲ್ಲ, ಹಾಗೆಯೇ ಸಾವು ಕೂಡ ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ಇದನ್ನು ಹೇಳುವಾಗ ನನಗೆ ಹಿಂದೊಮ್ಮೆ ಕೇಳಿದ ಕಥೆಯೊಂದು ನೆನಪಿಗೆ ಬರುತ್ತದೆ.

■ **ಏನಿದು ಕಥೆ!:** ಒಮ್ಮೆ ಕೈಲಾಸದಲ್ಲಿ ದೇವತೆಗಳ ಸಭೆ ಸೇರಿರುತ್ತದೆ. ಆ ಸಭೆಗೆ ಎಲ್ಲಾ ದೇವತೆಗಳು ತಮ್ಮ ತಮ್ಮ ವಾಹನಗಳಲ್ಲಿ ಬರುತ್ತಾರೆ. ಅದರಂತೆ ಷಣ್ಮುಖ ನವಿಲಿನ ಮೂಲಕ... ಗಣೇಶ ಇಲಿಯ ಮೂಲಕ, ಹೀಗೆ ಪ್ರತಿಯೊಬ್ಬ ದೇವತೆಗಳು ತಮ್ಮ ತಮ್ಮ ವಾಹನಗಳ ಮೂಲಕ ಬಂದಿಳಿದು ತಮ್ಮ ವಾಹನಗಳ ಹೊರಗೆ ಬಿಟ್ಟು ಕೈಲಾಸದೊಳಗೆ ನಡೆಯುವ ಸಭೆಗೆ ಹೋಗುತ್ತಾರೆ. ಈ ವೇಳೆ ಯಮ ಧರ್ಮರಾಯ ತನ್ನ ವಾಹನವಾದ ಕೋಣನ ಮೇಲೆ ಬಂದು ನಿಲ್ಲುತ್ತಾನೆ. ಆಗ ಅಲ್ಲೇ ಮರದ ಮೇಲೆ ಇದ್ದ ಪುಟ್ಟ ಪಾರಿವಾಳವನ್ನು ಯಮ ನೋಡುತ್ತಾನೆ. ಒಂದು ಕ್ಷಣ ನೋಡಿ, ನಕ್ಕು ಕೈಲಾಸದೊಳಗೆ ನಡೆಯುತ್ತಲಿದ್ದ ಸಭೆಗೆ ಹೋಗುತ್ತಾನೆ.ತನ್ನನ್ನು ನೋಡಿ ಯಮ ನಕ್ಕಿದ್ದನ್ನು ನೋಡಿದ ಆ ಪಾರಿವಾಳ ತನಗಿನ್ನೂ ಉಳಿಗಾಲ ಇಲ್ಲವೆಂದು ತಿಳಿದು ಅಳುತ್ತಾ ಇರುತ್ತದೆ. ಕೈಲಾಸದ ಹೊರಗೆ ನಿಂತಿದ್ದ ದೇವತೆಗಳ ವಾಹನಗಳ ಪಕ್ಷಿಗಳೆಲ್ಲಾ ಆ ಪಾರಿವಾಳದ ದುಃಖವನ್ನು ಕೇಳಿ ಒಂದು ತೀರ್ಮಾನ ಮಾಡುತ್ತವೆ. ಯಮ ನೀನು ಇಲ್ಲಿ ಇದ್ದರೆ ತಾನೇ ಸಾಯಿಸೋದು, ನೀನು ಈಗಲೇ ಹಿಮಾಲಯದ ಕಡೆಗೆ ಹೋಗು ಎಂದು ಹೇಳಿ ಗರುಡನ ಮೂಲಕ ಆ ಪಾರಿವಾಳವನ್ನು ಹಿಮಾಲಯಕ್ಕೆ ಕಳುಹಿಸುತ್ತಾರೆ. ಆ ಗರುಡ ಸಹ ತುಂಬಾ ಬೇಗನೇ ಹಾರಿಕೊಂಡು ಹಿಮಾಲಯವನ್ನು ತಲುಪಿ ಆ ಪಾರಿವಾಳವನ್ನು ಅಲ್ಲಿ ಬಿಟ್ಟು, ಮತ್ತೆ ಕೈಲಾಸದ ಹತ್ತಿರ ಬಂದು ನಿಲ್ಲುತ್ತದೆ. ಕೈಲಾಸದಲ್ಲಿ ಸಭೆ ಮುಗಿದ ಬಳಿಕ ಯಮ ಬಂದು ಮರದ ಕಡೆಗೆ ನೋಡಲಾಗಿ ಅಲ್ಲಿ ಆ ಪಾರಿವಾಳ ಇಲ್ಲದ್ದನ್ನು ನೋಡಿ ಆಶ್ಚರ್ಯಕರವಾಗಿ ಅಲ್ಲಿದ್ದ ಪಕ್ಷಿಗಳನ್ನು ಕೇಳುತ್ತಾನೆ. ಇಲ್ಲಿದ್ದ ಪಾರಿವಾಳ ಎಲ್ಲಿ ಹೋಯಿತು ಎಂದು. ಅದಕ್ಕೆ ಉತ್ತರವಾಗಿ ಗರುಡ ಇರುವ ವಿಷಯವನ್ನು ಹೇಳುತ್ತದೆ – ನಿಮ್ಮಿಂದ ರಕ್ಷಿಸಲು ಆ ಪಾರಿವಾಳವನ್ನು ಹಿಮಾಲಯಕ್ಕೆ ಬಿಟ್ಟು ಬಂದಿರುವುದಾಗಿ ಹೇಳಿದಾಗ, ಯಮ ಮತ್ತೊಮ್ಮೆ ನಗುತ್ತಾನೆ. ಯಮ ಕೋಪಗೊಳ್ಳದೆ ನಗುತ್ತಾ ಇದ್ದದ್ದನ್ನು ನೋಡಿ ಈ ನಗುವಿಗೆ ಕಾರಣ ಏನೆಂದು ಗರುಡ ಕೇಳಿದಾಗ, ಏನಿಲ್ಲ ನಾನು ಸಭೆಗೆ ಹೋಗುವಾಗ ಆ ಪಾರಿವಾಳವನ್ನು ನೋಡಿದೆ. ಈ ಪಾರಿವಾಳದ ಸಾವು ಸ್ವಲ್ಪ ಹೊತ್ತಿನಲ್ಲಿ ದೂರದ ಹಿಮಾಲಯದಲ್ಲಿ ಎಂದಿತ್ತು. ಆಗ ನನಗೆ ಈ ಪಾರಿವಾಳ ಎಲ್ಲಿ, ದೂರದ ಹಿಮಾಲಯ ಎಲ್ಲಿ, ಇದು ಅಲ್ಲಿಗೆ ಹೇಗೆ ಸ್ವಲ್ಪ ಹೊತ್ತಿಗೆ ಹೋಗಲು ಸಾಧ್ಯ ಎಂದು ವಿಧಿಯನ್ನು ನೆನೆದು ನಕ್ಕು ಒಳಹೋಗಿದ್ದಾಗಿ ತಿಳಿಸಿದನು. ಆದರೆ ವಿಧಿಲಿಖಿತ ಆ ಪಾರಿವಾಳದ ಸಾವು ಆ ವಿಧಿಯಾಟದಂತೆ ಆಯಿತು.

ಈ ಕಥೆಯ ಸತ್ಯ–ಅಸತ್ಯತೆಗಿಂತ ವಿಧಿಯಾಟದ ಮುಂದೆ ಯಾರೂ ಕೂಡ ನಿಲ್ಲಲಾಗದು ಎಂಬ ಕಠೋರವಾದ ಕಹಿಸತ್ಯವೊಂದು ಅಡಗಿದೆ.

ಸಾವಿಲ್ಲದ ಸಾಸಿವೆಯ ಮನೆಯೂ ಇಲ್ಲ, ಸಮಸ್ಯೆಗಳಿಲ್ಲದ ಮನುಷ್ಯನು ಇಲ್ಲ. ಆಗಿದ್ದ ಮೇಲೆ ಯಾಕೆ ಅಂತಹ ಸಾವನ್ನು ಕೈ ಬೀಸಿ ಕರೆದು ಅಪ್ಪಿಕೊಂಡು ಅದನ್ನು ಸೆಳೆಯಬೇಕು. ಇಂದು ನಾವು ಬದುಕುತ್ತಿರುವ ಜೀವನ ಎಷ್ಟೋ ಜನರಿಗೆ ದಾರಿದೀಪವಾಗಬಲ್ಲದು.ಅಂತಹ ಬದುಕನ್ನು ಕಳೆದುಕೊಂಡು ಬಾಳುವುದು ಎಷ್ಟರ ಮಟ್ಟಿಗೆ ಸರಿ. ಸಣ್ಣ ವಿಚಾರಗಳಿಗೆ, ಚಿಕ್ಕ ಸಮಸ್ಯೆಗಳಿಗೆ ಆತ್ಮಹತ್ಯೆಯ ಮಾರ್ಗವನ್ನು ಹಿಡಿಯುವಂತಹ ಜನರಿಗೆ ನಮ್ಮ ಕನ್ನಡ ಸಾಹಿತಿಗಳ ಬದುಕಿನ ಚಿತ್ರಣ ತಿಳಿಸುವ ಅಗತ್ಯವಿದೆ.

■ **ಘಟನೆ ಒಂದು:** ಮೊದಲಿಗೆ ಬೇಂದ್ರೆ ಅವರ ಬದುಕಿನ ಚಿತ್ರಣ ನೆನಪಾಗುತ್ತದೆ. ಬೇಂದ್ರೆ ಅವರಿಗೆ ಒಟ್ಟು ಒಂಬತ್ತು ಮಕ್ಕಳು, ಆದರೆ ಅದರಲ್ಲಿ ಬದುಕಿ ಉಳಿದದ್ದು ಕೇವಲ ಮೂವರು ಮಾತ್ರ. ಒಮ್ಮೆ ಮಗುವಿಗೆ ವಿಪರೀತವಾಗಿ ಜ್ವರ ಬಂದಿರುತ್ತದೆ. ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹಣವಿಲ್ಲ, ಹೊರಗೆ ಹೋಗಿ ಔಷಧಿಯನ್ನಾದರೂ ತನ್ನಿ ಎಂದ ಮಡದಿಯ ಮಾತನ್ನು ಕೇಳಿ ಒಲ್ಲದ ಮನಸ್ಸಿನಿಂದ ಹೊರಗೆ ಹೋಗಿ ಬರುವಷ್ಟರಲ್ಲಿ ಮಗು ತೀರಿಕೊಂಡಿರುತ್ತದೆ. ಅಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಬೇಂದ್ರೆ ಅವರು ವಿಚಲಿತರಾಗಲಿಲ್ಲ. ಬದುಕನ್ನು ಅದು ಇರುವಂತೆಯೇ ಸ್ವೀಕರಿಸಿದರು. 'ಬಡತನ ಸಿರಿತನ ಕಡೇತನಕ ಉಳಿದಾವೇನ' ಎಂದು ಬಡತನವನ್ನು ಸ್ವೀಕರಿಸಿ ಬಾಳಿದರು.


■ **ಘಟನೆ–ಎರಡು :** ಡಿವಿಜಿ ಆಧುನಿಕ ಸರ್ವಜ್ಞ ಎಂದೇ ಪ್ರಸಿದ್ಧರಾದವರು. ಒಮ್ಮೆ ಡಿವಿಜಿ ಅವರ ಆತ್ಮೀಯರೊಬ್ಬರ ಮದುವೆ ಇತ್ತು.ತಾವು ಮದುವೆಗೆ ಹೋಗಲೂ ಸಾಧ್ಯವಿಲ್ಲ, ನೀನು ಹೋಗಿ ಬಾ ಎಂದು ತಮ್ಮ ಮಡದಿಗೆ ಹೇಳಿದ್ದರು. ಆದರೆ ಸಂಜೆ ಮರಳಿ ಡಿವಿಜಿ ಅವರು ಮನೆಗೆ ಬಂದಾಗ ಅವರ ಮಡದಿ ಮನೆಯಲ್ಲಿಯೇ ಉಳಿದಿದ್ದರು. ಡಿವಿಜಿ ಅವರಿಗೆ ಆ ಕ್ಷಣಕ್ಕೆ ತುಂಬಾ ಕೋಪ ಬರುತ್ತದೆ. ನಾನು ಅಷ್ಟು ಹೇಳಿದರೂ ಮದುವೆಗೆ ಹೋಗಲಿಲ್ಲವೇಕೆ ಎಂದು ಪ್ರಶ್ನಿಸಿದಾಗ ಅವರ ಮಡದಿ ಶಾಂತ ರೀತಿಯಲ್ಲಿಯೇ ಉತ್ತರಿಸಿದರು. ಇರುವುದು ಎರಡೇ ಜೊತೆ ಸೀರೆ ಅದು ಕೂಡ ಹರಿದಿದೆ, ಇದನ್ನು ಉಟ್ಟುಕೊಂಡು ಹೋಗಿ ನಮ್ಮ ಬಡತನವನ್ನು ಊರಿಗೆ ಸಾರುವುದೇಕೇ ಅಂತ ಅಂದ್ರಂತೆ. ತಕ್ಷಣವೇ ಡಿವಿಜಿ ಅವರಿಗೆ ವಾಸ್ತವ ಅರಿವಾದಂತಾಗಿ ಸುಮ್ಮನಾದರಂತೆ. ನೋಡಿ ಪ್ರಸ್ತುತ ಎಷ್ಟು ಸೀರೆಗಳು, ವಿವಿಧ ಬಗೆಯ ಬಟ್ಟೆಗಳು (ಬರಿ ಹೆಂಗಸರಷ್ಟೇ ಅಲ್ಲ , ಗಂಡಸರು ಕೂಡ ಇದಕ್ಕೆ ಹೊರತಲ್ಲ. ಎಷ್ಟೇ ಉಡುಪುಗಳಿದ್ದರೂ ಇನ್ನೂ ಬೇಕು ಎಂಬುವವರಿಗೇನು ಕಡಿಮೆ ಇಲ್ಲ. ಮೊದಲೆಲ್ಲಾ ಬಟ್ಟೆ ಹರಿದುಕೊಂಡಿದ್ದರೆ ಬಡತನ ಅಂತ ಅಂದುಕೊಂಡಿದ್ದರು ಆದರೆ ಈಗ ಹರಿದ ಬಟ್ಟೆಗಳಿಗೆ ಹೆಚ್ಚು ಹಣ ಕೊಟ್ಟು ಬಟ್ಟೆ ಖರೀದಿಸುತ್ತೇವೆ. ಹರಿದ ಬಟ್ಟೆಗೆ ಬೆಲೆ ಇದೆ ಎಂದ ಮೇಲೆ ಈ ಸುಂದರ ಬದುಕಿಗೆ ಬೆಲೆ ಇರುವುದಿಲ್ಲವಾ?) ಇದ್ದರೂ ಇದು ಸಾಕಾಗೊಲ್ಲ, ಇದಕ್ಕೆ ಮ್ಯಾಚಿಂಗ್ ಇಲ್ಲ ಎಂದು ನೆಪ ಹೇಳುವ ನಾವೆಲ್ಲಿ! ಬಡತನದಲ್ಲೇ ಇದ್ದರೂ ಅದು ಜನರಿಗೆ ತಿಳಿಯಬಾರದೆಂದು ಮದುವೆಗೆ ಹೋಗದೆ ಇದ್ದ ಡಿವಿಜಿ ಅವರ ಮಡದಿಯೆಲ್ಲಿ !

■ **ಘಟನೆ–ಮೂರು:** ಜಿ.ಪಿ.ರಾಜರತ್ನಂ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಪ್ರತಿಭೆಯಿಂದ ಪ್ರಸಿದ್ಧರಾದ ಕವಿಗಳು. ಅವರು ನಾಯಿಮರಿ ನಾಯಿಮರಿ ತಿಂಡಿ ಬೇಕೆ, ಬಣ್ಣದ ತಗಡಿನ ತುತ್ತೂರಿ ಪದ್ಯಗಳನ್ನು ಬರೆದು ಪ್ರಸಿದ್ಧರಾದ ದಿನಗಳವು. ಆದರೂ ಅವರಿಗೆ ಜೀವನ ಸಾಗಿಸಲು ಸ್ಥಿರವಾದ ಉದ್ಯೋಗ ಸಿಗದಿದ್ದಾಗ ಬೆಂಗಳೂರಿನ ಜನಗಣತಿ ಕಚೇರಿಯಲ್ಲಿ ಸಾರ್ಟರ್ ಹುದ್ದೆಗೆ ಪ್ರಯತ್ನಿಸಿದರು. ಆಗ ಅಲ್ಲಿಯೇ ಅಧಿಕಾರಿಯಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಜಿ.ಪಿ.ರಾಜರತ್ನಂ ಅವರನ್ನು ಗುರುತಿಸಿ ನೀವು ರಾಜರತ್ನಂ ಅಲ್ವಾ! ಇದೇನು ಇಲ್ಲಿ ಕೆಲಸ ಎಂದು ಪ್ರಶ್ನಿಸಿದಾಗ ಜೀವನ ನಡೆಸಬೇಕಲ್ಲ ಸ್ವಾಮಿ! ಎಂದು ರಾಜರತ್ನಂ ಉತ್ತರ ನೀಡಿದರಂತೆ. ಆಗ ಮಾಸ್ತಿ ಅವರೆ ನೀವು ಸಾಹಿತ್ಯ ಚಟುವಟಿಕೆಯನ್ನು ಮುಂದುವರಿಸಿ, ಅದಕ್ಕೆ ನಾನು ಸಹಾಯ ಮಾಡುವೆನೆಂದಾಗ ಜಿ.ಪಿ.ರಾಜರತ್ನಂ ಒಪ್ಪಿಕೊಂಡು ಮುಂದೆ ಬೌದ್ಧ ಸಾಹಿತ್ಯದ ಬಗೆಗೆ ಕೆಲಸ ಮಾಡಿದರು.ಇದರಿಂದ ಆದ ಅನುಕೂಲ ಕನ್ನಡಕ್ಕೆ ಬೌದ್ಧ ಸಾಹಿತ್ಯದ ಪರಿಚಯ ಹಾಗೂ ಕನ್ನಡಕ್ಕೆ ಇನ್ನೂ ಹೆಚ್ಚೆಚ್ಚು ಸಾಹಿತ್ಯವನ್ನು ಕೊಟ್ಟ ಸಾಹಿತಿ ರಾಜರತ್ನಂ ಅವರು ಸಿಕ್ಕಂತಾಯಿತು.

ಈ ಮೂರು ಘಟನೆಗಳಷ್ಟೇ ಅಲ್ಲ, ಹುಡುಕಿದರೆ ಇನ್ನೂ ಹಲವಾರು ಸಾಹಿತಿಗಳ, ಮಹಾನ್ ವ್ಯಕ್ತಿಗಳ ಜೀವನದ ಕಷ್ಟಗಳ ಮುಂದೆ ನಮ್ಮ ಕಷ್ಟಗಳು ತೃಣವೆಂಬಂತೆ ಭಾಸವಾಗುತ್ತವೆ. ನಾವು ನಮಗಾಗಿ ಬದುಕಬೇಕು. ಇನ್ನೊಬ್ಬರನ್ನು ನೋಡಿ ಅವರಂತೆ ನಾವಾಗಬೇಕೆಂದು ಬಾಳದೆ, ಮುಖ್ಯವಾಗಿ ಜನರ ಮಾತಿಗೆ ಕಿವಿಗೊಡದೆ ಬದುಕುವುದನ್ನು ಕಲಿಯಬೇಕು.

ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಮನಸ್ಥಿತಿ ಉಳ್ಳವರು ಒಂದೇ ಒಂದು ಕ್ಷಣ ನಿಮ್ಮ ಮನೆಯವರನ್ನು, ನಿಮ್ಮ ಕುಟುಂಬವನ್ನು ನಿಮ್ಮ ಕಣ್ಮುಂದೆ ನೆನಪಿಸಿಕೊಳ್ಳಿ ಸಾಕು, ಅವರ ಮುಂದಿನ ಜೀವನವನ್ನು ನೆನಪಿಸಿಕೊಳ್ಳಿ ಸಾಕು !!! ಆಗ ಎಂದಿಗೂ ಆತ್ಮಹತ್ಯೆಯ ಗುಂಗು ನಿಮ್ಮತ್ತ ಸುಳಿಯಲಾರದು.

"ಸಾವಿಗೆ ಸಾವಿರ ದಾರಿಗಳು
ಬದುಕಿಗೆ ಇರುವುದು ಒಂದೇ ದಾರಿ
ಅದು ಬದುಕುವ ದಾರಿ...."







ವಾರಭವಿಷ್ಯ

19.3.2023 ರಿಂದ 25.3.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮೀನ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ಮಿಥುನ, ಬುಧ–ಮೀನ, ಗುರು–ಮೀನ, ಶುಕ್ರ–ಮೇಷ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭಕ್ಕೆ ನಿರೀಕ್ಷಿತ ಹಣ ಕೈಗೆ ಬರುವುದು. ಬಂಧು ಬಳಗದವರ ಮಿಲನದಿಂದ ಮನಃ ಸಂತೋಷ. ಹೊಸ ಉಡುಗೆ ತೊಡುಗೆಗಳನ್ನು ಕೊಳ್ಳುವಿರಿ. ಪ್ರಮುಖ ಕೆಲಸಗಳು ನಿಧಾನ ಗತಿಯಲ್ಲಿ ಸಾಗಿದರೂ ಗುರಿ ತಲುಪುವುದು. ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳುವರು. ಸಹೋದರರಲ್ಲಿ ಭಿನ್ನಾಪ್ರಾಯಗಳು ಉಂಟಾಗುವುದು. ಪತಿ–ಪತ್ನಿಯರು ಅನ್ಯೋನ್ಯತೆಯಿಂದ ಇದ್ದರೆ ಮನೆಯೇ ಮಂತ್ರಾಲಯ.

ಶ್ರೀ ಗಣಪತಿ ದರ್ಶನ. ಶುಭ ಸಂಖ್ಯೆ–5.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಯತ್ನ ಕಾರ್ಯಗಳಲ್ಲಿ ವಿಜಯವನ್ನು ಹೊಂದುವಿರಿ. ಮಿತ್ರ ಜನರ ಸಲಹೆಗಳಿಂದ ಸಮಸ್ಯೆಗಳ ನಿವಾರಣೆ. ಧನಾದಾಯ ಚೆನ್ನಾಗಿರುತ್ತದೆ. ಉತ್ತಮ ಕಾರ್ಯಗಳಿಗೆ ಬಳಸಿಕೊಳ್ಳಿ. ಋಣ ಬಾಧೆಗಳನ್ನು ತೀರಿಸಿಕೊಳ್ಳಿ. ಗುರುಬಲದ ಫಲವಾಗಿ ಹಲವರಿಗೆ ಮಧುಚಂದ್ರಕ್ಕೆ ತೆರಳುವ ಸುಯೋಗವಿದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರು ಶುಭ ವಾರ್ತೆ ನಿರೀಕ್ಷಿಸಬಹುದು. ಅಶುಭ ರಾಹು ದುಷ್ಟ ಜನರ ಸಹವಾಸದಿಂದ ತೊಂದರೆ.

ಶ್ರೀದೇವಿ ಪೂಜೆ. ಶುಭ ಸಂಖ್ಯೆ–4.



ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

'ಸಮಯಕ್ಕಾದವನೇ ನೆಂಟ' ಎಂಬಂತೆ ಅಪರಿಚಿತರಿಂದ ಸಹಾಯ ದೊರೆಯುವುದು. ಕೆಲವು ಗ್ರಹ ಸಂಯೋಗಗಳು ಉತ್ತಮವಿದ್ದು, ಅಂದುಕೊಂಡ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಪುಣ್ಯ ಕಾರ್ಯಗಳಲ್ಲಿ ಆಸಕ್ತಿ ತೋರುವಿರಿ. ನಿಮ್ಮ ರಾಶಿಯಲ್ಲಿರುವ ಕುಜ ದುಡುಕು ಹಾಗೂ ಕೋಪ–ತಾಪಗಳಿಗೆ ಕಾರಣವೆನಿಸುವನು. ಸಟ್ಟಾ–ಲಾಟರಿಗಳು ಜಯವನ್ನು ತರದು.

ಶ್ರೀರಾಮನಾಮ ಸ್ತುತಿ. ಶುಭ ಸಂಖ್ಯೆ–2.



ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಗುರುಕೃಪೆಯಿಂದ ಅಷ್ಟಮ ಶನಿ ಪ್ರಭಾವ ಕಡಿಮೆ ಆಗುವುದು. ವೈಯಕ್ತಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಅಂತ್ಯಗೊಳ್ಳಲಿವೆ. ನಿರೀಕ್ಷಿಸಿದಂತೆ ಹಣ ಕೈಸೇರಲಿದೆ. ಸರ್ಕಾರದ ಸಹಾಯ ದೊರೆತು ಅಭಿವೃದ್ಧಿಯ ಮಾರ್ಗ ತೆರೆದುಕೊಳ್ಳಲಿದೆ. ಹಳೆಯ ಕಾಯಿಲೆಗಳಿಂದ ಗುಣಮುಖರಾಗುವಿರಿ, ದೈಹಿಕ ಚಟುವಟಿಕೆಗಳು ಉಂಟಾಗುವುದು. ನ್ಯಾಯಾಲಯ ವಿಷಯಗಳು ನಿಮ್ಮ ಪರ ಇರದು.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–7.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ತಡವಾಗಿ ಶುಭ ಸಮಾಚಾರವೊಂದು ಬರಲಿದೆ. ಹೆಚ್ಚು ಹಣ ಕೈಗೆ ಬಂದಂತೆ ಹೆಚ್ಚು ಖರ್ಚುಗಳೂ ಒದಗಿ ಬರುತ್ತವೆ. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿಂದಾಗಿ ಮನಃಶಾಂತಿಗಾಗಿ ಪರದಾಡುವಿರಿ. ಹೆಚ್ಚಿನ ಗ್ರಹಗಳು ನಿಮ್ಮ ಸಹಾಯಕ್ಕಿಲ್ಲ. ಯುಗಾದಿ ಜೂಜು ದುಬಾರಿಯಾದೀತು. ದುಷ್ಟ ಜನರು ನಿಮ್ಮ ಮೇಲೆ ಪ್ರಭಾವ ಬೀರುವರು. ವಾರಾಂತ್ಯಕ್ಕೆ ಗುರುಹಿರಿಯರ ದರ್ಶನ ನೆಮ್ಮದಿ ತರುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–8.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನಿಮ್ಮ ಯೋಜನೆಗಳು ಪ್ರತಿಫಲ ನೀಡುವ ಸಮಯ ಸನ್ನಿಹಿತವಾಗಿದೆ. ಧನ ಸಂಚಯವಾಗಿ ಸದ್ವಿನಿಯೋಗವಾಗಲಿದೆ. ನೆರೆಹೊರೆಯವರ ಆದರಾಭಿಮಾನಿಗಳಿಗೆ ಭಾಜನರಾಗುವಿರಿ. ಉತ್ತಮ ಭೋಜನ, ಸ್ತ್ರೀ ಸಂಗಗಳು ಲಭ್ಯವಾಗಲಿದೆ. ಕೇತು–ರಾಹುಗಳು ಮಾರಕವಾಗಿದ್ದು ದುರ್ಜನರ ಸಹವಾಸಗಳಿಂದ ದೂರವಿದ್ದರೆ ಒಳಿತು, ಅನ್ಯಥಾ ಪೊಲೀಸ್ ಠಾಣೆಗೆ ಹೋದೀತು. ಆತುರದ ವಾಹನ ಚಾಲನೆ ಮುಳುವಾಗುವುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವೃತ್ತಿ ಸ್ಥಳದಲ್ಲಿ ಒತ್ತಡ ಹಾಗೂ ಜವಾಬ್ದಾರಿಗಳು ಹೆಚ್ಚಾಗುವುದು. ಹಲವು ಮೂಲಗಳಿಂದ ಹಣ ಗಳಿಕೆಯಾದರೂ ಮನಸ್ಸಿಗೆ ನೆಮ್ಮದಿ ಇರದು. ರಾಜಕಾರಣಿಗಳಿಗೆ ಅವರ ಶತ್ರುಗಳು ಮೇಲುಗೈ ಸಾಧಿಸುವರು. ಸತಿ–ಸುತರಲ್ಲಿ ಸೌಹಾರ್ದತೆಯ ಕೊರತೆ. ಮನೆಯಲ್ಲಿ ಹಿರಿಯರ ಸ್ವಾಸ್ಥ್ಯದ ಬಗ್ಗೆ ಗಮನಹರಿಸಿ. ವಾರಾಂತ್ಯಕ್ಕೆ ಚಂದ್ರನ ಕೃಪೆಯಿಂದ ಧನ–ಕನಕ ವಸ್ತು ಪ್ರಾಪ್ತಿ, ಗೃಹ ಸುಖ, ಸ್ತ್ರೀ ಸುಖಗಳ ಪ್ರಾಪ್ತಿ.

ಶ್ರೀ ಅಯ್ಯಪ್ಪ ಧ್ಯಾನ. ಶುಭ ಸಂಖ್ಯೆ–9.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಿತ್ತ ಲಾಭ, ಸುಖ–ಸಂತೋಷ, ಉತ್ತಮ ಭೋಜನ. ಶಯನ ಸುಖಾದಿಗಳ ಪ್ರಾಪ್ತಿ. ಮನಸ್ಸು ಪ್ರಫುಲ್ಲವಾಗಿರುತ್ತದೆ. ಯತ್ನ ಕಾರ್ಯಗಳಲ್ಲಿ ಪ್ರತಿಸ್ಪರ್ಧಿಗಳು ಹಿಂದೆ ಸರಿಯುವರು. ಪ್ರಯಾಣಗಳಿಂದಲೂ, ಸರ್ಕಾರದಿಂದಲೂ ಪ್ರತಿಫಲಗಳುಂಟು. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಉಂಟಾಗುವುದು. ದಾನ, ಧರ್ಮ ಪ್ರವೃತ್ತಿ, ಮಂಡಿ ನೋವು, ಸ್ನಾಯು ಸೆಳೆತ ಕಾಡಿಸಬಹುದು. ತಕ್ಷಣ ಚಿಕಿತ್ಸೆಯ ಅಗತ್ಯ ಉಂಟಾದೀತು.

ಶ್ರೀ ನೃಸಿಂಹ ಉಪಾಸನೆ. ಶುಭ ಸಂಖ್ಯೆ–4.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ವಸ್ತ್ರ ಭೋಜನ, ಶಯನ ಸುಖಗಳು ಉಂಟಾಗಲಿದೆ. ನಿಮ್ಮ ಯೋಜನೆಗಳು ನಿಧಾನವಾಗಿ ಆದರೂ ಪ್ರಗತಿಯ ಹಾದಿಯಲ್ಲಿ ಸಾಗುವುದು. ಕೃಷಿಕರಿಗೆ ಅಭಿವೃದ್ಧಿ ಹಾಗೂ ಫಸಲಿಗೆ ಉತ್ತಮ ಬೆಲೆ ದೊರೆಯುವುದು. ನೂತನ ವ್ಯವಹಾರಗಳಲ್ಲಿ ಲಾಭ–ನಷ್ಟ ಸಮತ್ವ ಕಂಡು ಬರುತ್ತದೆ. ಬೃಹತ್ ಉದ್ದಿಮೆದಾರರಿಗೆ ಕಾರ್ಮಿಕರ ಅಸಹಕಾರದಿಂದ ನಷ್ಟ ಸಂಭವ. ಆರೋಗ್ಯವೂ ಅಷ್ಟಕಷ್ಟೆ.

ಶ್ರೀ ದತ್ತಾತ್ರೇಯ ದರ್ಶನ. ಶುಭ ಸಂಖ್ಯೆ–8.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಯಿಂದ ಕಡೆಯವರೆಗೆ ಚಂದ್ರನದೇ ಪಾರುಪತ್ಯ. ಮನೆಯಲ್ಲಿ ಸಡಗರ ಸಂಭ್ರಮಗಳು. ಮತ್ಸ್ಯೋದ್ಯಮ ಹಾಗೂ ಕ್ಷೀರ ಜನ್ಯ ವಸ್ತು ವ್ಯಾಪಾರಿಗಳಿಗೆ ಧಾರಾಳ ಧನ ಲಾಭವಾಗುವುದು. ಸಹೋದರರ ಅಸಹಕಾರದಿಂದ ಮನೆಯಲ್ಲಿ ಅಶಾಂತಿ. ಕುಟುಂಬದಲ್ಲಿ ಉಂಟಾಗುವ ಒಡಕುಗಳು ಮನೆಯೊಳಗೇ ಇತ್ಯರ್ಥ ಮಾಡಿಕೊಳ್ಳಿ. ವಾರಾಂತ್ಯಕ್ಕೆ ಸಂಸಾರ ಸಮೇತ ನಿಸರ್ಗಧಾಮ ಭೇಟಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–6.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಚಾಣಕ್ಯತೆಯಿಂದ ದೈನಂದಿನ ಕೆಲಸ ಕಾರ್ಯಗಳು ಸುಗಮವಾಗಿ ಮುಂದುವರೆಯುವುದು. ವ್ಯಾಪಾರ ವ್ಯವಹಾರಗಳು ಚೆನ್ನಾಗಿ ನಡೆದು ಧನ ಸಂಗ್ರಹವಾಗುವುದು. ವಾಮ ಮಾರ್ಗದಿಂದಲೂ ಹಣ ಬರುವುದು. ಮನೆಯಲ್ಲಿ ಮಂಗಳ ಕಾರ್ಯ ನಡೆದು ತೋರಣ ಕಟ್ಟುವ ಪ್ರಸಂಗ ಬರುವ ಸಾಧ್ಯತೆ ಇದೆ. ಹಲವರಿಗೆ ವಿದೇಶಕ್ಕೆ ಪ್ರಯಾಣ ಬೆಳೆಸುವ ಯೋಗವಿದೆ. ಆರೋಗ್ಯದ ಬಗ್ಗೆ ಅಲಕ್ಷ್ಯ ಬೇಡ.

ಶ್ರೀ ಗುರುನಮನ. ಶುಭ ಸಂಖ್ಯೆ–3.




ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆರಂಭದಲ್ಲಿ ವೃತ್ತಿ ಸ್ಥಳದಲ್ಲಿ ಅತಿಯಾದ ಕಾರ್ಯಭಾರ ಹಾಗೂ ಒತ್ತಡವಿರುತ್ತದೆ. ಚತುರರಾದ ನೀವು ಎಲ್ಲವನ್ನೂ ಸ್ಫೂರ್ತಿಯಿಂದ ನಿಭಾಯಿಸುವಿರಿ. ವಾರಮಧ್ಯೆ ಧನ–ಧಾನ್ಯ ಲಾಭ, ಸುಭೋಜನ, ಇಷ್ಟ ಬಂಧು ಮಿತ್ರರ ಮಿಲನ. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ಕುಟುಂಬ ಸದಸ್ಯರಲ್ಲಿ ಒಡಕು ಮೂಡದಂತೆ ವ್ಯವಹರಿಸಿರಿ. ವಾರದ ಕಡೆಗೆ ಧಾರ್ಮಿಕ ಕಾರ್ಯಗಳಲ್ಲಿ ಭಾಗಿತ್ವ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ –2

ಯುವ ರಾಜಕಾರಣಿಗಳಿಗೆ ಧ್ರುವನಾರಾಯಣ್ ಮಾದರಿ

'ಅಜಾತಶತ್ರು ಧ್ರುವನಾರಾಯಣ ನುಡಿ-ನಮನ'ದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ, ಮಾ.18– ಸರಳ ವ್ಯಕ್ತಿತ್ವದ ಆರ್.ಧ್ರುವನಾರಾಯಣ ಅವರು ಶಾಸಕ ಮತ್ತು ಸಂಸದರಾಗಿ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ, ಅಭಿವೃದ್ಧಿಗಾಗಿ ಹಗಲಿರುಳು ದುಡಿಯುತ್ತಿದ್ದರು. ಎಲ್ಲಾ ಸಮುದಾಯ ಮತ್ತು ರಾಜಕೀಯ ಪಕ್ಷಗಳೊಂದಿಗೆ ಸಮನ್ವಯತೆ ಕಾಯ್ದುಕೊಂಡಿದ್ದ ಧ್ರುವನಾರಾಯಣ ಅವರ ರಾಜಕಾರಣ ಯುವ ರಾಜಕಾರಣಿಗಳಿಗೆ ಎಂದೆಂದಿಗೂ ಮಾದರಿ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ದಲಿತ ಸಂಘಟನೆಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ 'ಅಜಾತಶತ್ರು ಧ್ರುವನಾರಾಯಣ ನುಡಿ–ನಮನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧ್ರುವನಾರಾಯಣ್ ಅವರು ಸಂತೇಮರಳ್ಳಿ ಕ್ಷೇತ್ರದಲ್ಲಿ ಒಂದು ಮತದ ಅಂತರದಲ್ಲಿ ಗೆಲ್ಲುವ ಮೂಲಕ ರಾಜ್ಯದಲ್ಲಿ ವಿಖ್ಯಾತಿಯಾದರು ಎಂದರು.

ನಾನು ಶಾಸಕನಾದ ಆರಂಭದಲ್ಲಿ ಸಂಸದರಾಗಿದ್ದ ಧ್ರುವನಾರಾಯಣ್ ಅವರೊಂದಿಗೆ ಕೆಲಸ ಮಾಡುವ ಅವಕಾಶವೂ ಸಿಕ್ಕಿತ್ತು. ಅವರ ಕಾರ್ಯವೈಖರಿ ನನಗೆ ಮಾರ್ಗದರ್ಶನದಂತಿತ್ತು. ಅವರ ಹಠಾತ್ ನಿಧನವನ್ನು ಯಾರೂ ನಿರೀಕ್ಷಿಸಿರಲಿಲ್ಲ. ಅವರ ಅಗಲಿಕೆ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ತುಂಬಲಾರದ ನಷ್ಟ ಎಂದರು.

ಬಹುಜನ ಸಮಾಜವಾದಿ ಪಕ್ಷದ ಜಿಲ್ಲಾಧ್ಯಕ್ಷ ಬಿ.ಆರ್.ಪುಟ್ಟಸ್ವಾಮಿ ಮಾತನಾಡಿ, ರಾಜಕೀಯ ಪಕ್ಷದಲ್ಲಿದ್ದರೂ, ಸಮಾಜದ ವ್ಯಕ್ತಿಯಾಗಿ ಸೇವಾ ಮನೋಭಾವದಿಂದ ದುಡಿಯುತ್ತಿದ್ದ ಧ್ರುವನಾರಾಯಣ ಅವರು ಧಮ್ಮದ ವಿಚಾರದಲ್ಲೂ ಅಪಾರ ಕೊಡುಗೆ ನೀಡಿದ್ದಾರೆ. ಭಂತೆ ಅವರ ಜೊತೆಗೆ ಭೇಟಿಯಾಗುತ್ತಿದ್ದ ಪ್ರತಿಯೊಬ್ಬರನ್ನೂ ಗೌರವದಿಂದಲೇ ನೋಡುತ್ತಿದ್ದರು. ಅವರು ಭೌತಿಕವಾಗಿ ಇಲ್ಲದಿದ್ದರೂ ಎಲ್ಲರ ಮನಸ್ಸಿನಲ್ಲೂ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ನುಡಿ ನಮನ ಸಲ್ಲಿಸಿದರು.

ಜಿಪಂ ಮಾಜಿ ಅಧ್ಯಕ್ಷಎಸ್.ಎನ್.ಸಿದ್ಧಾರ್ಥ, ಮಾಜಿ ಸದಸ್ಯ ಮಂಜುನಾಥನ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ವೀರಶೈವ ಮಹಾಸಭಾ ಅಧ್ಯಕ್ಷ ತೋ.ಮಹದೇವಸ್ವಾಮಿ, ಪುರಸಭೆ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಎನ್.ಸೋಮಣ್ಣ, ಬಾಬೂಜಿ ಸಂಘದ ಅಧ್ಯಕ್ಷ ಪುಟ್ಟಯ್ಯ, ನಾಯಕರ ಸಂಘದ ಅಧ್ಯಕ್ಷ ಚಿಕ್ಕಯ್ಯ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಎಸ್ಸಿ/ಎಸ್ಟಿ ಹಿತ ರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ಪಿಎಸಿಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ಒಕ್ಕೂಟದ ಸಂ.ಸಂಚಾಲಕ ಕೆ.ಎನ್.ಪ್ರಭುಸ್ವಾಮಿ, ಎಸ್.ನಂಜುಂಡಯ್ಯ, ನಿಂಗರಾಜು, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮಾರಯ್ಯ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ, ಮಾಜಿ ಸದಸ್ಯರಾದ ರಾಮ ಲಿಂಗಯ್ಯ, ಬಸವರಾಜು, ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯ ಅಮ್ಜದ್ ಖಾನ್, ಮುಖಂಡರಾದ ಕರಾಟೆ ಸಿದ್ದರಾಜು, ಬಿ.ಮಹದೇವಸ್ವಾಮಿ, ನಾಗೇಂದ್ರ, ಸಾಗರ್, ಅಣ್ಣಯ್ಯಸ್ವಾಮಿ ಹಾಗೂ ಇನ್ನಿತರರಿದ್ದರು.

ನೂತನ ಕಟ್ಟಡಕ್ಕೆ ಧ್ರುವನಾರಾಯಣ್ ಹೆಸರಿಡಿ

ಅಂಬೇಡ್ಕರ್ ಭವನ ಸಮುಚ್ಛಯದ ಮಿನಿ ಸಭಾಂಗಣ ಹಾಗೂ ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ ಸಂಸದರಾಗಿದ್ದ ಆರ್. ಧ್ರುವನಾರಾಯಣ ಅವರು ಪ್ರವಾಸೋದ್ಯಮ ಇಲಾಖೆಯಿಂದ 1.5 ಕೋಟಿ ಅನುದಾನ ಮಂಜೂರು ಮಾಡಿಸಿದ್ದರು. ಕಾಮಗಾರಿ ಪೂರ್ಣಗೊಂಡಿರುವುದರಿಂದ ನೂತನ ಕಟ್ಟಡಕ್ಕೆ ಧ್ರುವನಾರಾಯಣ ಸ್ಮರಣಾರ್ಥ ಅವರ ಹೆಸರನ್ನು ನಾಮಕರಣ ಮಾಡಬೇಕು. ಈ ಬಗ್ಗೆ ಜನಪ್ರತಿನಿಧಿಗಳು ಮತ್ತು ಅಂಬೇಡ್ಕರ್ ಅಭಿವೃದ್ಧಿ ಸಂಘ ನಿರ್ಣಯ ಕೈಗೊಳ್ಳಬೇಕು.

- **ಎಸ್.ಆರ್.ಶಶಿಕಾಂತ್ ಸೋಸಲೆ,** ಸಂಚಾಲಕ, ದಲಿತ ಸಂಘಟನೆಗಳ ಒಕ್ಕೂಟ.

ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ



ಹನಗೋಡು, ಮಾ.18– ಜಿಪಂ ಹಾಗೂ ಹಾರಂಗಿ ಇಲಾಖೆ ವತಿಯಿಂದ ಮಂಜೂರಾಗಿರುವ 59 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಶನಿವಾರ ಚಾಲನೆ ನೀಡಿದರು.

ಇಲ್ಲಿನ ರಾಮೇನಹಳ್ಳಿ ಗ್ರಾಮದಲ್ಲಿ ಜಿಪಂನಿಂದ 49 ಲಕ್ಷ ರೂ., ಹಾರಂಗಿ ಇಲಾಖೆಯಿಂದ 10 ಲಕ್ಷ ಸೇರಿ ಒಟ್ಟು 59 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಮಂಜುನಾಥ್, ಕಳೆದ ತಿಂಗಳು ಓಂಕಾರೇಶ್ವರ ಜಾತ್ರೆಗೆ ಬಂದ ವೇಳೆ ಗ್ರಾಮದ ಮಹಿಳೆಯರು ಹಾಗೂ ಜನತೆಗೆ ನೀಡಿದ ಭರವಸೆಯಂತೆ ಈಗ ಸರ್ಕಾರ ನೀಡಿರುವ ಅಲ್ಪ ಅನುದಾನದಲ್ಲೇ ತಾಲೂಕಿನ ಎಲ್ಲಾ ಗ್ರಾಮಗಳಿಗೂ ಆದ್ಯತೆ ಮೇರೆಗೆ ಅನುದಾನ ಹಂಚಿಕೆ, ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಈ ಬಾರಿ ನಾನು ಗೆಲುವು ಸಾಧಿಸಿದ್ದಲ್ಲಿ ಓಂಕಾರೇಶ್ವರ ಬೆಟ್ಟವನ್ನು ತಿರುಪತಿ ಮಾದರಿ ಮೆಟ್ಟಿಲು ನಿರ್ಮಿಸುವುದಾಗಿ ನಾನು ಹರಕೆ ಹೊತ್ತಿದ್ದು ಭಗವಂತನ ಆಶೀರ್ವಾದ ಕೂಡ ನನಗೆ ಸಿಕ್ಕಿದೆ ಎಂದರು.

ಗ್ರಾಮದ ಮುಖಂಡ, ಓಂಕಾರೇಶ್ವರ ದೇವಾಲಯ ಟ್ರಸ್ಟ್ ಅಧ್ಯಕ್ಷ ಶಿವಾನಂದ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಮದ ಯಜಮಾನರಾದ ಸಿದ್ದಲಿಂಗೇಗೌಡ, ರಾಮಚಂದ್ರು, ಆನಂದ, ಗ್ರಾಪಂ ಸದಸ್ಯರಾದ ಸುಂದರಮ್ಮ, ನಟರಾಜ್, ಮುಖಂಡರಾದ ಸುಬ್ಬೇಗೌಡ, ಅಶೋಕ, ಕುಮಾರ, ಮಹೇಶ್, ಉಮೇಶ್, ಪ್ರಭಾಕರ್, ಬಸವರಾಜ್, ರವಿ ಪ್ರಸನ್ನ ಸೇರಿದಂತೆ ಇತರರಿದ್ದರು.

ಮಹಿಳಾ ಮೀಸಲಾತಿ ಮೋದಿ ಸರ್ಕಾರದಿಂದ ಮಾತ್ರ ಸಾಧ್ಯ

ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್



ಕೆ.ಆರ್.ನಗರ, ಮಾ.17– ಸಂಸತ್ ಹಾಗೂ ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕೊಡಲು ಪ್ರಧಾನಿ ಮೋದಿ ಸರ್ಕಾರದಿಂದ ಮಾತ್ರ ಸಾಧ್ಯ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ತಿಳಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಮಹಿಳಾ ಮೋರ್ಚಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಗ್ರಾಪಂ, ತಾಪಂ ಹಾಗೂ ಜಿಪಂ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಇದ್ದು, ಅದು ಮುಂದಿನ ದಿನಗಳಲ್ಲಿ ಬಿಜೆಪಿ ಸರ್ಕಾರದಿಂದ ವಿಧಾನಸಭೆ ಮತ್ತು ಸಂಸತ್ತಿಗೂ ವಿಸ್ತರಣೆಯಾಗಲಿದೆ ಎಂದರು.

ಇಂದು ನಾರಿ ಬದಲಾಗಿದ್ದಾಳೆ. ಸ್ವಂತಿಕೆ, ಯೋಚನೆ ಮಾಡುವ ಶಕ್ತಿ, ಯಾರಿಗೆ ಮತ ನೀಡಬೇಕು ಎಂಬುದು ಗೊತ್ತಿದೆ. ಸಮಾಜದಲ್ಲಿ ಮಹಿಳೆಯರಿಗೆ ಮಾನ್ಯತೆ ಸಿಕ್ಕಿದೆ. ಇದಕ್ಕೆ ಕಾರಣ ನಮ್ಮ ನಾಯಕ ಬಿ.ಎಸ್.ಯಡಿಯೂರಪ್ಪನವರು, ಅವರ ಅಧಿಕಾರವಧಿಯಲ್ಲಿ ಭಾಗ್ಯಲಕ್ಷ್ಮಿ ಯೋಜನೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಸೇರಿದಂತೆ ಹಲವು ಜನಪ್ರಿಯ ಕಾರ್ಯಕ್ರಮ ನೀಡಿದ್ದಾರೆ ಎಂದರು.

ಹೆಣ್ಣು ಕಲಿಯಬೇಕು. ಕಲಿಯದಿದ್ದರೇ ಕುಟುಂಬ ಕಲಿಯಲ್ಲ ಎಂಬ ಉದಾಹರಣೆಗಳಿವೆ. ಮಹಿಳಾ ಸಮಾನತೆ, ಭ್ರಷ್ಟಾಚಾರ ಮುಕ್ತ ಆಡಳಿತ, ಬಡತನ ನಿರ್ಮೂಲನೆ, ರಾಜ್ಯ ಮತ್ತು ದೇಶದ ಸಮಗ್ರ ಅಭಿವೃದ್ಧಿಗಾಗಿ ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಬೆಂಬಲಿಸಿ ಎಂದು ಮನವಿ ಮಾಡಿದರು.

ಕೆ.ಆರ್.ನಗರದಲ್ಲಿ ಹಳೇ ನೀರು ಹೋಗಿ ಹೊಸ ನೀರು ಬರಬೇಕು. ಶಾಸಕ ಸಾ.ರಾ.ಮಹೇಶ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರನ್ನು ಬಿಟ್ಟು ನಮ್ಮ ಬಿಜೆಪಿ ಅಭ್ಯರ್ಥಿ ಬೆಂಬಲಿಸುವಂತೆ ಕರೆ ನೀಡಿದರು.

ರಾಜ್ಯ ಬಿಜೆಪಿ ಶಿಸ್ತು ಸಮಿತಿ ಸದಸ್ಯೆ ರೀನಾ ಪ್ರಕಾಶ್, ಬಿಜೆಪಿ ರಾಜ್ಯ ವಕ್ತಾರೆ ಅಶ್ವಿನಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸಗೌಡ, ಜಿಲ್ಲಾ ಮಾಧ್ಯಮ ಪ್ರಮುಖ್ ಹೆಚ್.ಪಿ.ಗೋಪಾಲ್, ಜಿಲ್ಲಾ ಮಹಿಳಾ ಮೋರ್ಚಾಧ್ಯಕ್ಷೆ ಮಂಜುಳಾ ಮಾತನಾಡಿದರು.

ಈ ವೇಳೆ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಂದಿನಿ, ರಾಜ್ಯ ಪ್ರವಾಸೋದ್ಯಮ ಇಲಾಖೆ ನಿರ್ದೇಶಕಿ ಪ್ರಫುಲ್ಲಾ ಮಲ್ಲಾಡಿ, ಜಿಲ್ಲಾ ಉಪಾಧ್ಯಕ್ಷ ವೆಂಕಟೇಶ್, ತಾಲೂಕು ಅಧ್ಯಕ್ಷೆ ದಾಕ್ಷಾಯಿಣಿ, ಮಂಜು, ಜಿಪಂ ಮಾಜಿ ಸದಸ್ಯೆ ನಳಿನಾಕ್ಷಿ, ಪುರಸಭಾ ಸದಸ್ಯರಾದ ಕೆ.ಬಿ.ವೀಣಾ, ಜಿ.ಪಿ.ಮಂಜು, ಉಮಾಶಂಕರ್, ಮಾಧ್ಯಮ ಸಂಚಾಲಕ ನಾಗೇಶ್ ಸೇರಿದಂತೆ ಇನ್ನಿತರರಿದ್ದರು.

ಲಕ್ಷ್ಮಿದೇವಿ ದೇವಾಲಯ ಉದ್ಘಾಟನೆ



ಚುಂಚನಕಟ್ಟೆ ಮಾ.18– ದೇವರಲ್ಲಿ ನಾವು ಏನಾದರೂ ಬೇಡುತ್ತೇವೆ. ದೇವರು ಕೊಡಬಹುದು. ಇಲ್ಲ ಬಿಡಬಹುದು. ಆದರೆ ತಂದೆ ತಾಯಿ ಎಷ್ಟೇ ಕಷ್ಟವಾದರೂ, ಮಕ್ಕಳ ಇಷ್ಟ ಕಷ್ಟಗಳನ್ನು ತೀರಿಸುತ್ತಾರೆ. ಹಾಗಾಗಿ ಅವರನ್ನು ಎಂದೂ ಮರೆಯಬಾರದು ಎಂದು ಶಾಸಕ ಸಾ.ರಾ.ಮಹೇಶ್ ಹೇಳಿದರು. ಸಾಲಿಗ್ರಾಮ ತಾಲೂಕಿನ ಹೊನ್ನೇನ ಹಳ್ಳಿಯಲ್ಲಿ ಲಕ್ಷ್ಮಿದೇವಿ ದೇವಾಲಯ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಹಿಂದೂ, ಮುಸ್ಲಿಂ ಬಾಂಧವ್ಯ ಕಾಣುತ್ತಿರುವುದು ಉತ್ತಮ ಬೆಳವಣಿಗೆ. ನಾವೆಲ್ಲರೂ ಒಂದೇ ತಾಯಿ ಮಕ್ಕಳು ಎಂದು ತಿಳಿದು ಜೀವಿಸಿದಾಗ ಗ್ರಾಮಗಳು ಅಭಿವೃದ್ಧಿಯಾಗಲು ಸಾಧ್ಯ ಎಂದರು.

ದೇವಾಲಯಕ್ಕೆ ನಾನು 35ಲಕ್ಷ ರೂ. ಅನುದಾನ ನೀಡಿದ್ದು, ಈ ಗ್ರಾಮದ ಅಭಿವೃದ್ಧಿಗಾಗಿ ಈಗಾಗಲೇ ಏತ ನೀರಾವರಿ ಯೋಜನೆ, ಕುಡಿಯುವ ನೀರು, ರಸ್ತೆ ಸೇರಿದಂತೆ ವಿವಿಧ ಕಾಮಗಾರಿಗಳು ಆರಂಭವಾಗಿದೆ. ಈ ಭಾಗದ ಬಹುದಿನದ ಬೇಡಿಕೆಯಾಗಿದ್ದ ಚಿಕ್ಕನಾಯಕನಹಳ್ಳಿ–ಹೊನ್ನೇನಹಳ್ಳಿ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ನೀಡಲಾಗಿದೆ ಎಂದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಕಿಜರ್ ಪಾಷ, ಸದಸ್ಯರಾದ ರಾಧಾ, ಲತಾ, ಯಜಮಾನರಾದ ಮರೀಗೌಡ, ಚಂದ್ರು, ತಾಪಂ ಮಾಜಿ ಸದಸ್ಯೆ ಹೇಮಾವತಿ, ಯುವ ಜೆಡಿಎಸ್ ನಗರ ಕಾರ್ಯದರ್ಶಿ ಹರ್ಷ, ದೇವಾಲಯ ಸಮಿತಿ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಆದರ್ಶ ಶಾಲೆ ಪ್ರವೇಶ ಪರೀಕ್ಷೆ

ಹೆಚ್.ಡಿ.ಕೋಟೆ, ಮಾ.18– 2023–24ನೇ ಸಾಲಿನ ಪಟ್ಟಣದ ಸರ್ಕಾರಿ ಆದರ್ಶ ಶಾಲೆ 6ನೇ ತರಗತಿ ಪ್ರವೇಶಕ್ಕೆ ಮಾ.26ರಂದು ಬೆಳಗ್ಗೆ 10.30ರಿಂದ 1.30ರವರೆಗೆ ಪರೀಕ್ಷೆ ನಡೆಯಲಿದೆ ಎಂದು ಮುಖ್ಯ ಶಿಕ್ಷಕಿ ಜ್ಯೋತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ವೆಬ್‌ಸೈಟ್: www.vidyavahini.kar.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿಗೆ 9900717959, 9880867318ಗೆ ಸಂಪರ್ಕಿಸುವಂತೆ ಮನವಿ ಮಾಡಿದ್ದಾರೆ.

ಸರ್ಕಾರ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಮುಂದಾಗಲಿ

ವಿಧಾನ ಪರಿಷತ್ ಸದಸ್ಯ ಮಂಜೇಗೌಡ



ಹೆಚ್.ಡಿ.ಕೋಟೆ, ಮಾ.18– ಸರ್ಕಾರ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುವ ಜೊತೆಗೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಮುಂದಾಗಬೇಕು. ಆ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ತಾಲೂಕಿನ ಬೆಟ್ಟದಬೀಡು ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮಸ್ಥರು ಬೆಟ್ಟದ ಬೀಡುವಿನಿಂದ ಜೊಲ್ಲಯ್ಯನ ಗುಳ್ಳಿಗೆ ಹೋಗುವ ರಸ್ತೆ ಹದಗೆಟ್ಟಿದೆ. ಈ ರಸ್ತೆಯನ್ನು ತಮ್ಮ ಅನುದಾನದಲ್ಲಿ ಅಭಿವೃದ್ಧಿ ಪಡಿಸಿಕೊಡುವಂತೆ ಮನವಿ ಮಾಡಿದ ಮೇರೆಗೆ ನಾನು ವಿಧಾನ ಪರಿಷತ್ ಸದಸ್ಯರ ಅನುದಾನದಲ್ಲಿ 10 ಲಕ್ಷ ಅನುದಾನ ಬಿಡುಗಡೆ ಮಾಡಿದ್ದೇನೆ. ಗ್ರಾಮೀಣ ರಸ್ತೆಗಳು ಅಭಿವೃದ್ಧಿಯಾದರೆ, ರೈತರ ಬದುಕು ಹಸನಾಗುತ್ತದೆ ಎಂದ ಅವರು ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದರು.


ಇದೇ ವೇಳೆ ಬೆಟ್ಟದಬೀಡು ನಮ್ಮದೇ ಗ್ರಾಮ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಿ ಕುಮಾರಣ್ಣನ ಕೈ ಬಲಪಡಿಸಬೇಕು ಎಂದರು.

ಈ ಸಂದರ್ಭ ಕುಳ್ಳೇಗೌಡ, ಬಿ.ಕೆ. ರಾಮು, ವಿದ್ಯಾಸಾಗರ, ಸ್ವಾಮಿಗೌಡ, ನೀಲೇಗೌಡ, ರಾಮು, ವೆಂಕಟರಾಮು, ಮಂಜೇಗೌಡರ ಆಪ್ತ ಸಹಾಯಕ ಹೆಚ್.ಎ.ಸುರೇಂದ್ರ, ಅನಿಲ್, ದಿನೇಶ್ ಗೌಡ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಇಂದು ತಿ.ನರಸೀಪುರ ಕ್ಷೇತ್ರದಲ್ಲಿ ಪಂಚರತ್ನ ಯಾತ್ರೆ

ತಿ.ನರಸೀಪುರ ಮಾ.18– ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಮಾ.19ರಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಪಂಚರತ್ನ ಯಾತ್ರೆ ಹಾಗೂ ಬೃಹತ್ ಸಮಾವೇಶ ನಡೆಯಲಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದ್ದಾರೆ.

ಕಾರ್ಯಕ್ರಮದ ಯಶಸ್ಸಿಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ತಾಲೂಕಿನ ಗಡಿಗ್ರಾಮ ಮಡವಾಡಿ ಗ್ರಾಮಕ್ಕೆ ಬೆಳಗ್ಗೆ 10 ಗಂಟೆಗೆ ಆಗಮಿಸುವ ಪಂಚರತ್ನ ರಥಯಾತ್ರೆ ಕಾವೇರಿಪುರ ಮಾರ್ಗವಾಗಿ ತಲಕಾಡು ಗ್ರಾಮಕ್ಕೆ ಆಗಮಿಸಲಿದೆ. ನಂತರ ಮಾದಾಪುರ, ಕುರುಬೂರು ಮಾರ್ಗವಾಗಿ ಸಭೆ ನಡೆಯುವ ಮೂಗೂರು ಗ್ರಾಮ ತಲುಪಲಿದೆ. ಬಳಿಕ ವಾಟಾಳು ಮಾರ್ಗವಾಗಿ ನರಸೀಪುರ ಟೌನ್, ಸೋಸಲೆ ಗ್ರಾಮ, ಬನ್ನೂರು ಸಂತೇಮಾಳ ತಲುಪಿ ಬೃಹತ್ ಬಹಿರಂಗ ಸಭೆ ನಡೆಯುವ ಫುಟ್ಬಾಲ್ ಕ್ರೀಡಾಂಗಣದಲ್ಲಿ ಯಾತ್ರೆ ಕೊನೆಗೊಳ್ಳಲಿದೆ. ಬಿ.ಸೀಹಳ್ಳಿ ಗ್ರಾಮದಲ್ಲಿ ಗಣ್ಯರೆಲ್ಲರೂ ವಾಸ್ತವ್ಯ ಹೂಡಲಿದ್ದಾರೆ ಎಂದು ತಿಳಿಸಿದ್ದಾರೆ.



ಅಧಿಕಾರಿಗಳು ಚಂಗೌಡನಹಳ್ಳಿಗೆ ಮೂಲ ಸೌಲಭ್ಯ ಕಲ್ಪಿಸಿ

ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದಲ್ಲಿ ಗ್ರಾಮಸ್ಥರ ಒತ್ತಾಯ



ಸರಗೂರು, ಮಾ.18– ಸೌಲಭ್ಯದಿಂದ ವಂಚಿತವಾಗಿರುವ ತಾಲೂಕಿನ ಚಂಗೌಡನಹಳ್ಳಿ ಗ್ರಾಮಕ್ಕೆ ಮೂಲ ಸೌಲಭ್ಯ ಕಲ್ಪಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ತಾಲೂಕಿನ ಚಂಗೌಡನಹಳ್ಳಿಯಲ್ಲಿ ತಹಸೀಲ್ದಾರ್ ಪರಶಿವಮೂರ್ತಿ ನೇತೃತ್ವದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮಸ್ಥರು, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ಗ್ರಾಮಕ್ಕೆ ಬಸ್ ಸೌಲಭ್ಯವಿಲ್ಲ. ಗ್ರಾಮಸ್ಥರು ಪಡಿತರ ತರಲು 4 ಕಿಮೀ ದೂರದ ಮುಳ್ಳೂರಿಗೆ ಹೋಗಬೇಕು. ಆರೋಗ್ಯ ಸೌಲಭ್ಯ ಪಡೆಯಲು ಹರಸಾಹಸ ಪಡಬೇಕಿದೆ ಎಂದು ದೂರಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಸಿಂಗೇಗೌಡ ಮಾತನಾಡಿ, ಸಾರಿಗೆ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಲು ಮೀನಾಮೇಷ ಎಣಿಸುತ್ತಿದ್ದಾರೆ. ಈ ಸಂಬಂಧ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಶಾಲಾ ಮಕ್ಕಳು, ಗರ್ಭಿಣಿ, ಬಾಣಂತಿಯರ ಅನುಕೂಲಕ್ಕಾಗಿ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಬೇಕು. ಪಡಿತರ ವಿತರಣೆಗೂ ಸೂಕ್ತ ಕ್ರಮವಹಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಪರಶಿವಮೂರ್ತಿ, ಬಸ್ ಸಮಸ್ಯೆಯಿಂದಾಗಿ ಹತ್ತಾರು ಸಮಸ್ಯೆಗಳು ಉದ್ಭವಿಸಲಿವೆ. ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರಲಿದೆ. ಡಿಪೋ ಮ್ಯಾನೇಜರ್ ಕಾರ್ಯಕ್ರಮಕ್ಕೆ ಗೈರು ಹಾಜರಾಗಿದ್ದು, ಈ ಸಂಬಂಧ ಅಧಿಕಾರಿಗಳ ಗಮನಕ್ಕೆ ತಂದು ಬಸ್ ಸೌಲಭ್ಯ ಕಲ್ಪಿಸಲು ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಆಹಾರ ಇಲಾಖಾಧಿಕಾರಿ ವೇದಕುಮಾರ್ ಮಾತನಾಡಿ, ಚಂಗೌಡನಹಳ್ಳಿ ಗ್ರಾಮಸ್ಥರು ಪಡಿತರ ಪಡೆಯಲು ದೂರದ ಮುಳ್ಳೂರು ಗ್ರಾಮಕ್ಕೆ ಹೋಗುತ್ತಿರುವುದು ಇಲಾಖೆ ಗಮನಕ್ಕೆ ಬಂದಿದ್ದು, ಈಗಾಗಲೇ ಇಲಾಖೆ ಪಡಿತರ ವಿತರಣೆ ಸಂಬಂಧ ಮೇಲಾಧಿಕಾರಿಗಳ ಗಮನಕ್ಕೆ ತಿಳಿಸಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮದಲ್ಲೇ ಪಡಿತರ ವಿತರಣೆಗೆ ಕ್ರಮವಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ, ಕೆರೆ ಒತ್ತುವರಿ ತೆರವು, ಗ್ರಾಮ ಠಾಣಾ ಜಾಗ ಗುರುತಿಸಿ, ಪಿಂಚಣಿ, ಸಂಧ್ಯಾ ಸುರಕ್ಷಾ ಯೋಜನೆ ಸೇರಿದಂತೆ ಹತ್ತಾರು ಸಮಸ್ಯೆಗಳ ಅರ್ಜಿಗಳು ಬಂದವು.

ಮುಳ್ಳೂರು ಗ್ರಾಪಂ ಅಧ್ಯಕ್ಷ ಗೋವಿಂದಾಚಾರ್, ಜೀವಿಕಾ ಮಹೇಶ್, ಪಿಡಿಓ ಹನುಮಯ್ಯ, ಗ್ರಾಮೀಣ ಮಹೇಶ್ ಮಾತನಾಡಿದರು. ಗ್ರಾಪಂ ಉಪಾಧ್ಯಕ್ಷೆ ಚಿನ್ನಮ್ಮ, ಸದಸ್ಯರಾದ ಬಿ.ಶಿವಣ್ಣ, ನೀಲಮ್ಮ ಶ್ರೀನಿವಾಸ್, ಎಪಿಎಂಸಿ ಕಾರ್ಯದರ್ಶಿ ವಸಂತಕುಮಾರ್, ಸರ್ವೆ ಇಲಾಖಾಧಿಕಾರಿ ಉಮೇಶ್, ನುಗು ವನ್ಯಜೀವಿ ವಲಯ ಅರಣ್ಯಾಧಿಕಾರಿ ಲಕ್ಷ್ಮಣ್, ಕೆಇಬಿ ಅಶೋಕ್, ಕೃಷಿ ಅಧಿಕಾರಿ ಮಹೇಶ್, ಆರ್‌ಐ ಮುಜೀಬ್, ಗ್ರಾಮ ಲೆಕ್ಕಿಗರಾದ ಕುಮಾರ್, ಉಷಾ, ಮಲರಾಜ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಸರ್ಕಾರಗಳ ಸಾಧನೆ ತಿಳಿಸಿ, ಪಕ್ಷ ಸಂಘಟಿಸಿ

ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ಮನವಿ



ಮಲ್ಲುಂಡಿ, ಮಾ.18– ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಗಳ ಸಾಧನೆಗಳನ್ನು ಪ್ರತಿ ಮನೆ ಮನೆಗೂ ತಿಳಿಸುವ ಮೂಲಕ ತಳಮಟ್ಟದಿಂದ ಪಕ್ಷ ಸಂಘಟಿಸಿ ಎಂದು ಕಾರ್ಯಕರ್ತರಿಗೆ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ತಿಳಿಸಿದರು.

ಇಲ್ಲಿಗೆ ಸಮೀಪದ ಹುರ ಗ್ರಾಮದಲ್ಲಿ ಆಯೋಜಿಸಿದ್ದ ಬೂತ್ ಮಟ್ಟದ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಹಾಗೂ ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದರು.

ಶಾಸಕ ಹರ್ಷವರ್ಧನ್ ಅವರು ತಮ್ಮ ಅಧಿಕಾರವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸಿದ್ದಾರೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿಗೆ ಪಣತೊಟ್ಟಿದ್ದಾರೆ. ಆದ್ದರಿಂದ ಕ್ಷೇತ್ರದ ಜನತೆ ಮತ್ತೊಮ್ಮೆ ಅವರಿಗೆ ಆಶೀರ್ವಾದ ಮಾಡುವ ಮೂಲಕ ತಮ್ಮ ಸೇವೆಗೆ ಅವಕಾಶ ಮಾಡಿಕೊಡಬೇಕು ಎಂದ ಅವರು, ಬಿಜೆಪಿ ಸರ್ಕಾರಗಳ ಜನಪರ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಜಿಲ್ಲಾ ಉಪಾಧ್ಯಕ್ಷ ಕೆಂಡಗಣ್ಣಪ್ಪ, ಗ್ರಾಪಂ ಅಧ್ಯಕ್ಷ ಚಂದ್ರು, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಶಕ್ತಿ ಕೇಂದ್ರದ ಅಧ್ಯಕ್ಷ ಮಹೇಶ್, ಶಿವರುದ್ರ ಸೇರಿದಂತೆ ಇತರರಿದ್ದರು.

ಭಾರೀ ಮಳೆ: ಲಕ್ಷಾಂತರ ರೂ. ನಷ್ಟ

ನಂಜನಗೂಡು, ಮಾ.18– ತಾಲೂಕಿನಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡು, ಅಪಾರ ನಷ್ಟ ಸಂಭವಿಸಿದೆ.



ತಾಲೂಕಿನ ಈರೇಗೌಡನಹುಂಡಿ ಗ್ರಾಮದಲ್ಲಿ ತೆಂಗಿನಮರ, ಬೃಹತ್ ಆಲದ ಮರ ವಿದ್ಯುತ್ ತಂತಿ ಮೇಲೆ ಬಿದ್ದು ವಿದ್ಯುತ್ ಕಂಬ ಮುರಿದಿದ್ದು, ಇದರಿಂದ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಅಲ್ಲದೇ ಹೊಸವೀಡು ಗ್ರಾಮದ ಶಿವಪ್ರಸಾದ್, ಲೋಕೇಶ, ಶಿವಣ್ಣ ಎಂಬುವರ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಬೆಳೆ ನೆಲಕಚ್ಚಿದ್ದು ಲಕ್ಷಾಂತರ ರೂ. ನಷ್ಟವಾಗಿದೆ.

ರೈತ ಶಿವಪ್ರಸಾದ್ ಮಾತನಾಡಿ, ಸಾಲ ಮಾಡಿ ಬೆಳೆದ ಬೆಳೆ ಒಂದೆಡೆ ಕಾಡು ಪ್ರಾಣಿಗಳ ಪಾಲಾದರೇ, ಇದೀಗ ಭಾರೀ ಬಿರುಗಾಳಿ ಮಳೆಗೆ ಫಸಲು ನಷ್ಟವಾಗಿದೆ. ಹೀಗಾಗಿ ತಾಲೂಕು ಆಡಳಿತ ಬೆಳೆ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ನಾರಾಯಣ ನಾಯಕ ನಿಧನ



ಸರಗೂರು, ಮಾ.18– ತಾಲೂಕಿನ ನೆಮ್ಮನಹಳ್ಳಿ ಗ್ರಾಮದ ನಿವಾಸಿ ನಾರಾಯಣ ನಾಯಕ(65) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ನೆಮ್ಮನಹಳ್ಳಿ ತೋಟದ ಮನೆಯಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.